# ಕರ್ನಾಟಕ ವಿಕಾಸ

ಡಿಸೆಂಬರ್ 2012
December

## ಸ್ವ ಉದ್ಯೋಗ ಕಾರ್ಯಕ್ರಮದ
## ಸ್ವ ಸಹಾಯ ಸಂಘಗಳು



## ಸಮೃದ್ಧಿಯ ಕಡೆಗೆ ಸ್ವಾಭಿಮಾನದ ನಡಿಗೆ




ದೇವನಹಳ್ಳಿ ತಾಲ್ಲೂಕಿನ ಅಣ್ಣೇಶ್ವರ ಗ್ರಾಮ ಪಂಚಾಯತ್‌ನ ವಿವಿಧ ಕಾಮಗಾರಿಗಳನ್ನು ಪರಿಶೀಲಿಸುತ್ತಿರುವ ಡಾ. ಇ.ವಿ. ರಮಣರೆಡ್ಡಿ, ಭಾ.ಆ.ಸೇ. ಕಾರ್ಯದರ್ಶಿಗಳು ಹಾಗೂ ವಿ. ರಶ್ಮಿ, ಭಾ.ಆ.ಸೇ. ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ. ಈ ಸಂದರ್ಭದಲ್ಲಿ ಇಲಾಖೆಯ ಇತರೆ ಅಧಿಕಾರಿಗಳು ಹಾಜರಿದ್ದರು.



ಡಿಸೆಂಬರ್ Dec. 2012
ಸಂಪುಟ VOLUME 54
ಸಂಚಿಕೆ ISSUE 1

# ಕರ್ನಾಟಕ ವಿಕಾಸ
KARNATAKA VIKAS

## ಈ ಸಂಚಿಕೆಯೊಳಗೆ




| | | |
|---|---|---|
| 5 | ಸಚಿವಾಲಯದಿಂದ ಸಂದೇಶ | – ಡಾ|| ಇ.ವಿ. ರಮಣ ರೆಡ್ಡಿ |
| 7 | ಬದುಕುವ ಮಾತು | – ಡಾ. ಪಾಟೀಲ ಪುಟ್ಟಪ್ಪ |
| 8 | ಕವಿಯ(ಕ್ಷ) ಪ್ರಶ್ನೆಗಳು | – ಉಮೇಶ್ ಹುಲಿಕುಂಟೆ |
| 9 | ಕಾವ್ಯ ವಿಕಾಸ | – ಜಿ. ವೆಂಕಟೇಶ್ |
| 10 | ಸ್ವ. ಉ. ಕಾರ್ಯಕ್ರಮ | |
| 14 | ಯಶೋಗಾಥೆ | – ನಿಂಗಯ್ಯ ಟಿ. |
| 31 | ಚಿಂತನೆ | – ಪ್ರೊ. ಎ.ಎಚ್. ಮಾಸಾಪತಿ |
| 35 | ಲೇಖನಗಳು | – ಶ್ರೀಮತಿ ರಶ್ಮಿ ವಿ. |
| | | – ಇನಾಯತ್ ಪಾಷ. ಎಸ್. |
| | | – ಬಿ.ಎಂ. ಚಂದ್ರಶೇಖರಯ್ಯ |
| 41 | ಆರೋಗ್ಯ | – ವಾಮನರಾವ್ |
| | | – ಸಾವಿತ್ರಿ |
| 45 | ಸುತ್ತೋಲೆಗಳು | |



ಪ್ರಕಾಶಕರು
**ಶ್ರೀ ಪಿ. ಕುಮಾರ್**
ನಿರ್ದೇಶಕರು (ಪಂ.ರಾಜ್)
ಹಾಗೂ ಸರ್ಕಾರದ ಪದನಿಮಿತ್ತ
ಉಪಕಾರ್ಯದರ್ಶಿಗಳು

ಪ್ರಧಾನ ಸಂಪಾದಕರು
**ಶ್ರೀ ಬೂವನಹಳ್ಳಿ ನಾಗರಾಜ್**
ನಿರ್ದೇಶಕರು ಸುವರ್ಣ ಗ್ರಾಮೋದಯ
ಹಾಗೂ ಸರ್ಕಾರದ ಪದನಿಮಿತ್ತ
ಉಪಕಾರ್ಯದರ್ಶಿಗಳು

ಸಂಪಾದಕರು
**ಶ್ರೀ ವೈ. ಮಹಾಂಕಾಳಪ್ಪ**

ಸಹಾಯಕ ಸಂಪಾದಕರು
**ಡಾ|| ಎಂ.ಎಸ್. ಮಂಜುನಾಥ್**
**ಶ್ರೀ ನಾಗರಾಜ. ಬಿ. ವಾಗಾ**

**ವಾರ್ಷಿಕ ಚಂದಾ :**
ವ್ಯಕ್ತಿಗಳಿಗೆ ರೂ. 50/–
ಸಂಸ್ಥೆಗಳಿಗೆ ರೂ. 60/–
ಬಿಡಿ ಪ್ರತಿ ರೂ. 5/–
ಚಂದಾ ಹಣವನ್ನು ಮನಿಯಾರ್ಡರ್ ಮೂಲಕ ನಿಮ್ಮ ಅಂಚೆ ವಿಳಾಸದೊಂದಿಗೆ ನಮ್ಮ ಕಚೇರಿ ವಿಳಾಸಕ್ಕೆ ತಲುಪಿಸಬಹುದು.



**ಕಚೇರಿ ವಿಳಾಸ**
ಮುಖ್ಯ ಸಂಪಾದಕರು, "ಕರ್ನಾಟಕ ವಿಕಾಸ"
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ನಂ. 309, 3ನೇ ಮಹಡಿ, ಗೇಟ್ ನಂ. 1,
ಬಹುಮಹಡಿಗಳ ಕಟ್ಟಡ, ಡಾ. ಅಂಬೇಡ್ಕರ್ ವೀಧಿ,
ಬೆಂಗಳೂರು – 560 001.
ದೂರವಾಣಿ : (080) 22353857
www.rdpr.kar.nic.in
email:kvrdpr@gmail.com


**ವಿಶೇಷ ಸೂಚನೆ**

ಕರ್ನಾಟಕ ವಿಕಾಸದಲ್ಲಿ ಪ್ರಕಟಿಸುವ ಸರ್ಕಾರಿ ಆದೇಶ, ಸುತ್ತೋಲೆಗಳು ಅಧಿಕೃತವಾದವುಗಳಾಗಿದ್ದು ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳು ಅನುಷ್ಠಾನಕ್ಕೆ ತರಬೇಕು.

ಲೇಖನಗಳಲ್ಲಿರುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತದೆ ಹೊರತು ಸರ್ಕಾರದ ಅಭಿಪ್ರಾಯವಲ್ಲ.

## ಪತ್ರಿಕೆ ಕುರಿತು ನಿಮ್ಮ ನುಡಿ


ಮಾನ್ಯರೇ,

ಕನ್ನಡ ಭುವನೇಶ್ವರಿ, ಕರ್ನಾಟಕದ ಪ್ರಸಿದ್ಧ ದೇವಾಲಯಗಳೊಂದಿಗೆ ಕರ್ನಾಟಕ ರಾಜ್ಯದ ಚಿತ್ರವನ್ನು ಒಳಗೊಂಡಿರುವ ನವೆಂಬರ್ ತಿಂಗಳ 'ಕರ್ನಾಟಕ ವಿಕಾಸ' ಪತ್ರಿಕೆಯ ಮುಖಪುಟವು ಸುಂದರವಾಗಿ ಮೂಡಿಬಂದಿದೆ. ಪಾಟೀಲ್ ಪುಟ್ಟಪ್ಪನವರ 'ಬದುಕುವ ಮಾತು' ಅಂಕಣದಲ್ಲಿ ಪ್ರಕಟವಾದ ನಿರ್ಧಾರ ತೊಟ್ಟು ಧೈರ್ಯದಿಂದ ಮುನ್ನುಗ್ಗಿದರೆ ಯಶಸ್ಸು ಇದೆ ಎನ್ನುವ ಲೇಖನವು ಅರ್ಥಪೂರ್ಣ ಮತ್ತು ಉಪಯುಕ್ತವಾಗಿದೆ. ಪ್ರಕಟಗೊಂಡಿರುವ ಇತರೆ ಲೇಖನಗಳೂ ಸಹ ಚೆನ್ನಾಗಿ ಮೂಡಿಬಂದಿವೆ. ಇಲಾಖೆಯಲ್ಲಿ ನಡೆಯುವ ಚಟುವಟಿಕೆಗಳ ಮಾಹಿತಿಯನ್ನು ಗ್ರಾಮೀಣ ಜನತೆಗೆ ಒದಗಿಸುತ್ತಿರುವ ಪತ್ರಿಕೆಯು ಎಲ್ಲರ ನೆಚ್ಚಿನ ಪತ್ರಿಕೆಯಾಗಿದೆ. ಇಂತಹ ಉಪಯುಕ್ತ ಪತ್ರಿಕೆಯನ್ನು ಹೊರತರುತ್ತಿರುವ ಇಲಾಖೆಯ ಹಾಗೂ ಪತ್ರಿಕಾ ಬಳಗದವರಿಗೆ ಧನ್ಯವಾದಗಳು.

– **ರಾಘವೇಂದ್ರ,** ನಂ. 17/1, 3ನೇ ಅಡ್ಡರಸ್ತೆ, 2ನೇ ಮುಖ್ಯರಸ್ತೆ, ವಿಜಯನಗರ, ಮಾರೇನಹಳ್ಳಿ,
ಬೆಂಗಳೂರು – 560 040.

ನವೆಂಬರ್–2012ರ ತಿಂಗಳ ಕರ್ನಾಟಕ ವಿಕಾಸ ಮುಖಪುಟದ ಕನ್ನಡ ತಾಯಿ ಭುವನೇಶ್ವರಿಯ ಚಿತ್ರ ಬಹಳ ಸುಂದರವಾಗಿ ಮೂಡಿಬಂದಿದೆ. ಹಾಗೆಯೇ 'ಗ್ರಾಮಸ್ವರಾಜ್' ಬಗ್ಗೆ ಈ ಹಿಂದೆ ತಿಳಿಯದಿದ್ದ ಮಾಹಿತಿಗಳು ಪ್ರಕಟಗೊಂಡಿವೆ. ಸ್ಪರ್ಧಾತ್ಮಕ ಪರೀಕ್ಷೆ ಎದುರಿಸುತ್ತಿರುವ ಅನೇಕ ಪರೀಕ್ಷಾರ್ಥಿಗಳಿಗೆ 'ಕರ್ನಾಟಕ ವಿಕಾಸ' ಸಂಗ್ರಹಯೋಗ್ಯ ಸಂಚಿಕೆಯಾಗಿದೆ. ಶ್ರೀನಿವಾಸ ವಿ. ಅವರ 'ಕನ್ನಡ ಭಾಷೆ ಉಳಿಸೋಣ' ಲೇಖನದಲ್ಲಿ ಅವರು ಎಷ್ಟು ಸರಳವಾಗಿ ಕನ್ನಡ ನಾಡು–ನುಡಿ, ಭಾಷೆಯ ರಕ್ಷಣೆ ಮತ್ತು ಅದರ ಇತಿಹಾಸವನ್ನು ಎತ್ತಿ ತೋರಿಸಿದ್ದಾರೆ. 2000 ವರ್ಷಗಳ ಕನ್ನಡ ಭಾಷೆಯ ಇತಿಹಾಸ ನಿಜಕ್ಕೂ ರೋಮಾಂಚನಗೊಳಿಸುವ ಅಭಿವ್ಯಕ್ತಿಯಾಗಿದೆ.

– **ಎಸ್.ವಿ. ನಾಗರಾಜ,** ಆದಿಭೂತಪ್ಪ ದೇವಸ್ಥಾನದ ರಸ್ತೆ,
ವಿಜಯಪುರ ಬಡಾವಣೆ, ಚಿಕ್ಕಮಗಳೂರು – 577 101.




ಕರ್ನಾಟಕ ವಿಕಾಸ ನವೆಂಬರ್ 2012 ಮಾಹೆಯ ಮುಖಪುಟವು ಕರ್ನಾಟಕದಲ್ಲಿ ಕನ್ನಡಾಂಬೆಯ ಜೊತೆ ಕನ್ನಡ ರಾಜ್ಯೋತ್ಸವ, ದೀಪಾವಳಿ ಹಬ್ಬದ ಶುಭಾಶಯಗಳು ಹೊತ್ತು ಹೊರಬಂದಿದೆ ಮತ್ತು ಲೇಖಕರಾದ ಎನ್.ಆರ್. ಪಾಟೀಲರವರ 'ಕೆರೆಗಳಿಗೆ ಕಾಯಕಲ್ಪ ಗ್ರಾಮೀಣ ಅಭಿವೃದ್ಧಿಗೊಂದು ವರದಾನ' ಎಂಬ ಲೇಖನವು ಬಹಳ ಸೊಗಸಾಗಿ ಮೂಡಿಬಂದಿದೆ. ಮತ್ತು ಆರ್.ಡಿ.ಪಿ.ಆರ್. ಇಲಾಖೆಯ ಸರಕಾರದ ಆದೇಶ ಗ್ರಾ.ಪಂ., ತಾ.ಪಂ., ಜಿ.ಪಂ.ಗೆ ಸಂಬಂಧಿಸಿದ ಆದೇಶಗಳು ಮುದ್ರಿಸಬೇಕೆಂದು ಮನವಿ, ಪತ್ರಿಕಾ ಬಳಗಕ್ಕೆ ಅಭಿನಂದನೆಗಳು.

– **ಎಂ.ಜೆ. ಜಮಾದಾರ,** ದ್ವಿತೀಯ ದರ್ಜೆ ಲೆಕ್ಕ ಸಹಾಯಕರು, ಗ್ರಾಮ ಪಂಚಾಯಿತಿ, ರಾಮಸಮುದ್ರ,
ತಾ॥ ಜಿಲ್ಲೆ ಯಾದಗಿರಿ – 585 321

ಸಂದರ್ಭೋಚಿತ ಸಂಗ್ರಾಹ್ಯ ಸಂಚಿಕೆ. ಆರು ಕೋಟಿ ಕನ್ನಡಿಗರ ಆಶಾಕಿರಣವಾಗಿ ಪ್ರಕಟವಾಗುವ 'ಕರ್ನಾಟಕ ವಿಕಾಸ' ಪತ್ರಿಕೆ ಓದುಗರ ಜ್ಞಾನ ತೃಷೆಯನ್ನು ಹಿಂಗಿಸಿ ಜೀವನವನ್ನು ಉತ್ಕರ್ಷಗೊಳಿಸಲು ಉಪಯುಕ್ತವಾಗಿದೆ. ಜನರ ಸರ್ವಾಂಗೀಣ ಪ್ರಗತಿಗೆ ಮೂಲಾಧಾರವಾದ ಸಂಗತಿಗಳನ್ನು ಸವಿಸ್ತಾರವಾಗಿ ತಿಳಿಸಲು ಸಮರ್ಥವಾಗಿದೆ. ನವೆಂಬರ್ ತಿಂಗಳಿನ ಪತ್ರಿಕೆಯ ಮುಖಪುಟ ಮನಾಕರ್ಷಕವಾಗಿತ್ತು. ಕರ್ನಾಟಕ ನಕಾಶೆಯಲ್ಲಿ ನಾಡಿನ ಮಹತ್ವದ ಹಾಗೂ ಗಮನಾರ್ಹವಾದ ಪ್ರೇಕ್ಷಣೀಯ ಸ್ಥಳಗಳನ್ನು ಕಣ್ಮುಂದೆ ಕಟ್ಟುವಂತೆ ಮೂಡಿಬಂದಿತು. 'ಕನ್ನಡಮ್ಮನ ಆಜ್ಞೆ'ಯೆಂಬ ಕೆ. ರಾಮಕೃಷ್ಣರವರ ಕವನ ಓದುಗರಲ್ಲಿ ಕನ್ನಡಾಭಿಮಾನದ ಪ್ರಜ್ಞೆಯನ್ನು ಜಾಗೃತಗೊಳಿಸುವಂತಿತ್ತು. 'ಕರ್ನಾಟಕ ಏಕೀಕರಣಕ್ಕೆ ಮೊದಲು ಮತ್ತು ಆನಂತರ' ಎಂಬ ಲೇಖನ ಸಮಯೋಚಿತವಾಗಿತ್ತು. ಕನ್ನಡ ರಾಜ್ಯೋತ್ಸವದ ಈ ಸಂದರ್ಭದಲ್ಲಿ 'ಕರ್ನಾಟಕ ಏಕೀಕರಣದ ಮೊದಲು ಯಾವ ಸ್ಥಿತಿಯಲ್ಲಿತ್ತು ಹಾಗೂ ರಾಜ್ಯೋದಯವಾದ ಮೇಲೆ ಇಂದು ಯಾವ ಸ್ಥಿತಿಯಲ್ಲಿದೆ ಎಂಬುದರ ಬಗ್ಗೆ ತೌಲನಿಕವಾಗಿ ವಿಶ್ಲೇಷಿಸಿದ ಲೇಖನವನ್ನೋದಿ ನನಗೆ ಸಮಗ್ರವಾದ ಸಮಾಚಾರ ದೊರೆತು ಸಂತೋಷವಾಯಿತು.

– **ಬಸವರಾಜ ಹೂಗಾರ** ಹೂಗಾರ, ಮು.ಪೋ. ಹಿರೇಸಿಂಗನಗುತ್ತಿ, ತಾ॥ ಹುನಗುಂದ,
ಜಿ॥ ಬಾಗಲಕೋಟೆ – 586 154.

ಕರ್ನಾಟಕ ಸರ್ಕಾರ ಸಚಿವಾಲಯ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
ಬಹುಮಹಡಿ ಕಟ್ಟಡ, ಬೆಂಗಳೂರು.



ಡಾ|| ಇ.ವಿ. ರಮಣ ರೆಡ್ಡಿ, ಭಾ.ಆ.ಸೇ.,
ಸರ್ಕಾರದ ಕಾರ್ಯದರ್ಶಿಗಳು
ಗ್ರಾ. ಮತ್ತು ಪಂ. ರಾಜ್ ಇಲಾಖೆ

## ಸ್ವಾವಲಂಬಿ ಹಾಗೂ ಸಮೃದ್ಧಿಗಾಗಿ ಸ್ವಯಂ ಉದ್ಯೋಗದತ್ತ...

ಪ್ರಿಯ ಬಂಧುಗಳೇ,

ಗ್ರಾಮೀಣ ಪ್ರದೇಶದ ಜನರಿಗೆ ಸೂಕ್ತ ಉದ್ಯೋಗಾವಕಾಶಗಳನ್ನು ಒದಗಿಸಿಕೊಟ್ಟು ಅವರ ಆರ್ಥಿಕ ಪರಿಸ್ಥಿತಿಯನ್ನು ಸುಭದ್ರಗೊಳಿಸುವ ಹಿನ್ನೆಲೆಯಲ್ಲಿ ಸರ್ಕಾರ ಹಲವಾರು ಅಭಿವೃದ್ಧಿ ಯೋಜನೆಗಳನ್ನು ನಿರಂತರವಾಗಿ ಹಮ್ಮಿಕೊಂಡು ಯಶಸ್ವಿಯಾಗಿ ಜಾರಿಗೊಳಿಸುತ್ತಾ ಬಂದಿದೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಗ್ರಾಮೀಣ ಜನರ ಸ್ವಾವಲಂಬಿ ಜೀವನಕ್ಕಾಗಿ ಮತ್ತು ಸ್ವಂತ ದುಡಿಮೆಗಾಗಿ "ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ" ಎಂಬ ಪ್ರಮುಖ ಯೋಜನೆಯನ್ನು ಜಾರಿಗೆ ತಂದಿರುವುದು ನಮ್ಮೆಲ್ಲರಿಗೂ ತಿಳಿದಿರುವ ವಿಷಯವಾಗಿದೆ. ಐಆರ್‌ಡಿಪಿ, ಟ್ರೈಸಂ, ಜಿಕೆವೈ, ಸುಧಾರಿತ ಟೂಲ್ ಕಿಟ್ಸ್ ಪೂರೈಕೆ ಇತ್ಯಾದಿ ಕಾರ್ಯಕ್ರಮಗಳನ್ನು ಸಂಯೋಜಿಸಿ ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆಯನ್ನು 1999 ರಿಂದ ಕೇಂದ್ರ ಸರ್ಕಾರವು ಜಾರಿಗೆ ತಂದಿದ್ದು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು 75:25ರ ಅನುಪಾತದ ಅನುದಾನದಲ್ಲಿ ಜಾರಿಗೊಳಿಸುತ್ತಿವೆ. ಗ್ರಾಮೀಣ ಪ್ರದೇಶಗಳಲ್ಲಿ ನಿರ್ದಿಷ್ಟ ಸಂಖ್ಯೆಯ ಬಡತನದ ರೇಖೆಗಿಂತ ಕಡಿಮೆ ಆದಾಯ ಹೊಂದಿರುವ ಕುಟುಂಬಗಳಿಗೆ ಸ್ವ-ಉದ್ಯೋಗಾವಕಾಶವನ್ನು ಕಲ್ಪಿಸಿ ಇವರಿಗೆ ಮೂಲಭೂತ ಸೌಲಭ್ಯ ತಂತ್ರಜ್ಞಾನ, ಮಾರುಕಟ್ಟೆ ಸೌಲಭ್ಯ ಮತ್ತು ತರಬೇತಿ ಒದಗಿಸುವುದು ಯೋಜನೆಯ ಮುಖ್ಯ ಗುರಿಗಳಾಗಿವೆ. ಸ್ವಸಹಾಯ ಸಂಘಗಳ ಮೂಲಕ ಸಾಮಾಜಿಕವಾಗಿ ಹಾಗೂ ಜಾಗತಿಕವಾಗಿ ಸಜ್ಜುಗೊಳಿಸಿ ಸ್ವಸಹಾಯ ಸಂಘಗಳ ಒಕ್ಕೂಟದೊಂದಿಗೆ ಬಲಿಷ್ಠ ಸಂಸ್ಥೆಯೊಂದನ್ನು ಗ್ರಾಮೀಣ ಮಟ್ಟದಲ್ಲಿ ತಳಹದಿಯಿಂದಲೇ ನಿರ್ಮಿಸಿ ಬಡಜನರ ಹಾಗೂ ದೇಶದ ಆರ್ಥಿಕತೆಯನ್ನು ಹೆಚ್ಚಿಸುವುದು ಯೋಜನೆಯ ದೂರದೃಷ್ಟಿಯಾಗಿದೆ

**ಸಂಜೀವಿನಿ ...**

ಎಸ್.ಜಿ.ಎಸ್.ವೈ ಯೋಜನೆಯನ್ನು ಪುನರ್ ರಚಿಸಿ ಅಜೀವಿಕ – ನ್ಯಾಷನಲ್ ರೂರಲ್ ಲೈವ್ಲೀ ಹುಡ್ ಮಿಷನ್ (ಎನ್.ಆರ್.ಎಲ್.ಎಂ) ಎಂಬ ಯೋಜನೆಯನ್ನು ಕೇಂದ್ರ ಸರ್ಕಾರವು 2010–11ರಿಂದ ಜಾರಿಗೊಳಿಸಿದ್ದು ರಾಜ್ಯಮಟ್ಟದಲ್ಲಿ ಅಜೀವಿಕ ಯೋಜನೆಯನ್ನು "ಸಂಜೀವಿನಿ" ಎಂಬ ಹೆಸರಿನಲ್ಲಿ ಹಂತ ಹಂತವಾಗಿ ಜಾರಿಗೊಳಿಸಲು ತೀರ್ಮಾನಿಸಲಾಗಿದೆ. ಪ್ರಥಮ ಹಂತದಲ್ಲಿ ರಾಜ್ಯದ ಐದು ಜಿಲ್ಲೆಗಳಾದ ಬೆಳಗಾವಿ, ಧಾರವಾಡ, ಗುಲ್ಬರ್ಗಾ, ಮೈಸೂರು ಹಾಗೂ ತುಮಕೂರು ಜಿಲ್ಲೆಗಳ ಆಯ್ದ 20 ತಾಲ್ಲೂಕುಗಳಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ರಾಜ್ಯದ ಉಳಿದ ತಾಲ್ಲೂಕುಗಳಲ್ಲಿ ನಾನ್ ಇಂಟೆನ್ಸಿವ್ ಬ್ಲಾಕ್‌ಗಳಾಗಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು.

**ಮಹಿಳಾ ಕಿಸಾನ್ ಸಶಕ್ತೀಕರಣ ಪರಿ ಯೋಜನೆ (ಎಂ.ಕೆ.ಎಸ್.ಪಿ)**

ಗ್ರಾಮೀಣ ಪ್ರದೇಶದ ಅತೀ ಬಡತನದಲ್ಲಿರುವ ಮಹಿಳೆಯರಿಗೆ ಕೃಷಿಯಲ್ಲಿ ತರಬೇತಿ ನೀಡಿ ಅವರನ್ನು ಆರ್ಥಿಕವಾಗಿ ಸಬಲೀಕರಣಗೊಳಿಸುವುದು ಮಹಿಳಾ ಕಿಸಾನ್ ಸಶಕ್ತೀಕರಣ ಪರಿಯೋಜನೆ (ಎಂ.ಕೆ.ಎಸ್.ಪಿ) ಯ ಪ್ರಮುಖ ಉದ್ದೇಶವಾಗಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು 75:25ರ ಅನುಪಾತದಲ್ಲಿ ಅನುದಾನವನ್ನು ಭರಿಸುತ್ತಿದ್ದು ಯೋಜನೆಯನ್ನು ಸರ್ಕಾರೇತರ ಸ್ವಯಂ ಸಂಘಗಳ ಮೂಲಕ ರಾಜ್ಯದಲ್ಲಿ ಅನುಷ್ಠಾನಗೊಳಿಸ ಲಾಗುಲಾಗುತ್ತಿದೆ.

ಗಾಂಧಿ ಕನಸಿನ ಸ್ವರಾಜ್ ಕಲ್ಪನೆಯ ಹಿನ್ನೆಲೆಯಲ್ಲಿ ಗ್ರಾಮೀಣ ಜನರ ಸ್ವಾವಲಂಬಿ ಬದುಕನ್ನು ರೂಪಿಸಿ ತನ್ಮೂಲಕ ರಾಷ್ಟ್ರದ ಆರ್ಥಿಕತೆಯನ್ನು ಬಲಪಡಿಸುವುದು ಒಟ್ಟಾರೆ ಈ ಯೋಜನೆಗಳ ಪ್ರಮುಖ ಉದ್ದೇಶವಾಗಿರುತ್ತದೆ. ಕಾಲಬದ್ಧ ಅವಧಿಯಲ್ಲಿ ಯೋಜನೆಗಳ ಅನುಷ್ಠಾನ ಹಾಗೂ ಯಶಸ್ವಿಯಾಗಿ ನಿರ್ವಹಿಸುವಲ್ಲಿ ಇಲಾಖೆಯ ಅಧಿಕಾರಿ/ಸಿಬ್ಬಂದಿ ವರ್ಗದವರು ಸಕ್ರಿಯವಾಗಿ ತೊಡಗಿಸಿಕೊಳ್ಳುತ್ತಾರೆಂಬ ಆಶಯ ನನ್ನದಾಗಿದೆ.

(ಡಾ॥ ಇ.ವಿ. ರಮಣ ರೆಡ್ಡಿ)

ಬದುಕುವ ಮಾತು



ಡಾ. ಪಾಟೀಲ ಪುಟ್ಟಪ್ಪ

# ವ್ಯಕ್ತಿಯ ಜೀವನದಲ್ಲಿ ಶಿಸ್ತು ವ್ಯವಸ್ಥೆ ಇರಬೇಕು

ಮನೆಗೆ ಭದ್ರವಾದ ತಳಹದಿ ಇರಬೇಕು. ಅಂದರೇನೇ ಮನೆ ಸುರಕ್ಷಿತವೆನಿಸುತ್ತದೆ. ಅದೇ ರೀತಿ, ವ್ಯವಸ್ಥೆ ಇರಿಸಿಕೊಂಡ ಮನುಷ್ಯನ ಜೀವನ ಭದ್ರತೆಯನ್ನು ಪಡೆದುಕೊಂಡು ಸುರಕ್ಷಿತವೆನಿಸುತ್ತದೆ. ವ್ಯವಸ್ಥೆ ಎಲ್ಲಿ ಇದೆಯೋ ಅಲ್ಲಿ ಪ್ರಕಾಶವಿರುತ್ತದೆ. ಆ ಪ್ರಕಾಶವು ಬದುಕಿಗೆ ಶಕ್ತಿಯನ್ನೂ ಶಾಂತಿಯನ್ನೂ ತಂದುಕೊಡುತ್ತದೆ.

ಜೀವನದಲ್ಲಿ ಒಳ್ಳೆಯ ವಸ್ತುಗಳು ಏನಿವೆಯೋ ಅವೆಲ್ಲವೂ ಸುವ್ಯವಸ್ಥೆಯಿಂದಲೇ ಬಂದಿವೆ. ವ್ಯವಸ್ಥೆ ಇರುವಲ್ಲಿ ಸೃಜನತೆ ಇರುತ್ತದೆ. ಸೃಷ್ಟಿ ಕಾರ್ಯ ನಡೆದಿರುತ್ತದೆ. ವ್ಯವಸ್ಥೆ ಇರುವಲ್ಲಿ ವಿಮೋಚನೆ ಇರುತ್ತದೆ. ತಾರತಮ್ಯ ಜ್ಞಾನ ಇರುತ್ತದೆ. ಮಾಡುವ ಕಾರ್ಯದಲ್ಲಿ ಪ್ರಜ್ಞೆ ಇರುತ್ತದೆ.

ಪ್ರತಿಯೊಂದಕ್ಕೂ ಅದರದರ ಸ್ಥಾನ ಇದೆಯೆನ್ನುವ ಅರಿವು ಪ್ರತಿಯೊಬ್ಬ ಮನುಷ್ಯನಲ್ಲಿಯೂ ಇರಬೇಕು. ಚರಾಚರ ಸೃಷ್ಟಿಯೆಲ್ಲವೂ ವ್ಯವಸ್ಥೆಯ ಮೇಲೆಯೇ ನಿಂತಿದೆ. ಈ ಬ್ರಹ್ಮಾಂಡವೆಲ್ಲವೂ ವ್ಯವಸ್ಥೆಯ ಮೇಲೆಯೇ ನಿಂತಿದೆ. ದೇಹಕ್ಕೆ ಆರೋಗ್ಯ, ಮನಸ್ಸಿಗೆ ಎಚ್ಚರ ಇರಬೇಕಾದಂತೆ ಬದುಕಿಗೆ ವ್ಯವಸ್ಥೆ ಇರಬೇಕು.

ಜನರ ಬದುಕಿನಲ್ಲಿ ವ್ಯವಸ್ಥೆ ಇದ್ದರೆ, ಅವರ ನೆರೆಹೊರೆಯಲ್ಲಿ, ಅವರಿರುವ ನಗರದಲ್ಲಿ ಶಾಂತಿ ಇರುತ್ತದೆ. ಇಂಥ ಶಾಂತಿ ಇದ್ದರೇನೇ ರಾಜ್ಯವೂ ಸುರಕ್ಷಿತವಾಗಿ ಇರಬಲ್ಲದು. ದೇಹದೊಳಗಿನ ಎಲಬುಗಳು ಅವುಗಳ ಸ್ಥಾನದಲ್ಲಿ ಸರಿಯಾಗಿ ಇದ್ದರೇನೇ ದೇಹವು, ಆಕಾರ ಕಳೆದುಕೊಳ್ಳದೆ, ಸುಸ್ಥಿತಿಯಲ್ಲಿದ್ದು, ತನ್ನ ಕಾರ್ಯಗಳನ್ನು ಸರಿಯಾಗಿ ಸುವ್ಯಸ್ಥಿತ ರೀತಿಯಿಂದ ನಡೆಸಿಕೊಂಡು ಹೋಗಬಲ್ಲದು.

ವ್ಯವಸ್ಥೆಯೆನ್ನುವುದು ಶಿಸ್ತಿಗೆ ಇನ್ನೊಂದು ಹೆಸರು. ಶಿಸ್ತು ಇದ್ದರೇನೇ ಮನುಷ್ಯನ ಜೀವನ ವ್ಯವಸ್ಥಿತವೆನಿಸುತ್ತದೆ. ಬಾಲಕ ಬಾಲಕಿಯರಿಗೆ ಅವರ ಶಾಲಾ ದಿನಗಳಲ್ಲಿ ಶಿಸ್ತನ್ನು ಕಲಿಸದೇ ಹೋದರೆ, ಅವರ ಶಿಕ್ಷಣಕ್ಕೋಸುವ ವೆಚ್ಚ ಮಾಡಿದ ಹಣ ಹಾಗೂ ಸಮಯ ವ್ಯರ್ಥವೆನಿಸುತ್ತದೆ. ಅದರಂಥ ರಾಷ್ಟ್ರೀಯ ಹಾನಿ ಬೇರೊಂದಿಲ್ಲ ಎಂದು ಮಹಾತ್ಮಾ ಗಾಂಧಿಯವರು ಹೇಳುತ್ತಾರೆ.

ಮನುಷ್ಯನು ಈ ಜಗತ್ತೆಂಬ ಕಾರ್ಯಾಗಾರದಲ್ಲಿ ಶ್ರಮ ಮಾಡುತ್ತ ತನ್ನನ್ನು ನಿತ್ಯವೂ ರೂಪಿಸಿಕೊಳ್ಳುತ್ತಿದ್ದಾನೆ. ಈ ಕೆಲಸ ಶಿಸ್ತಿನಿಂದ ಕೂಡಿ ಬಹು ವ್ಯವಸ್ಥಿತ ರೀತಿಯಿಂದ ನಡೆಯಬೇಕು.

ಪ್ರತಿಯೊಬ್ಬ ಮನುಷ್ಯನೂ ತನ್ನ ದೈವವನ್ನು ತನ್ನ ಕೈಯ್ಯಾರೆ ನಿರ್ಮಿಸಿಕೊಳ್ಳಬೇಕು. ಆ ನಿರ್ಮಾಣದಲ್ಲಿ ಶ್ರದ್ಧೆ ಇರಬೇಕು. ಶಿಸ್ತು ಇರಬೇಕು. ಮಾಡುವ ಕೆಲಸವನ್ನು, ಓರಣ ಇರಿಸಿಕೊಂಡು, ವ್ಯವಸ್ಥೆಯಿಂದ ಮಾಡಿದರೇನೇ ಅದು ಪರಿಣಾಮವನ್ನು ತೋರಿಸಿಕೊಡುತ್ತದೆ. ಜೀವನದಲ್ಲಿ ತಾಳುವಂಥದನ್ನೇನಾದರೂ ನಾವು ಮಾಡಬೇಕೆಂದರೆ, ನಮ್ಮ ಬದುಕಿನಲ್ಲಿ ವ್ಯವಸ್ಥೆ ಇರಬೇಕು. ನಾವು ಮಾಡುವ ಕಾರ್ಯದಲ್ಲಿ ವ್ಯವಸ್ಥೆ ಇರಬೇಕು. ■

> ಪ್ರತಿಯೊಬ್ಬ ಮನುಷ್ಯನೂ ತನ್ನ ದೈವವನ್ನು ತನ್ನ ಕೈಯ್ಯಾರೆ ನಿರ್ಮಿಸಿಕೊಳ್ಳಬೇಕು. ಆ ನಿರ್ಮಾಣದಲ್ಲಿ ಶ್ರದ್ಧೆ ಇರಬೇಕು. ಶಿಸ್ತು ಇರಬೇಕು.

# ಇದ್ದವರು ಮೂರು ಜನ, ಕದ್ದವರು ಯಾರು ?

ಸ್ವಾಭಾವಿಕ ಸಂಪನ್ಮೂಲಗಳಾದ ಗಾಳಿ, ನೀರು, ಮಣ್ಣು ಇವುಗಳನ್ನು ಕಾನೂನುಬದ್ಧವಾಗಿ ಸಂರಕ್ಷಿಸುವ, ಇತಿ ಮಿತಿಯಲ್ಲಿ ಬಳಸಿಕೊಳ್ಳುವ ಹಕ್ಕು ಎಲ್ಲರಿಗೂ ಇದೆ. ಹಾಗೆಯೇ ಅವುಗಳನ್ನು ತಮ್ಮ ಮುಂದಿನ ಪೀಳಿಗೆಗೆ ಅವುಗಳ ಮೂಲ ರೂಪದಲ್ಲಿ ಕಾಯ್ದಿರಿಸಬೇಕಾದ ಜವಾಬ್ದಾರಿ ಕೂಡ ಎಲ್ಲರ ಮೇಲಿದೆ. ವಿಪರ್ಯಾಸವೆಂದರೆ ನಮ್ಮ ಜನರು ಹಕ್ಕು ಅಧಿಕಾರಗಳನ್ನು ಬಯಸುತ್ತಾರೆಯೇ ಹೊರತು ಜವಾಬ್ದಾರಿಯನ್ನಲ್ಲ. ನಮ್ಮ ರಾಜ್ಯದಲ್ಲಿ ಅಕ್ರಮ ಗಣಿಗಾರಿಕೆಯಿಂದ ಆಗಿರುವ ಅಧ್ವಾನಗಳನ್ನು ಜನ ಸ್ವತಃ ಅನುಭವಿಸಿದ್ದಾರೆ. ಅಕ್ರಮ ಮರಳು ಗಣಿಗಾರಿಕೆಯ ದಂಧೆ ಕೂಡ ಇಂತಹುದೇ ಶಕ್ತಿಯಾಗಿದೆ. ಪರಿಸರವನ್ನು ಧ್ವಂಸ ಮಾಡಿ, ಅಂತರ್ಜಲವನ್ನು ನಾಶಮಾಡಿ ಹಳ್ಳಿಗಾಡಿನ ಜನರ ಜೀವನವನ್ನು ಮೂರಾಬಟ್ಟೆ ಮಾಡಿದೆ. ರೈತಾಪಿ ಜನರು ಸ್ವಂತಕ್ಕೆ ಒಂದು ಗೂಡು ಕಟ್ಟಿಕೊಳ್ಳಲು ಒಂದು ಹಿಡಿ ಮರಳಿಗೆ ಕೂಡ ಪರದಾಡುವಂತಾಗಿದೆ.

ಪ್ರತಿ ಗ್ರಾಮ ಪಂಚಾಯಿತಿಯಿಂದ ತಾಲ್ಲೂಕು ಮಟ್ಟದವರೆವಿಗೆ ಪ್ರಾಮಾಣಿಕ ಹಾಗೂ ದಕ್ಷ ಅಧಿಕಾರಿಗಳಿದ್ದಾರೆ. ಇಡೀ ಆಡಳಿತ ಯಂತ್ರದ ಚುಕ್ಕಾಣಿ ಹಿಡಿದ ವಿಧಾನ ಸಭಾ ಸದಸ್ಯರಿದ್ದಾರೆ. ಸಾಂಸ್ಥಿಕ ವ್ಯವಸ್ಥೆಯ ಸದಸ್ಯರು ಪದಾಧಿಕಾರಿಗಳೂ ಇದ್ದಾರೆ ಎಂದು ನಂಬುವುದಾದರೆ, ಇವರೆಲ್ಲರ ಕಣ್ತಪ್ಪಿಸಿ ಹಳ್ಳ, ಕೊಳ್ಳ, ನದಿ, ಕೆರೆಗಳಲ್ಲಿನ ಮರಳಿನ ನಿಕ್ಷೇಪಗಳು ಮಂಗಮಾಯವಾಗುತ್ತಿವೆ. ಹೇಗೆ ? ಎಂಬುದು ಯಕ್ಷ ಪ್ರಶ್ನೆಯಾಗಿದೆ. ಸಾರ್ವಜನಿಕರೇ ಸಂಘಟಿತರಾಗಿ ದುಷ್ಟ ಶಕ್ತಿಗಳ ವಿರುದ್ಧ ಹೋರಾಡಿ, ಸಂಪನ್ಮೂಲಗಳನ್ನು ಕಾಯುವ ಕೆಲಸ ಮಾಡುವುದು ಅನಿವಾರ್ಯವಾಗುತ್ತದೆ. ಕನ್ನಡ ನಾಡು, ನುಡಿ, ರಕ್ಷಣೆಗೆ ಪಣತೊಟ್ಟ ಸಂಘಟನೆಗಳೇ, ಯುವಕ–ಯುವತಿ ಸಂಘಗಳೇ, ಸ್ವಯಂ ಸೇವಾ ಸಂಸ್ಥೆಗಳೇ, ಸಹಕಾರಿ, ರೈತ ಸಂಘಗಳೇ ..... ಕೊಳ್ಳೇ ಹೋಗುವ ಮುನ್ನ ಎಚ್ಚೆತ್ತುಕೊಳ್ಳದಿದ್ದರೆ ಭವಿಷ್ಯವೆಂಬುದೇ ಇರುವುದಿಲ್ಲ. ಜೋಕೆ !




### ಈ ನಿಟ್ಟಿನಲ್ಲಿ ಆತ್ಮಾವಲೋಕನಕ್ಕಾಗಿ ಕೆಲವು ಪ್ರಶ್ನೆಗಳು

1) ಸ್ವಾಭಾವಿಕ ಸಂಪನ್ಮೂಲಗಳ ಸಂರಕ್ಷಣೆ ಯಾರ ಹೊಣೆ ?
2) ಅಕ್ರಮ ಮರಳು ಗಣಿಗಾರಿಕೆಯಿಂದಾಗಿರುವ ಅನಾಹುತಗಳಿಗೆ ಕಾರಣರಾರು ?
3) ಆಡಳಿತ ಯಂತ್ರ ಕುಸಿಯಲು ಯಾರು ಕಾರಣರು ?
4) ದೊರೆ ಕೈಲಿ ದೊಣ್ಣೆ ಇಲ್ಲದಿದ್ದಾಗ ಜನ ಏನು ಮಾಡಬೇಕು ?
5) ಸಂಘ ಸಂಸ್ಥೆಗಳು ಎಚ್ಚೆತ್ತುಕೊಳ್ಳದಿದ್ದರೆ ಮುಂದೇನಾಗಬಹುದು ?

– ಉಮೇಶ್ ಹುಲಿಕುಂಟೆ

ಸಂಸ್ಥಾಪಕರು, ಜೆಮ್ ಇಂಡಿಯ ಸಂಸ್ಥೆ, ನಂ. 5, "ಕಲಾಭಾರತಿ" ನಿಲಯ,
4ನೇ ಕ್ರಾಸ್, ಎಂ.ಜಿ ರಸ್ತೆ, ತುಮಕೂರು– 572 101.

ವಿ.ಸೂ. ಓದುಗರು ಸಹ ತಾವು ನೋಡಿದ, ಕೇಳಿದ, ಓದಿದ ಘಟನೆ ಮತ್ತು ಅದಕ್ಕೆ ಪೂರಕವಾದ ಪ್ರಶ್ನೆಗಳನ್ನು ಬರೆದು ಪ್ರಕಟಣೆಗೆ ಕಳುಹಿಸಬಹುದಾಗಿದೆ. ಆಯ್ಕೆಯಾಗಿ ಪ್ರಕಟವಾದ ಪ್ರಶ್ನೆಗಳಿಗೆ ರೂ. 500/- ಬಹುಮಾನ ನೀಡಲಾಗುವುದು.

# ಸಕಾಲ

ಸಕಾಲ ಬಂತಮ್ಮ
ನಮ್ಮ ಸರ್ಕಾರ ಸಕಾಲ ತಂತಮ್ಮ
ಸರ್ಕಾರಿ ಕಛೇರಿಲಿ ನಿಗದಿತ ವೇಳೆಯಲಿ
ಕೆಲಸ ಕಾರ್ಯ ನಡೆಯೊಂಗಾಯ್ತಮ್ಮ ॥ ಪ ॥

ಇಂದು.. ನಾಳೆ... ಇನ್ನಿಲ್ಲ
ಹೇಳಿದ ಸಮಯಕೆ ತಪ್ಪೋಲ್ಲ
ತಪ್ಪಿದ ಪಕ್ಷದಲಿ ಅಧಿಕಾರಿ ದಂಡ ತೆರಬೇಕಲ್ಲ
ಈ ಮಾತು ನೂರಕ್ಕೆ ನೂರು ಸುಳ್ಳಲ್ಲ ॥ ಸಕಾಲ ॥



ಜಿ. ವೆಂಕಟೇಶ್ *
ಮೊಬೈಲ್ : 9686537660

ಬಡವ ಬಲ್ಲಿದ ಭೇದವಿಲ್ಲ
ನಾಳೆ ಬಾ ಅನ್ನೊಂಗಿಲ್ಲ
ದೂಸರ ಸಬೂಬು ಹೇಳೋಂಗಿಲ್ಲ
ಮಾಹಿತಿ ಕೇಳಿದರೆ ಗದರಿಸೋಂಗಿಲ್ಲ ॥ ಸಕಾಲ ॥

ನೆಮ್ಮದಿ ಕೇಂದ್ರಕ್ಕೋಗೋಣ
ಅರ್ಜಿಯ ನಾವು ಸಲ್ಲಿಸೋಣ
ಸಲ್ಲಿಸಿದ ಅರ್ಜಿಗೆ ತಕ್ಷಣ ನಾವು
ಸ್ವೀಕೃತಿ ಪತ್ರ ಪಡೆಯೋಣ ॥ ಸಕಾಲ ॥

**ಮಾತು :** – ಇಂದು...... ನಾಳೆ....... ಇನ್ನಿಲ್ಲ .. ಹೇಳಿದ ದಿನ ತಪ್ಪೋಲ್ಲ.
'ಇದು ಕರ್ನಾಟಕ ಸಕಾಲ ಸೇವೆ ಅಧಿನಿಯಮ – 2011'
ಬನ್ನಿ ನಿಮ್ಮ ಹಕ್ಕು ಚಲಾಯಿಸಿ
ಸಾರ್ವಜನಿಕರು ಸರ್ಕಾರಿ ಕಛೇರಿಯಲ್ಲಿ
ತಮ್ಮ ಕೆಲಸ ವಿಳಂಭವಾಗದೆ ಸರಿಯಾದ ಸಮಯಕ್ಕೆ
ಇಗೋ ಸರ್ಕಾರ 'ಸಕಾಲ' ಯೋಜನೆಯನ್ನು ತಂದಿದೆ
ಇದರ ಪ್ರಯೋಜನವನ್ನು ಎಲ್ಲರೂ ಪಡೆಯಿರಿ.

* ಮನಗಳ ಗೆಲ್ಲೋ ಮಾತುಗಾರ, ಕ್ಲರ್ಕ್ ಕಮ್ ಕಂಪ್ಯೂಟರ್ ಆಪರೇಟರ್, ಅಗರ ಗ್ರಾಮ ಪಂಚಾಯಿತಿ, ಕೆಂಗೇರಿ ಹೋಬಳಿ, ಬೆಂ.ದ.ತಾ.

# ಸ್ವ-ಉದ್ಯೋಗ ಕಾರ್ಯಕ್ರಮಗಳು

ಸ್ವಯಂ ಉದ್ಯೋಗ ಕಾರ್ಯಕ್ರಮದ ಸಂಕ್ಷಿಪ್ತ ವಿವರ.

ಐಆರ್‌ಡಿಪಿ, ಟ್ರೈಸಂ, ಟೂಲ್‌ಕಿಟ್ಸ್, ಜಿಕೆವೈ ಇತ್ಯಾದಿ ಕಾರ್ಯಕ್ರಮಗಳ ಸಂಯೋಜನೆಯೊಂದಿಗೆ ಎಸ್‌ಜಿಎಸ್‌ವೈ ಯೋಜನೆಯನ್ನು ದಿನಾಂಕ : 01-04-1999 ರಿಂದ ಕೇಂದ್ರ ಸರ್ಕಾರ ಜಾರಿಗೆ ತಂದಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು 75 : 25 ರ ಅನುಪಾತದಲ್ಲಿ ಯೋಜನೆಯನ್ನು ಜಾರಿಗೊಳಿಸುತ್ತದೆ.

## ದೂರದೃಷ್ಟಿ

- ಆರ್ಥಿಕವಾಗಿ ಹಿಂದುಳಿದವರನ್ನು ಒಂದುಗೂಡಿಸಿ, ಸ್ವಸಹಾಯ ಸಂಘಗಳನ್ನು ರಚಿಸಿ ವಿವಿಧ ಆದಾಯಕರ ಉತ್ಪನ್ನಗಳನ್ನು ತಯಾರಿಸುವ ನಿಟ್ಟಿನಲ್ಲಿ ಕೌಶಲ್ಯಾಭಿವೃದ್ಧಿಗಳಲ್ಲಿ ತರಬೇತಿ ನೀಡಿ ಕುಶಲಕರ್ಮಿಗಳನ್ನಾಗಿಸುವುದು.
- ಸುತ್ತುನಿಧಿ, ಸಾಲ ಮತ್ತು ಸಹಾಯಧನ ಒದಗಿಸಿ ಆ ಮೂಲಕ ಸ್ವಾವಲಂಬಿಗಳನ್ನಾಗಿಸಿ ಆರ್ಥಿಕವಾಗಿ ಸದೃಢರನ್ನಾಗಿಸಲು ನೆರವಾಗುವುದು.
- ಆರ್ಥಿಕವಾಗಿ ಹಿಂದುಳಿದವರಲ್ಲಿ ಸುಪ್ತವಾಗಿರುವ ಪ್ರತಿಭೆಯನ್ನು ಗುರುತಿಸಿ ಅವರನ್ನು ಮಾನಸಿಕ, ವ್ಯಾವಹಾರಿಕ, ಸಾಮಾಜಿಕ, ಧಾರ್ಮಿಕ, ರಾಜಕೀಯವಾಗಿ ಪ್ರೋತ್ಸಾಹಿಸಿ ಸಮಾಜದ ಮುಖ್ಯವಾಹಿನಿಗೆ ಕರೆತರುವುದು.
- ಸಣ್ಣ ಸಣ್ಣ ಉದ್ಯಮಗಳನ್ನು ಸ್ಥಾಪಿಸುವುದರ ಮೂಲಕ ಹಂತ-ಹಂತವಾಗಿ ಬಡತನ ರೇಖೆಯಿಂದ ಮೇಲೆ ಬರಲು ಪ್ರೋತ್ಸಾಹಿಸುವುದು.

## ಉದ್ದೇಶ

- ಬಡ ಕುಟುಂಬಗಳಿಗೆ ಲಾಭದಾಯಕ ಸ್ವ-ಉದ್ಯೋಗ, ಕುಶಲ ಕೂಲಿ ಉದ್ಯೋಗಾವಕಾಶಗಳ ಮೂಲಕ ಅವರ ಬಡತನವನ್ನು ತಗ್ಗಿಸುವುದು. ಈ ಮೂಲಕ ಅವರ ಏಳಿಗೆಗಾಗಿ, ಜೀವನೋಪಾಯಕ್ಕಾಗಿ ಭದ್ರಬುನಾದಿ ಹಾಕುವುದು.
- ಸ್ವಸಹಾಯ ಸಂಘಗಳ ಮೂಲಕ ಜಾಗತಿಕವಾಗಿ ಹಾಗೂ ಸಾಮಾಜಿಕವಾಗಿ ಸಜ್ಜುಗೊಳಿಸುವುದು.
- ತಳಹದಿಯಿಂದಲೇ ಸ್ವಸಹಾಯ ಸಂಘಗಳ ಒಕ್ಕೂಟದೊಂದಿಗೆ ಬಲಿಷ್ಠ ಸಂಸ್ಥೆಯೊಂದನ್ನು ನಿರ್ಮಿಸುವುದು.

## ಗುರಿ

- ಗ್ರಾಮೀಣ ಬಡಜನರ ಸಂಘಟನೆಯನ್ನು ಸ್ವಸಹಾಯ ಸಮೂಹಗಳಾಗಿ, ಮತ್ತು ಅವರ ಸಾಮರ್ಥ್ಯ ಹೆಚ್ಚಿಸುವ ಸಮೂಹ ಚಟುವಟಿಕೆ, ಯೋಜನೆ ಮೂಲಭೂತ

* ನಿರ್ದೇಶಕರು (ಸ್ವ-ಉದ್ಯೋಗ ಕಾರ್ಯಕ್ರಮ), ಬಹುಮಹಡಿಗಳ ಕಟ್ಟಡ, ಅಂಬೇಡ್ಕರ್ ವೀದಿ, ಬೆಂಗಳೂರು - 560 001.

ಸೌಕರ್ಯ ನಿರ್ಮಾಣ, ತಾಂತ್ರಿಕ ತರಬೇತಿ ಮತ್ತು ಆದಾಯಕರ ಆಸ್ತಿಯನ್ನು ಬ್ಯಾಂಕ್ ಸಾಲ ಹಾಗೂ ಸರ್ಕಾರದ ಸಹಾಯಧನ ಒದಗಿಸಲಾಗುತ್ತದೆ.

- ಕೌಶಲ್ಯಾಭಿವೃದ್ಧಿ, ಸಾಲ ಒದಗಿಸುವಿಕೆ, ಮಾರುಕಟ್ಟೆ ಮತ್ತು ಇತರೆ ಜೀವನೋಪಾಯ ಮಾರ್ಗಗಳನ್ನು ಒದಗಿಸುವ ಬಗ್ಗೆ ಪ್ರಚಾರದ ಮೂಲಕ ಮಾಹಿತಿ ನೀಡುವುದು.
- ಬಡವರ ಜೀವನಾಧಾರ ವೃತ್ತಿಗಳ ಆಯ್ಕೆಯ ಸ್ವಾತಂತ್ರ್ಯತೆಗಳನ್ನು ಹೆಚ್ಚಿಸುವುದು ಮತ್ತು ವಿಸ್ತರಿಸುವುದು.
- ಬಡಜನರ ನೈಪುಣ್ಯತೆಯನ್ನು ಹೆಚ್ಚಿಸಿ, ಗ್ರಾಮದ ಹೊರಗೆ ವಿಶಾಲ ಮಾರುಕಟ್ಟೆ ಹಾಗೂ ಉದ್ಯೋಗಾವಕಾಶ ಒದಗಿಸುವುದು.
- ಆರ್ಥಿಕ, ಬಂಡವಾಳ, ಉತ್ಪಾದನಾ ವಿಸ್ತರಣೆ, ತಾಂತ್ರಿಕತೆ, ಕೌಶಲ್ಯಾಭಿವೃದ್ಧಿ ಬಗ್ಗೆ ಅರಿವು ಹಾಗೂ ಮಾರುಕಟ್ಟೆ ಸೇವೆಗಳನ್ನು ಒದಗಿಸುವುದು.

## ಕ್ರಿಯೆ

- ಎಸ್‌ಜಿಎಸ್‌ವೈ ಯೋಜನೆಯು ಗುಂಪು ಚಟುವಟಿಕೆಗಳಿಗೆ ಹೆಚ್ಚಿನ ಒತ್ತು ನೀಡುತ್ತದೆ.
- ಅಂಗವಿಕಲ ಸ್ವರೋಜ್‌ಗಾರಿಗಳಿದ್ದಲ್ಲಿ ವೈಯಕ್ತಿಕವಾಗಿ ಸಹಾಯ ಒದಗಿಸಬಹುದು.
- ಉತ್ತಮ ಸರ್ಕಾರೇತರ ಸಂಸ್ಥೆ ಹಾಗೂ ನಾಗರೀಕ ಸಂಸ್ಥೆ (ಸಿಎಸ್‌ಒ)ಗಳನ್ನು ಗುರುತಿಸುವುದು.
- ಪ್ರದೇಶದಲ್ಲಿನ ಕಾರ್ಯಸಾಧ್ಯಗಳನ್ನು ಗುರುತಿಸುವುದು.
- ಫಲಾನುಭವಿಗಳ ಪಟ್ಟಿಗೆ ಗ್ರಾಮಸಭೆಯ ಮೂಲಕ ಅಧಿಕೃತ ಒಪ್ಪಿಗೆ ನೀಡುವುದು.

ಯೋಜನೆ ಪ್ರಾರಂಭದಿಂದ ಅಂದರೆ 1-4-1999ರಿಂದ ಅಕ್ಟೋಬರ್ 2012ರ ಅಂತ್ಯದವರೆಗೆ 85843 ಸ್ವಸಹಾಯ ಗುಂಪುಗಳನ್ನು ರಚಿಸಲಾಗಿದೆ. 681432 ಸದಸ್ಯರನೊಳಗೊಂಡ 56786 ಸ್ವಸಹಾಯ ಗುಂಪುಗಳಿಗೆ ಆರ್ಥಿಕ ಚಟುವಟಿಕೆ ತೆಗೆದುಕೊಳ್ಳಲು ರೂ.70982.50 ಲಕ್ಷ ಸಹಾಯಧನ ಒದಗಿಸಲಾಗಿದೆ. ಈ ಪೈಕಿ 272568 ಸದಸ್ಯರನ್ನೊಳಗೊಂಡ 22714 ಮಹಿಳಾ ಸ್ವಸಹಾಯ ಗುಂಪುಗಳಿಗೆ ರೂ.9085.60 ಲಕ್ಷಗಳ ಸಹಾಯಧನ ಒದಗಿಸಲಾಗಿದೆ.

## ತರಬೇತಿ ಕಾರ್ಯಕ್ರಮಗಳು

ಸ್ವಸಹಾಯ ಗುಂಪುಗಳ ಸದಸ್ಯರುಗಳು ಚಟುವಟಿಕೆಗಳನ್ನು ಪ್ರಾರಂಬಿಸುವ ಮೊದಲು ಯೋಜನೆಯ ಬಗ್ಗೆ ಅರಿವು ಮೂಡಿಸಲು ಬೇಸಿಕ್ ಓರಿಯಂಟೇಶನ್ ತರಬೇತಿಯನ್ನು ರೂಡ್-ಸೆಟಿ/ ಆರ್-ಸೆಟಿ ಹಾಗೂ ಇತರೆ ತರಬೇತಿ ಸಂಸ್ಥೆಗಳ ಮೂಲಕ ನೀಡಲಾಗುವುದು.

ಚಟುವಟಿಕೆಗಳ ಆಯ್ಕೆ ಆಧಾರದ ಮೇಲೆ ಕೌಶಲ್ಯ ನೈಪುಣ್ಯದ ಸುಧಾರಣೆಗೆ ನುರಿತ ತರಬೇತಿ ಸಂಸ್ಥೆಗಳ ಮೂಲಕ ಕೌಶಲ್ಯಾಭಿವೃದ್ಧಿ ತರಬೇತಿ ನೀಡಲಾಗುವುದು.

## ಸ್ವ-ಸಹಾಯ ಸಂಘಗಳು ಉತ್ಪಾದಿಸಿದ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸುವುದಕ್ಕಾಗಿ ಸರಸ್ ಮೇಳ ಆಯೋಜನೆ

ಸ್ವ-ಸಹಾಯ ಸಂಘಗಳ ಉತ್ಪನ್ನಗಳ ಮಾರುಕಟ್ಟೆಗಾಗಿ, ಪ್ರಾದೇಶಿಕ ಸರಸ್ ವಸ್ತು ಪ್ರದರ್ಶನ ಮೇಳವನ್ನು ರಾಜ್ಯದಲ್ಲಿ ಆಯೋಜಿಸಲಾಗುತ್ತಿದ್ದು, ಕಳೆದ ನಾಲ್ಕು ವರ್ಷಗಳ ಸರಸ್ ಮೇಳದ ವಿವರ ಈ ಕೆಳಗಿನಂತಿದೆ.

| ಕ್ರ.ಸಂ | ವರ್ಷ | ಸರಸ್ ಮೇಳ ಆಯೋಜಿಸಿದ ಜಿಲ್ಲೆ | ಮಾರಾಟಗೊಂಡ ಉತ್ಪನ್ನಗಳ ಮೌಲ್ಯ ರೂ. ಕೋಟಿಗಳಲ್ಲಿ | ನಡೆಸಲಾದ ದಿನಗಳು |
|---|---|---|---|---|
| 1 | 2008-09 | ಬೆಂಗಳೂರು ನಗರ | 2.43 | 16 |
| 2 | 2009-10 | ಬೆಳಗಾವಿ | 2.85 | 12 |
| 3 | 2010-11 | ಹುಬ್ಬಳ್ಳಿ | 4.94 | 12 |
| 4 | 2011-12 | ದಾವಣಗೆರೆ | 2.02 | 11 |

ಇತರೆ ರಾಜ್ಯಗಳಲ್ಲಿ ನಡೆಯುವ ಪ್ರಾದೇಶಿಕ ಸರಸ್ ಮೇಳಗಳಿಗೆ ಹಾಗೂ ಐಐಟಿಎಫ್, ನವದೆಹಲಿಗೆ ರಾಜ್ಯದ ಸ್ವಸಹಾಯ ಸಂಘದ ಸದಸ್ಯರುಗಳನ್ನು ಕಳುಹಿಸಲಾಗುತ್ತಿದೆ. ಇದಲ್ಲದೇ ಜಿಲ್ಲಾ ಮಟ್ಟದಲ್ಲಿಯೂ ಸಹ ಪ್ರತಿ ವರ್ಷ ಸರಸ್ ಮೇಳವನ್ನು ಆಯೋಜಿಸಲಾಗುತ್ತಿದೆ.

ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ರಾಜ್ಯದಲ್ಲಿ ಎಸ್‌ಜಿಎಸ್‌ವೈ ಪುನರ್‌ರಚಿಸಿ ಎನ್‌ಆರ್‌ಎಲ್‌ಎಂ (ಆಜೀವಿಕಾ) ಯೋಜನೆಯನ್ನು ರಾಜ್ಯದಲ್ಲಿ ಸಂಜೀವಿನಿ ಹೆಸರಿನಲ್ಲಿ 2011-12ರಿಂದ ಜಾರಿಗೊಳಿಸುತ್ತಿದೆ.

## ಎನ್‌ಆರ್‌ಎಲ್‌ಎಂ (ಆಜೀವಿಕಾ)/ಸಂಜೀವಿನಿ:

ಬೇರು ಮಟ್ಟದಲ್ಲಿರುವ ಗ್ರಾಮೀಣ ಬಡಜನರಿಗೆ ಸ್ವ-ಉದ್ಯೋಗ ಹಾಗೂ ಕೌಶಲ್ಯಾಧಾರಿತ ಉದ್ಯೋಗ ಅವಕಾಶಗಳನ್ನು ಒದಗಿಸುವುದರ ಮೂಲಕ ನಿರಂತರ ಹಾಗೂ ಗಣನೀಯ ಆದಾಯ ಬರುವಂತೆ ಮಾಡುವುದು ಇದರ ಮುಖ್ಯ ಉದೇಶ. ಇದಕ್ಕಾಗಿ ಜಿಲ್ಲಾ ಮಟ್ಟದಲ್ಲಿ ಸಮರ್ಪಣಾ ಮನೋಭಾವ ಹಾಗೂ ಸೇವಾ ತತ್ಪರ ಸಿಬ್ಬಂದಿ ಘಟಕಗಳನ್ನು ಸ್ಥಾಪಿಸಲಾಗುವುದು. ವಿವಿಧ ಮಟ್ಟಗಳಲ್ಲೂ ಸ್ವಸಹಾಯ ಸಂಘಗಳ ಫೆಡರೇಷನ್ ರಚಿಸಿ ಯೋಜನೆಯ ಫಲವನ್ನು ಗುಂಪು ಸದಸ್ಯರಿಗೆ ತಲುಪಿಸಲಾಗುವುದು.

ಇದರ ಅನುಷ್ಠಾನಕ್ಕಾಗಿ ಅಗತ್ಯವಿರುವ ಪೂರ್ವಭಾವಿ ಕ್ರಮಗಳನ್ನು ಈ ಕೆಳಕಂಡಂತೆ ಕೈಗೊಳ್ಳಲಾಗುತ್ತಿದೆ.

- ಕರ್ನಾಟಕ ರಾಜ್ಯ ಜೀವನೋಪಾಯ ಸಂವರ್ಧನ ಸಂಸ್ಥೆ (ಕೆಎಸ್‌ಆರ್‌ಎಲ್‌ಪಿಎಸ್)ಯನ್ನು ದಿನಾಂಕ : 28-11-2011 ರಂದು ನೋಂದಾಯಿಸಲಾಗಿದೆ.
- ಸದರಿ ಸಂಸ್ಥೆಯು ಪ್ರತ್ಯೇಕ ಕಛೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ. (ವಿಳಾಸ : ಐ145, ಇನ್‌ಫಾಂಟ್ರ ರಸ್ತೆ, ವಿಶ್ವೇಶ್ವರಯ್ಯ ಗೋಪುರದ ಪಕ್ಕ, ಬೆಂಗಳೂರು-560001)
- ರಾಜ್ಯ ಸರ್ಕಾರವು, ಎನ್‌ಆರ್‌ಎಲ್‌ಎಂ ಯೋಜನೆಯನ್ನು ರಾಜ್ಯಾದ್ಯಂತ ಹಂತ ಹಂತವಾಗಿ ಅನುಷ್ಠಾನಗೊಳಿಸಲು ತೀರ್ಮಾನಿಸಿದ್ದು ಪ್ರಥಮ ಹಂತದಲ್ಲಿ ಕೆಳಕಂಡ 5 ಜಿಲ್ಲೆಗಳ 20 ತಾಲ್ಲೂಕು (ಬ್ಲಾಕ್) ಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

(1) ಬೆಳಗಾವಿ ಜಿಲ್ಲೆಯ – ಅಥಣಿ, ಗೋಕಾಕ್, ಸವದತ್ತಿ, ಹುಕ್ಕೇರಿ

(2) ಧಾರವಾಡ ಜಿಲ್ಲೆಯ – ಕಲಘಟಗಿ, ಕುಂದಗೋಳ, ನವಲಗುಂದ

(3) ಗುಲ್ಬರ್ಗಾ ಜಿಲ್ಲೆಯ – ಗುಲ್ಬರ್ಗಾ, ಜೇವರ್ಗಿ, ಸೇಡಂ, ಆಳಂದ್

(4) ಮೈಸೂರು ಜಿಲ್ಲೆಯ – ಹೆಚ್.ಡಿ. ಕೋಟೆ, ಹುಣಸೂರು, ನಂಜನಗೂಡು, ಟಿ. ನರಸೀಪುರ

(5) ತುಮಕೂರು ಜಿಲ್ಲೆಯ – ಗುಬ್ಬಿ, ಕುಣಿಗಲ್, ಮಧುಗಿರಿ, ಪಾವಗಡ, ಕೊರಟಗೆರೆ.

## ರಾಜ್ಯದಲ್ಲಿ ವಿಲೇಜ್ ಹಾಥ್‌ಗಳ ನಿರ್ಮಾಣ

ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ರಾಜ್ಯದಲ್ಲಿ ಸ್ವಸಹಾಯ ಸಂಘಗಳ ಉತ್ಪನ್ನಗಳ ವಹಿವಾಟಿಗಾಗಿ 87 ವಿಲೇಜ್ ಹಾಥ್‌ಗಳನ್ನು ನಿರ್ಮಿಸಲು ಅನುಮೋದಿಸಲಾಗಿದ್ದು ಮಳಿಗೆಗಳ ನಿರ್ಮಾಣವು ವಿವಿಧ ಹಂತದಲ್ಲಿರುತ್ತದೆ..

## ಆರ್-ಸೆಟಿಗಳ ಸ್ಥಾಪನೆ ಹಾಗೂ ಉನ್ನತೀಕರಣ

ಆರ್-ಸೆಟಿ / ರೂಡ್‌ಸೆಟಿಗಳ ಸ್ಥಾಪನೆ / ಉನ್ನತೀಕರಣಕ್ಕಾಗಿ ಕೇಂದ್ರ ಸರ್ಕಾರಕ್ಕೆ ಇದುವರೆಗೂ 32 ಪ್ರಸ್ತಾವನೆಗಳನ್ನು ಸಲ್ಲಿಸಲಾಗಿ, ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯುವು ರೂ.2587.86 ಲಕ್ಷ ಮೌಲ್ಯದ 28 ಪ್ರಸ್ತಾವನೆಗಳನ್ನು ಅಂಗೀಕರಿಸಿ, ರೂ.1713.56 ಲಕ್ಷಗಳನ್ನು ಬಿಡುಗಡೆಗೊಳಿಸಿದೆ.

## ಎಸ್‌ಜಿಎಸ್‌ವೈ ವಿಶೇಷ ಯೋಜನೆ

ರಾಷ್ಟ್ರಮಟ್ಟದಲ್ಲಿ ಎಸ್‌ಜಿಎಸ್‌ವೈಯಡಿ ಒದಗಿಸಲಾಗಿರುವ ಅನುದಾನದಲ್ಲಿ ಶೇ.15ರಷ್ಟು ಅನುದಾನವನ್ನು ವಿಶೇಷ ಯೋಜನೆ / ಕಾರ್ಯಕ್ರಮಗಳ ಜಾರಿಗಾಗಿ ಮೀಸಲಿಡಲಾಗಿದೆ. ಈ ವಿಶೇಷ ಯೋಜನೆಗಳನ್ನು ಸರ್ಕಾರದ ಇಲಾಖೆಗಳು, ಅರೆ ಸರ್ಕಾರದ ಇಲಾಖೆಗಳು ಸರ್ಕಾರೇತರ ಸಂಸ್ಥೆಗಳು ಹಾಗೂ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಜಾರಿಗೊಳಿಸಲಾಗುತ್ತದೆ.

ಪ್ರತಿಯೊಂದು ಯೋಜನೆಯೂ ಕಾಲಬದ್ಧವಾಗಿದ್ದು, ನಿರ್ದಿಷ್ಟ ಸಂಖ್ಯೆಯ ಬಡತನ ರೇಖೆಗಿಂತ ಕಡಿಮೆ ಆದಾಯ ಹೊಂದಿರುವ ಕುಟುಂಬಗಳಿಗೆ ಸ್ವ ಉದ್ಯೋಗ ಕಲ್ಪಿಸುವುದು ಮತ್ತು ಈ ಕುಟುಂಬಗಳನ್ನು ಬಡತನ ರೇಖೆಯಿಂದ ಮೇಲೆತ್ತುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿದೆ. ಗ್ರಾಮೀಣ ಬಡಜನರನ್ನು ಸಂಘಟಿಸುವುದು, ಇವರಿಗೆ ಮೂಲಭೂತ ಸೌಲಭ್ಯ, ತಂತ್ರಜ್ಞಾನ ಮತ್ತು ಮಾರುಕಟ್ಟೆ ಸೌಲಭ್ಯ ಒದಗಿಸುವುದು, ಬೇರೆ ಇತರೆ ಚಟುವಟಿಕೆಗಳ ಮೂಲಕ ತರಬೇತಿ ಒದಗಿಸುವುದು ಮತ್ತು ಉದ್ಯೋಗದ ಅವಕಾಶಗಳನ್ನು ಕಲ್ಪಿಸುವುದು ಯೋಜನೆಯ ಮುಖ್ಯ ಗುರಿಯಾಗಿದೆ.

ಭಾರತ ಸರ್ಕಾರಕ್ಕೆ ಈವರೆಗೆ ಯೋಜನೆಯು ಜಾರಿಯಾದಾಗಿನಿಂದ ರೂ.177.76 ಕೋಟಿ ಯೋಜನಾ ಮೊತ್ತದ 22 ಪ್ರಸ್ತಾವನೆಗಳನ್ನು ಕಳುಹಿಸಿಕೊಡಲಾಗಿದೆ. ಈ ಪ್ರಸ್ತಾವನೆಗಳಲ್ಲಿ ದಕ್ಷಿಣ ಕನ್ನಡ, ಬಾಗಲಕೋಟೆ ಮತ್ತು ಮೈಸೂರು ಜಿಲ್ಲೆಯ ತಲಾ 2 ವಿಶೇಷ ಯೋಜನೆಗಳಿಗೆ ಮತ್ತು ಕೋಲಾರ, ಬಳ್ಳಾರಿ ಹಾಗೂ ಧಾರವಾಡ ಜಿಲ್ಲೆಗಳ ತಲಾ 1 ವಿಶೇಷ ಯೋಜನೆಗಳು, ಮಂಜೂರಾಗಿರುತ್ತವೆ. ಒಟ್ಟು ಮಂಜೂರಾದ ವಿಶೇಷ ಯೋಜನೆಗಳ ಯೋಜನಾ ಮೊತ್ತವು ರೂ.71.05 ಕೋಟಿಗಳಾಗಿರುತ್ತವೆ.

ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು 2011–12 ನೇ ಸಾಲಿನ ಮಾರ್ಚ್ ಅಂತ್ಯಕ್ಕೆ ರೂ.28.12 ಲಕ್ಷಗಳನ್ನು ಬಿಡುಗಡೆ ಮಾಡಿದೆ. ಒಟ್ಟಾರೆಯಾಗಿ ರೂ.30.81 ಕೋಟಿಗಳನ್ನು ಕೇಂದ್ರ ಸರ್ಕಾರ ಬಿಡುಗಡೆ ಮಾಡಿದೆ. ರಾಜ್ಯ ಸರ್ಕಾರವು ಪ್ರಸ್ತುತ ಸಾಲಿನಲ್ಲಿ ರೂ.0.46ಕೋಟಿಗಳನ್ನು ಬಿಡುಗಡೆ ಮಾಡಿದ್ದು ಹಾಗೂ ಒಟ್ಟಾರೆಯಾಗಿ 7.96 ಕೋಟಿಗಳನ್ನು ಬಿಡುಗಡೆ ಮಾಡಿದೆ.

## ಮೊಬೈಲ್ ಸಂಖ್ಯೆ ನಮೂದಿಸಿ ......

ಗ್ರಾಮೀಣಾಭಿವೃದ್ಧಿಯ ಬಗ್ಗೆ ಮತ್ತು ಸಂಬಂಧಿಸಿದಂತೆ ಆಸಕ್ತ ವಿಚಾರಗಳನ್ನು ಲೇಖಕರು ಹಾಗೂ ಆಸಕ್ತರು ಲೇಖನಗಳ ರೂಪದಲ್ಲಿ 'ಕರ್ನಾಟಕ ವಿಕಾಸ' ಪತ್ರಿಕೆಗೆ ತಲುಪಿಸುತ್ತಿದ್ದಾರೆ. ಪತ್ರಿಕೆಗೆ ಆಯ್ಕೆಯಾದ ಲೇಖನಗಳ ಕರಡನ್ನು ಪರಿಶೀಲಿಸುವಲ್ಲಿ ಲೇಖಕರಿಂದ ಕೆಲವೊಮ್ಮೆ ಸ್ಪಷ್ಟೀಕರಣವನ್ನು ಅಥವಾ ಅಧಿಕ ಮಾಹಿತಿಯನ್ನು ಪಡೆಯುವ ಸಂದರ್ಭವಿರುತ್ತದೆ,

**ಆದ್ದರಿಂದ ಲೇಖಕರು/ಆಸಕ್ತರು ಲೇಖನವನ್ನು ಪತ್ರಿಕೆಗೆ ತಲುಪಿಸುವಾಗ ಲೇಖಕರ ಸಂಪೂರ್ಣ ಅಂಚೆ ವಿಳಾಸ ಮತ್ತು ಮೊಬೈಲ್ ದೂರವಾಣಿ ಸಂಖ್ಯೆಯನ್ನು ತಪ್ಪದೇ ನಮೂದಿಸಲು ಕೋರಿದೆ.**

ಲೇಖನಗಳನ್ನು 'ನುಡಿ' ಉಚಿತ ತಂತ್ರಾಂಶವನ್ನು ಬಳಸಿ **kvrdpr@gmail.com** ವಿಳಾಸಕ್ಕೆ ಈ–ಮೇಲ್ ಮುಖಾಂತರವೂ ಕಳುಹಿಸಬಹುದಾಗಿದೆ. ಅಂಚೆಯ ಮೂಲಕ ತಲುಪಿಸಬಯಸುವವರು ಕೆಳಕಂಡ ವಿಳಾಸಕ್ಕೆ ತಲುಪಿಸಲು ಕೋರಿದೆ.

**ಸಂಪಾದಕರು**
**'ಕರ್ನಾಟಕ ವಿಕಾಸ'**
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ನಂ. 309, 3ನೇ ಮಹಡಿ, ಗೇಟ್ ನಂ. 1, ಬಹುಮಹಡಿಗಳ ಕಟ್ಟಡ, ಡಾ. ಅಂಬೇಡ್ಕರ್ ವೀಧಿ,
ಬೆಂಗಳೂರು – 560 001. ದೂರವಾಣಿ : (080) 22353857
www.rdpr.kar.nic.in email:kvrdpr@gmail.com

# ಘನ ತ್ಯಾಜ್ಯ ವಸ್ತು ವಿಲೇವಾರಿಗೆ ಮಾದರಿ ಅಣ್ಣೇಶ್ವರ ಗ್ರಾಮ ಪಂಚಾಯತ್

ಅಣ್ಣೇಶ್ವರ ಗ್ರಾಮ ಪಂಚಾಯತಿಯು ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಸೇರಿದ್ದು, ತಾಲ್ಲೂಕು ಕೇಂದ್ರದಿಂದ ಸುಮಾರು 5 ಕಿ.ಮೀ ದೂರದಲ್ಲಿರುತ್ತದೆ. 8 ಕಂದಾಯ ಹಾಗೂ 2 ಮಜರೆ ಗ್ರಾಮಗಳನ್ನು ಒಳಗೊಂಡಿದ್ದು, ಇಲ್ಲಿನ ಬಹುತೇಕ ಕುಟುಂಬಗಳು ವ್ಯವಸಾಯವನ್ನು ಅವಲಂಬಿಸಿರುತ್ತವೆ. ಗ್ರಾಮ ಪಂಚಾಯತಿಯು ಸುಮಾರು 8730 ಜನ ಸಂಖ್ಯೆ ಹೊಂದಿರುತ್ತದೆ, ಒಟ್ಟು 17 ಜನ ಸದಸ್ಯರಿದ್ದು ಅದರಲ್ಲಿ ಅಧ್ಯಕ್ಷರು ಸಹಿತವಾಗಿ 8 ಜನ ಮಹಿಳಾ ಸದಸ್ಯರಿರುತ್ತಾರೆ.



ಅಣ್ಣೇಶ್ವರ ಗ್ರಾಮ ಪಂಚಾಯತಿ ಚುನಾಯಿತ ಪ್ರತಿನಿಧಿಗಳು

**"ಸರ್ವರಿಗೂ ಸಮಬಾಳು – ಸರ್ವರಿಗೂ ಸ್ವಚ್ಛತೆ ನಿರ್ವಹಣೆ"** ಎಂಬ ಧ್ಯೇಯದಡಿ ಕಳೆದ 15 ವರ್ಷಗಳ ಹಿಂದೆ ಸ್ವಚ್ಛತೆಯ ಕುರಿತು ಗಮನ ಹರಿಸದೇ ಆರ್ಥಿಕವಾಗಿ ಹಿಂದುಳಿದ ಗ್ರಾಮವಾಗಿತ್ತು. ಅಭಿವೃದ್ಧಿಯಲ್ಲಿ ತೀರಾ ಹಿನ್ನೆಡೆ ಕಂಡು, ಮೂಲಭೂತ ಸೌಕರ್ಯಗಳ ಕೊರತೆ ಇತ್ತು. ಗ್ರಾಮ ನೈರ್ಮಲ್ಯದ ಅರಿವು ಇಲ್ಲದ ಮುಗ್ಧ ಗ್ರಾಮಸ್ಥರಾಗಿದ್ದರು. ಆದರೆ ಇದೀಗ ಸದರಿ ಗ್ರಾಮ ಪಂಚಾಯತಿಯು ರಾಜ್ಯ ಮತ್ತು ರಾಷ್ಟ್ರಕ್ಕೆ ಮಾದರಿಯಾಗಿ ಅಭಿವೃದ್ಧಿಯಲ್ಲಿ ಯಶಸ್ಸು ಸಾಧಿಸಿ ರಾಷ್ಟ್ರೀಯ ಮತ್ತು ರಾಜ್ಯ ಪುರಸ್ಕಾರವನ್ನು ಪಡೆದು ಗ್ರಾಮದಲ್ಲಿ ಹಲವು ಪ್ರಥಮಗಳ ಸಾಧನೆಗೈದ ಕೀರ್ತಿ ಗ್ರಾಮ ಪಂಚಾಯತಿಗೆ ಸಲ್ಲುತ್ತದೆ.

ಸದರಿ ಗ್ರಾಮ ಪಂಚಾಯತಿಯು ರಾಜ್ಯ ಮತ್ತು ರಾಷ್ಟ್ರಕ್ಕೆ ಮಾದರಿಯಾಗಿ ಅಭಿವೃದ್ಧಿಯಲ್ಲಿ ಯಶಸ್ಸು ಸಾಧಿಸಿ ರಾಷ್ಟ್ರೀಯ ಮತ್ತು ರಾಜ್ಯ ಪುರಸ್ಕಾರವನ್ನು ಪಡೆದು ಗ್ರಾಮದಲ್ಲಿ ಹಲವು ಪ್ರಥಮಗಳ ಸಾಧನೆಗೈದ ಕೀರ್ತಿ ಗ್ರಾಮ ಪಂಚಾಯತಿಗೆ ಸಲ್ಲುತ್ತದೆ.

* ಘನ ತ್ಯಾಜ್ಯ ವಸ್ತು ಶುದ್ಧೀಕರಣ ಘಟಕ, ಅಣ್ಣೇಶ್ವರ, ಅಣ್ಣೇಶ್ವರ ಗ್ರಾಮ ಪಂಚಾಯತಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.

## ಸಂಪೂರ್ಣ ನೈರ್ಮಲ್ಯ ಯೋಜನೆ

ಅಣ್ಣೇಶ್ವರ ಗ್ರಾಮ ಪಂಚಾಯತಿಯು ಸಂಪೂರ್ಣ ನೈಮಲ್ಯ ಯೋಜನೆಗಾಗಿ ವಿವಿಧ ಯೋಜನೆಗಳನ್ನು ರೂಪಿಸಿ ಅದರಲ್ಲಿ ಯಶಸ್ವಿಯಾಗಿ ರಾಷ್ಟ್ರೀಯ ನಿರ್ಮಲ ಗ್ರಾಮ ಪುರಸ್ಕಾರ ಪಡೆದುಕೊಂಡಿದೆ.

- ಗ್ರಾಮದಲ್ಲಿ ಸಂಪೂರ್ಣ ಬಯಲು ಮಲ ವಿಸರ್ಜನೆ ನಿಷೇಧ
- ಎಲ್ಲಾ ಮನೆಗಳಿಗೂ ಕಡ್ಡಾಯ ಶೌಚಾಲಯ
- ಎಲ್ಲಾ ಶಾಲೆಗಳಲ್ಲೂ ಉತ್ತಮ ಶೌಚಾಲಯ
- ಗ್ರಾಮದಲ್ಲಿ ಗುಂಪು ಶೌಚಾಲಯ
- ಪ್ಲಾಸ್ಟಿಕ್ ಬಳಕೆ ನಿಷೇಧ
- ಗ್ರಾಮದಲ್ಲಿ ತ್ಯಾಜ್ಯ ವಸ್ತು ವಿಲೇವಾರಿಗಾಗಿ ತ್ಯಾಜ್ಯ ವಸ್ತು ವಿಲೇವಾರಿ ಘಟಕ ನಿರ್ಮಾಣ
- ಘನ ತ್ಯಾಜ್ಯ ವಸ್ತುಗಳಿಂದ ನೈಸರ್ಗಿಕ ಗೊಬ್ಬರ ತಯಾರಿಕೆ.

ಸ್ವಚ್ಛತಾ ಆಂದೋಲನ ಕಾರ್ಯಕ್ರಮ, ಸ್ವಚ್ಛತಾ ಜಾಥಾ, ಬೀದಿ ನಾಟಕ, ಶಾಲೆಗಳಲ್ಲಿ ಶುಚಿತ್ವದ ಬಗ್ಗೆ ತರಬೇತಿಗಳ ಮೂಲಕ ಗ್ರಾಮಸ್ಥರಿಗೆ ಜನ ಜಾಗೃತಿ ಕಾರ್ಯಕ್ರಮಗಳು.



ಶಾಲಾ ಶೌಚಾಲಯ

## ಘನ ತ್ಯಾಜ್ಯ ವಸ್ತುಗಳ ವಿಲೇವಾರಿ

ಅಣ್ಣೇಶ್ವರ ಗ್ರಾಮ ಪಂಚಾಯಿತಿಯ ಎಲ್ಲಾ ಗ್ರಾಮಗಳಿಂದ ಸಂಗ್ರಹಿಸಲಾದ ಘನ ತ್ಯಾಜ್ಯ ವಸ್ತುಗಳನ್ನು ಸಂಗ್ರಹಿಸಿ, ಸಂಸ್ಕರಿಸಿ, ನೈಸರ್ಗಿಕ ಗೊಬ್ಬರ ತಯಾರಿಸುವ ಉದ್ದೇಶದಿಂದ ಘನ ತ್ಯಾಜ್ಯ ವಸ್ತುಗಳ ವಿಲೇವಾರಿ ಘಟಕವನ್ನು ಸ್ಥಾಪಿಸಲಾಗಿದೆ.



ಘನ ತ್ಯಾಜ್ಯ ವಸ್ತುಗಳ ಸಂಸ್ಕರಣ ಘಟಕ

## ಕಸ ಸಂಗ್ರಹಣೆ

ಎಲ್ಲಾ ಗ್ರಾಮಗಳಲ್ಲಿಯೂ ಕಸ ಸಂಗ್ರಹಿಸುವ ಹಸಿರು/ಕೆಂಪು ಬಣ್ಣದಲ್ಲಿ ನಮೂದಿಸಿ ತೊಟ್ಟಿಗಳನ್ನು ನಿರ್ಮಾಣ ಮಾಡಿ ಹಸಿರು ಡಸ್ಟ್‌ಬಿನ್‌ನಲ್ಲಿ ಹಸಿ ಕಸವನ್ನು ಮತ್ತು ಕೆಂಪು ಡಸ್ಟ್‌ಬಿನ್‌ನಲ್ಲಿ ಒಣಗಿದ ಕಸವನ್ನು ಸಂಗ್ರಹಿಸಿ ತೊಟ್ಟಿಗಳಲ್ಲಿ ಹಾಕಲು ವ್ಯವಸ್ಥೆ ಮಾಡಲಾಗಿದೆ. ಪ್ರತಿ ಮನೆಗೆ ಮೂರು ಕಾಟನ್ ಬಟ್ಟೆಯ ಚೀಲಗಳನ್ನು ನೀಡಿ ದಿನಸಿ ಅಂಗಡಿಗಳಿಂದ ಆಹಾರ, ದ್ರವ್ಯ ವಸ್ತುಗಳನ್ನು ವಿಂಗಡಿಸಿ ತರಲಾಗುತ್ತದೆ. ಪ್ರಾಯೋಗಿಕವಾಗಿ ಚೀಲಗಳನ್ನು ಗ್ರಾಮ ಪಂಚಾಯತ್ ವತಿಯಿಂದ ನೀಡಲಾಗಿದೆ ಮತ್ತು ಎರಡು ಡಸ್ಟ್‌ಬಿನ್‌ಗಳನ್ನು ದಾನಿಗಳಿಂದ ವ್ಯವಸ್ಥೆ ಮಾಡಲಾಗಿದೆ.

ತೊಟ್ಟಿಗಳಲ್ಲಿ ಸಂಗ್ರಹಿಸಿರುವ ತ್ಯಾಜ್ಯಗಳನ್ನು 15 ದಿನಗಳಿಗೊಮ್ಮೆ ಟ್ರ್ಯಾಕ್ಟರ್ ಮುಖಾಂತರ ಎಲ್ಲಾ ಗ್ರಾಮಗಳಿಂದ ಘನ ತ್ಯಾಜ್ಯ ವಸ್ತು ಸಂಗ್ರಹಣಾ ಘಟಕಕ್ಕೆ ಸಾಗಿಸಲಾಗುವುದು. ಇದರಿಂದ ಗ್ರಾಮದ ಚರಂಡಿಗಳು ಮತ್ತು ರಸ್ತೆಗಳು ತ್ಯಾಜ್ಯ ವಸ್ತುಗಳಿಂದ ಮುಕ್ತಗೊಂಡು ಹಳ್ಳಿಗಳಲ್ಲಿ ಸ್ವಚ್ಛ ಮತ್ತು ಆರೋಗ್ಯಕರ ವಾತಾವರಣ ನಿರ್ಮಾಣಗೊಂಡಿದೆ.

## ಸಂಗ್ರಹಿಸಿದ ತ್ಯಾಜ್ಯ ವಸ್ತುಗಳ ನಿರ್ವಹಣೆ

ಸಂಗ್ರಹಿಸಿದ ತ್ಯಾಜ್ಯ ವಸ್ತುಗಳಿಗೆ Effective Micro-organism (EM) ಮಿಶ್ರಣವನ್ನು ಸಿಂಡಿಸುವುದು ಮತ್ತು ಚರಂಡಿಗಳಿಗೂ ಸಹ ಸಿಂಡಿಸಲಾಗುವುದು. ಈ ದ್ರಾವಣವನ್ನು ತ್ಯಾಜ್ಯ ವಸ್ತುಗಳ ಕೊಳೆಸುವಿಕೆಗಾಗಿಯೂ ಸಹ ಉಪಯೋಗಿಸಲಾಗುವುದು.

## ಕಸ ವಿಂಗಡಣೆ

ಎಲ್ಲಾ ಗ್ರಾಮಗಳಿಂದ ಸಂಗ್ರಹಿಸಿ ಸರಬರಾಜು ಮಾಡಿದ ಕಸವನ್ನು ವಿಂಗಡಿಸಲಾಗುವುದು. ಕಬ್ಬಿಣ, ಪ್ಲಾಸ್ಟಿಕ್ ವಸ್ತುಗಳು, ಪ್ಲಾಸ್ಟಿಕ್ ಕವರ್ ಮತ್ತು ಗ್ಲಾಸ್‌ಗಳನ್ನು ಪ್ರತ್ಯೇಕಿಸಿ ಶೇಖರಿಸಲಾಗುವುದು. ನಂತರ ಹರಾಜು ಮುಖಾಂತರ ವಿಲೇವಾರಿಗೆ ಕ್ರಮ ಕೈಗೊಳ್ಳಲಾಗುವುದು. ಹಸಿ ಕಸವನ್ನು ಎರೆಹುಳು ಗೊಬ್ಬರ ತಯಾರಿಸಲು ಉಪಯೋಗಿಸಲಾಗುವುದು.




ಹಸಿರು ಮತ್ತು ಕೆಂಪು ತೊಟ್ಟಿಗಳಲ್ಲಿ ಹಸಿ ಮತ್ತು ಒಣ ಕಸವನ್ನು ಪ್ರತ್ಯೇಕವಾಗಿ ಸಂಗ್ರಹಿಸಲು ನಿರ್ಮಿಸಲಾಗಿರುವ ತೊಟ್ಟಿಗಳು



ದಿನಸಿ ಪದಾರ್ಥಗಳನ್ನು ಕಾಟನ್ ಬ್ಯಾಗ್‌ಗಳಲ್ಲಿ ಪಡೆಯಲು ದಿನಸಿ ಅಂಗಡಿಗೆ ಹೋಗುತ್ತಿರುವುದು



ದಿನಸಿ ಅಂಗಡಿಗಳಿಂದ ಕಾಟನ್ ಚೀಲಗಳಲ್ಲಿ ದಿನಸಿ ಪದಾರ್ಥಗಳನ್ನು ಪಡೆಯುತ್ತಿರುವುದು.



ಕಸ ವಿಂಗಡಿಸುತ್ತಿರುವುದು.



ಕಸ ವಿಂಗಡಿಸಿದ ನಂತರ ದೊರೆತ ಪ್ಲಾಸ್ಟಿಕ್ ಕವರ್, ಪ್ಲಾಸ್ಟಿಕ್ ವಸ್ತುಗಳು, ಗ್ಲಾಸ್‌ಗಳು ಮತ್ತು ಕಬ್ಬಿಣವನ್ನು ಸಂಗ್ರಹಿಸಿರುವುದು.

## ಅಂದಾಜು ಆದಾಯ ಮತ್ತು ವೆಚ್ಚದ ವಿವರ

| ಕ್ರ. ಸಂ. | ವಿವರ | ಭರಿಸಿರುವ ವೆಚ್ಚ (ಲಕ್ಷಗಳಲ್ಲಿ) | | ಒಟ್ಟು | ಷರಾ |
|---|---|---|---|---|---|
| | | ಜಿ.ಪಂ | ಗ್ರಾ.ಪಂ | | |
| 1 | **ಕಟ್ಟಡ ನಿರ್ಮಾಣ** | 6.50 | 1.50 | 8.00 | ನಿರ್ಮಿತಿ ಕೇಂದ್ರದವರು ಕಟ್ಟಡವನ್ನು ನಿರ್ಮಿಸಿರುತ್ತಾರೆ. (75'X 35') |
| 2 | ಹೆಚ್ಚುವರಿ ಕಟ್ಟಡ, ಘಟಕ ಸುತ್ತಲೂ ರಸ್ತೆ, ಶುದ್ಧೀಕರಣ ತೊಟ್ಟಿ ನಿರ್ಮಾಣ ಮತ್ತು ತಡೆಗೋಡೆ ನಿರ್ಮಾಣ | – | 4.40 | 4.40 | ಪಂಚಾಯತ್ ರಾಜ್ ಇಂಜಿನೀಯರ್ ವಿಭಾಗದ ವತಿಯಿಂದ ಕಾಮಗಾರಿಯನ್ನು ಕೈಗೊಳ್ಳಲಾಗಿದೆ. |
| 3 | ಕಸ ಸಂಗ್ರಹಿಸುವ ತೊಟ್ಟಿಗಳ ನಿರ್ಮಾಣ | – | 8.20 | 8.20 | ಪಂಚಾಯತ್ ರಾಜ್ ಇಂಜಿನೀಯರ್ ವಿಭಾಗದ ವತಿಯಿಂದ ಕಾಮಗಾರಿಯನ್ನು ಕೈಗೊಳ್ಳಲಾಗಿದೆ. ಒಟ್ಟು 85 ತೊಟ್ಟಿಗಳ ನಿರ್ಮಾಣ ಮಾಡಲಾಗಿದೆ. |
| 4 | ಕಸ ವಿಲೇವಾರಿಗೆ ಟ್ರ್ಯಾಕ್ಟರ್‌ನ್ನು ಬಾಡಿಗೆ ಆಧಾರದಲ್ಲಿ ಪಡೆದಿರುವುದು | – | 1.27 | 1.27 | ಗ್ರಾಮ ಪಂಚಾಯತ್ ವತಿಯಿಂದ 15 ದಿನಗಳಿಗೊಮ್ಮೆ 10 ಹಳ್ಳಿಗಳಿಂದ ಕಸ ವಿಲೇವಾರಿ ಮಾಡುವುದು ದಿನವೊಂದಕ್ಕೆ ಟ್ರ್ಯಾಕ್ಟರ್‌ನ್ನು ಬಾಡಿಗೆ ರೂ. 1200/– ಹಾಗೂ 5 ಜನ ಕಾರ್ಮಿಕರಿಗೆ ದಿನವೊಂದಕ್ಕೆ ರೂ. 155/– ರಂತೆ ಪಾವತಿಸಲಾಗಿದೆ. ಸದರಿ ಮೊತ್ತವು ಏಪ್ರಿಲ್ 2012 ರಿಂದ ಆಗಸ್ಟ್ ವರೆಗೆ ಭರಿಸಲಾಗಿದೆ. ಸೆಪ್ಟಂಬರ್ 12 ರಿಂದ ಮಾರ್ಚ್ ವರೆಗೆ ಟೆಂಡರ್ ಮುಖಾಂತರ ವಿಲೇವಾರಿಗೆ ರೂ.2.49 ಲಕ್ಷಗಳನ್ನು ನಿಗದಿಪಡಿಸಲಾಗಿದೆ. |
| 5 | ಕಾಟನ್ ಬ್ಯಾಗ್‌ಗಳ ಖರೀದಿ (ಮನೆಗಳಿಂದ ಕಸ ಸಂಗ್ರಹಿಸಲು) | – | 1.33 | 1.33 | 1785 ಕುಟುಂಬಗಳಿಗೆ ಪ್ರಥಮ ಬಾರಿಗೆ ಕುಟುಂಬವೊಂದಕ್ಕೆ 3 ಬ್ಯಾಗ್‌ಗಳಿಗೆ ರೂ. 75/– ರಂತೆ ಪಾವತಿಸಲಾಗಿದೆ. |
| 6 | ಕಸ ವಿಂಗಡಿಸಲು | – | 1.52 | 1.52 | ಕಸ ವಿಂಗಡಿಸಲು ಪ್ರತಿ ದಿನ ಇಬ್ಬರು ಕಾರ್ಮಿಕರು ದಿನಕ್ಕೆ ರೂ. 155/–ರಂತೆ ಮಾಹೆಯಾನ ರೂ. 9300/– ಮೂರು ಜನ ತಾಂತ್ರಿಕ ನೌಕರರಿಗೆ ಮಾಹೆಯಾನ ರೂ. 16000/– (6000+10000 (ಇಬ್ಬರಿಗೆ) ಸದರಿ ವೆಚ್ಚವು ಸೆಪ್ಟಂಬರ್ 12 ರವೆಗೆ ಭರಿಸಲಾಗಿದೆ. |
| 7 | ಘನ ತ್ಯಾಜ್ಯ ವಸ್ತುಗಳಿಗೆ ರಸಾಯನಿಕ ಸಿಂಪರಣೆ | – | 0.01 | 0.01 | ಸಂಗ್ರಹಿಸಿದ ಘನ ತ್ಯಾಜ್ಯಗಳಿಗೆ Effective Microorganism (EM) ಮಿಶ್ರಣವನ್ನು ಸಿಂಪಡಿಸುವುದು ಹಾಗೂ ಚರಂಡಿಗಳಿಗೂ ಸಿಂಪರಣೆ ಮಾಡುವುದು. ಮಾಹೆಯಾನ ಭರಿಸುವ ವೆಚ್ಚ. |
| 8 | ಎರೆಹುಳು ಸಾಕಾಣಿಕೆ | | 0.015 | 0.015 | ಒಟ್ಟು 6 ತೊಟ್ಟಿಗಳಲ್ಲಿ 3 ಕೆ.ಜಿ ಎರೆಹುಳುಗಳನ್ನು ಕೆ.ಜಿ. 1ಕ್ಕೆ ರೂ.500/– ರಂತೆ ಖರೀದಿಸಿದೆ. ಹಾಲಿ ಎರೆ ಹುಳು ಗೊಬ್ಬರ ಸುಮಾರು 6 ಟನ್ ದಾಸ್ತಾನಿನಲ್ಲಿರುತ್ತದೆ. 1 ಟನ್‌ಗೆ ರೂ.6000/– ರಂತೆ ವಿಲೇವಾರಿಯಾಗುವ ಸಾಧ್ಯತೆ ಇರುತ್ತದೆ. |
| 9 | ಘನ ತ್ಯಾಜ್ಯ ವಸ್ತುಗಳ ವಿಲೇವಾರಿ ಸಂಬಂಧ ಪ್ರತಿ ಕುಟುಂಬಗಳಿಂದ | – | – | – | 3698 ಪ್ರಾಪರ್ಟಿಗಳಿಗೆ ರೂ.200/– ರಂತೆ ಒಟ್ಟು 7.39 ಲಕ್ಷ ಕರ ಕರ ವಸೂಲಿ ಬಾಬ್ತು ವಸೂಲಿಗೆ ಕ್ರಮ ವಹಿಸಲಾಗಿದೆ. |



ಉತ್ಪಾದಿಸಿದ ಎರೆಹುಳು ಗೊಬ್ಬರವನ್ನು ಸಂಗ್ರಹಿಸಿರುವುದು.




ಗ್ರಾಮ ಪಂಚಾಯತಿ ಸಿಬ್ಬಂದಿಗಳ ಕಾರ್ಯವೈಖರಿಯ ಪ್ರಗತಿಗೆ ನಾಂದಿ

## ಕರ ವಸೂಲಾತಿ

ಅಣ್ಣೇಶ್ವರ ಗ್ರಾಮ ಪಂಚಾಯತಿಗೆ ವಾರ್ಷಿಕ 56.00 ಲಕ್ಷ ತೆರಿಗೆ ಬೇಡಿಕೆ ಇದ್ದು, ಶೇಕಡ 97 ರಷ್ಟು ವಸೂಲಾತಿಯಾಗುತ್ತಿರುವುದರಿಂದ ಗ್ರಾಮ ಪಂಚಾಯತಿ ಆರ್ಥಿಕವಾಗಿ ಸುಸ್ಥಿತಿಯಲ್ಲಿರುತ್ತದೆ. ಸದರಿ ಗ್ರಾಮ ಪಂಚಾಯತಿಯಲ್ಲಿ ತೆರಿಗೆ ವಸೂಲಾತಿಗೆ ತೆರಿಗೆ ಬಾಕಿ ಇರುವ ಮನೆಗಳಿಗೆ ತಿಳುವಳಿಕೆ ಪತ್ರ ನೀಡಲಾಗುತ್ತಿದೆ ಮತ್ತು ತಿಳುವಳಿಕೆ ಪತ್ರಕ್ಕೆ ಸ್ಪಂದಿಸದ ಮನೆಯವರಿಗೆ ಜಪ್ತಿ ವಾರಂಟ್ ಹೊರಡಿಸಲಾಗುತ್ತಿದೆ ಹಾಗೂ ಪ್ರತಿ ವರ್ಷ ಜನವರಿ – ಫೆಬ್ರವರಿ ಮಾಹೆಯಲ್ಲಿ ಕರ ವಸೂಲಾತಿ ಆಂಧೋಲನವನ್ನು ಎಲ್ಲಾ ಗ್ರಾಮಗಳಲ್ಲಿ ಹಮ್ಮಿಕೊಂಡು ಕರ ವಸೂಲಾತಿ ಮಾಡಲಾಗುವುದು.

**ಅಣ್ಣೇಶ್ವರ ಗ್ರಾಮ ಪಂಚಾಯತಿಯ ಘನ ತ್ಯಾಜ್ಯವಸ್ತುಗಳ ಸಂಸ್ಕರಣ ಘಟಕದ ನಕ್ಷೆ**




ಗ್ರಾಮ ಪಂಚಾಯತಿ ಆಡಳಿತದಲ್ಲಿ ಸ್ವಂತ ಸಂಪನ್ಮೂಲಗಳನ್ನು ಕ್ರೋಢೀಕರಿಸುವುದು ಅವಶ್ಯಕವಾಗಿದೆ. ಸರ್ಕಾರದ ಯಾವುದೇ ಯೋಜನೆ ಅಥವಾ ಅನುದಾನವನ್ನು ಅವಲಂಬಿತವಾಗದೇ ಸ್ವಂತ ಸಂಪನ್ಮೂಲಗಳಿಂದ ಆಡಳಿತ ನಡೆಸಲು ಸಹಕಾರಿಯಾಗಿದೆ. ಗಾಂಧೀಜಿಯವರು ಹೇಳಿದಂತೆ ಗ್ರಾಮ ಸ್ವರಾಜ್ ಕಲ್ಪನೆಯನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಪ್ರಯತ್ನಮಾಡುವುದು ಅವಶ್ಯಕವಾಗಿದೆ.

ಹಸಿ ತ್ಯಾಜ್ಯ ಮತ್ತು ಒಣ ತ್ಯಾಜ್ಯವನ್ನು ಪ್ರತ್ಯೇಕವಾಗಿ ವಿಂಗಡಿಸುವುದು ಸೂಕ್ತವಾಗಿದೆ.

# ಸ್ವ-ಸಹಾಯ ಸಂಘ : ಒಂದು ಅವಲೋಕನ




ನಿಂಗಯ್ಯ ಟಿ.*

ಮೊಬೈಲ್ : 9242834721


ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕು, ಹೆಣ್ಣೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಗಂಟೆ ಪಾಳ್ಯದಲ್ಲಿ ಸ್ಥಾಪಿಸಿರುವ ಶ್ರೀ ಲಕ್ಷ್ಮೀ ನರಸಿಂಹ ಸ್ವಾಮಿ ಸ್ವ ಸಹಾಯ ಸಂಘದ ಸಾಧನೆಯ ಕಿರು ಚಿತ್ರಣ.

ಭಾರತ ಗ್ರಾಮಗಳ ದೇಶವಾಗಿದೆ. ಭಾರತ ದೇಶದಲ್ಲಿ ಶೇ. 70ಕ್ಕೂ ಹೆಚ್ಚು ಜನರು ಗ್ರಾಮಗಳಲ್ಲಿಯೇ ವಾಸಿಸುತ್ತಿದ್ದಾರೆ. ಇವರಲ್ಲಿ ಸುಮಾರು ಶೇ. 60-70ರಷ್ಟು ಜನರು ಬಡತನದಿಂದ ಬದುಕು ಸಾಗಿಸುತ್ತಿದ್ದಾರೆ. ಇವರಲ್ಲಿ ಬಹುತೇಕ ಜನರಿಗೆ ಆಹಾರ, ಶಿಕ್ಷಣ, ವಸತಿ, ಆರೋಗ್ಯ, ಉದ್ಯೋಗ ಇತ್ಯಾದಿ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿಲ್ಲ. ಇದಕ್ಕೆ ಮೂಲ ಕಾರಣ ಗ್ರಾಮೀಣ ಬಡಜನರ ಅವಶ್ಯಕತೆಗಳನ್ನು ಕುರಿತು ಚಿಂತಿಸುವ, ಚರ್ಚಿಸುವ ಮತ್ತು ಪರಿಹಾರ ಕಂಡುಕೊಳ್ಳಲು ಅವರದೇ ಆದ ಸಂಘಸಂಸ್ಥೆಗಳು ಇಲ್ಲದಿರುವುದೇ ಆಗಿದೆ. ಈ ನಿಟ್ಟಿನಲ್ಲಿ ಗ್ರಾಮೀಣ ಬಡಜನರು ಸಂಘಟಿತರಾಗಿ ಅವರ ಅನೇಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ದೃಷ್ಟಿಯಿಂದ ಸರ್ಕಾರ ಗ್ರಾಮೀಣ ಪ್ರದೇಶದಲ್ಲಿ ಸ್ವಸಹಾಯ ಸಂಘಗಳನ್ನು ಸ್ಥಾಪಿಸಿದೆ.

## ಗ್ರಾಮೀಣ ಜನರ ಪರಿಸ್ಥಿತಿ

ಇಂದು ಗ್ರಾಮಗಳ ಮತ್ತು ಜನರ ಪರಿಸ್ಥಿತಿ ದುಃಸ್ಥಿತಿಯಲ್ಲಿದೆ. ಬರಗಾಲದಿಂದ ತತ್ತರಿಸಿರುವ ಜನರು ಗ್ರಾಮೀಣ ಪ್ರದೇಶಗಳನ್ನು ತೊರೆದು ನಗರ, ಪಟ್ಟಣಗಳ ಕಡೆಗೆ ಉದ್ಯೋಗಗಳನ್ನು ಹುಡುಕಿಕೊಂಡು ವಲಸೆ ಹೋಗುತ್ತಿದ್ದಾರೆ. ವಿದ್ಯಾವಂತ ಯುವಕರು ಉದ್ಯೋಗವಿಲ್ಲದೆ ಅಡ್ಡದಾರಿ ಹಿಡಿಯುತ್ತಿದ್ದಾರೆ. ಇಂತಹ ಗ್ರಾಮಗಳಲ್ಲಿ ಬಡವರ ದೀನದಲಿತರ, ನಿರ್ಗತಿಕರ ಅಸಹಾಯಕರ ಬದುಕು ಚಿಂತಾಜನಕವಾಗಿದೆ. ಗ್ರಾಮೀಣ ಭಾಗದಲ್ಲಿ ಇನ್ನೂ ಶೋಷಣೆ, ದಬ್ಬಾಳಿಕೆ, ಕಿರುಕುಳ, ಅವಮಾನ, ಅನ್ಯಾಯ ಇತ್ಯಾದಿಗಳು ಮುಂದುವರೆಯುತ್ತಲೇ ಇವೆ. ಬಹುತೇಕ ಗ್ರಾಮಗಳಲ್ಲಿ ನೀರು, ರಸ್ತೆ, ಚರಂಡಿ, ವಿದ್ಯುತ್, ಸಾರಿಗೆ-ಸಂಪರ್ಕ ಇತ್ಯಾದಿ ಮೂಲಭೂತ ಸೌಕರ್ಯಗಳಿಲ್ಲದೆ ಸೊರಗುತ್ತಿವೆ. ಇಂತಹ ಪರಿಸ್ಥಿತಿಯಲ್ಲಿ ಗ್ರಾಮೀಣ ಬಡಜನರ ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿಯನ್ನು ಸುಧಾರಿಸುವಲ್ಲಿ ಸರ್ಕಾರ ಹತ್ತು ಹಲವು ಯೋಜನೆ ಮತ್ತು ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದೆ. ಸರ್ಕಾರ ಈ ಯೋಜನೆ ಮತ್ತು ಕಾರ್ಯಕ್ರಮಗಳನ್ನು ಬಡಜನಸಾಮಾನ್ಯರಿಗೆ ತಲುಪುವಂತೆ ಮಾಡುವಲ್ಲಿ ಸ್ವಸಹಾಯ ಸಂಘಗಳ ಪಾತ್ರ ಮಹತ್ವಪೂರ್ಣವಾದುದು.

## ಸ್ವ-ಸಹಾಯ ಸಂಘ ಎಂದರೇನು ?

ಬಡತನ ರೇಖೆಗಿಂತ ಕೆಳಗೆ ವಾಸಿಸುತ್ತಿರುವ ಗ್ರಾಮೀಣ ಪ್ರದೇಶದ ಸಮಾನ ಸಾಮಾಜಿಕ ಮತ್ತು ಆರ್ಥಿಕವಾಗಿ ಪರಸ್ಪರ ವಿಶ್ವಾಸ ಮತ್ತು ಸಹಾಯದ ಮೂಲಕ ತಮ್ಮ ಆರ್ಥಿಕ ಅಭಿವೃದ್ಧಿಗಾಗಿ ಸ್ವ ಇಚ್ಛೆಯಿಂದ ರಚಿಸಿಕೊಂಡ ಒಂದು ಗುಂಪನ್ನು


* ಸಂಶೋಧನಾ ವಿದ್ಯಾರ್ಥಿ, ರಾಜ್ಯಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-56

"ಸ್ವಸಹಾಯ ಸಂಘ" ಎಂದು ಕರೆಯಲಾಗುತ್ತದೆ. ಈ ಸಂಘದ ಸದಸ್ಯರು ತಮ್ಮ ಅಭಿವೃದ್ಧಿಯ ಬಗ್ಗೆ ಚಿಂತಿಸಲು ಪ್ರತೀ ವಾರ ಎಲ್ಲಾ ಸದಸ್ಯರಿಗೂ ಹೆಚ್ಚು ಅನುಕೂಲವಾದ ಸಮಯದಲ್ಲಿ ಒಂದೆಡೆ ಸೇರಿ ಮುಕ್ತವಾಗಿ ಚರ್ಚಿಸಿ ತೀರ್ಮಾನಗಳನ್ನು ತೆಗೆದುಕೊಳ್ಳುವರು. ಉಳಿತಾಯ, ಸಾಲ ನೀಡಿಕೆ, ಸಾಲದ ಉದ್ದೇಶ, ಸಾಲದ ಮೊತ್ತ, ಬಡ್ಡಿಯ ದರ, ಸಾಲದ ಮರುಪಾವತಿಯ ಅವಧಿ ಇತ್ಯಾದಿ ಎಲ್ಲಾ ವಿಚಾರಗಳನ್ನು ಸಂಘದ ಸಭೆಯಲ್ಲಿಯೇ ನಿರ್ಧರಿಸುವರು. ಸದಸ್ಯರ ಉಳಿತಾಯವನ್ನು ಕೂಡ ಸಂಘದ ಸಭೆಯಲ್ಲಿಯೇ ಸಂಗ್ರಹಿಸಿ ಹಾಗೆಯೇ ಒಟ್ಟಾರೆ ಸಂಗ್ರಹಿಸಿದ ಹಣವನ್ನು ಹೇಗೆ ವಿನಿಯೋಗಿಸಬೇಕು ಎಂಬ ನಿರ್ಧಾರವನ್ನು ಎಲ್ಲರೂ ಸೇರಿ ತೆಗೆದುಕೊಳ್ಳುವರು.

ಸ್ವಸಹಾಯ ಸಂಘದ ಮೂಲಕ ಆರ್ಥಿಕ ಸ್ವಾವಲಂಬನೆ ಹೊಂದುವಲ್ಲಿ ಕೇಂದ್ರ ಸರ್ಕಾರವು ಅಸ್ತಿತ್ವಕ್ಕೆ ತಂದಿರುವ ಸ್ವರ್ಣ ಜಯಂತಿ ಸ್ವರೋಜ್‌ಗಾರ್ ಯೋಜನೆಯು ಒಂದು ಮಹತ್ವಾಕಾಂಕ್ಷೆ ಯೋಜನೆಯಾಗಿದೆ. ಇದು 1999ರಲ್ಲಿ ಬಡತನ ವಿರೋಧಿ ಕಾರ್ಯಕ್ರಮವಾಗಿ ಅನುಷ್ಠಾನಕ್ಕೆ ಬಂದಿತು. ಈ ಯೋಜನೆಯು ಸ್ವಯಂ ಉದ್ಯೋಗದಂತಹ ಅಂಶಗಳನ್ನು ಒಳಗೊಂಡಿದೆ. ಇದು ಸ್ವಸಹಾಯ ಸಂಘಗಳ ಉಳಿತಾಯ, ಸಾಲ, ಸಹಾಯಧನ, ತಾಂತ್ರಿಕತೆ, ಮೂಲಭೂತ ಸೌಕರ್ಯಗಳು ಮತ್ತು ಮಾರುಕಟ್ಟೆ ವ್ಯವಸ್ಥೆಯನ್ನು ಆಧರಿಸಿದೆ. ಈ ಯೋಜನೆಯು 5 ವರ್ಷಗಳ ನಿಗಧಿತ ಅವಧಿಯಲ್ಲಿ ಶೇಕಡ 30 ರಷ್ಟು ಬಡಕುಟುಂಬಗಳನ್ನು ಬಡತನ ರೇಖೆಗಿಂತ ಮೇಲೆತ್ತುವ ಗುರಿ ಹೊಂದಿದೆ. ಜೊತೆಗೆ ಪ್ರತಿ ಕುಟುಂಬ ಮಾಸಿಕ ಕನಿಷ್ಠ 2,000/– (ಎರಡು ಸಾವಿರ ರೂ.ಗಳು) ವರಮಾನವನ್ನು ಹೊಂದುವ ಗುರಿಯನ್ನು ಹೊಂದಿದೆ. ಇಂತಹ ಸಂಘಗಳು ಪುರುಷ ಮತ್ತು ಮಹಿಳಾ ಸಂಘಗಳಾಗಿದ್ದು ಸ್ವಯಂ ಉದ್ಯೋಗ ಗುರಿಯನ್ನು ಹೊಂದಬಹುದು.

ಈ ಹಿನ್ನೆಲೆಯಲ್ಲಿ ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕು, ಹೇರೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗಂಟೆಪಾಳ್ಯದಲ್ಲಿ ಸ್ಥಾಪಿಸಿರುವ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ಸ್ವಸಹಾಯ ಸಂಘಕ್ಕೆ ದಿನಾಂಕ 16.07.2011ರಂದು ಭೇಟಿನೀಡಿ ಅವರಿಂದ ಪಡೆದ ಮಾಹಿತಿಗಳನ್ನು ಸಂಗ್ರಹಿಸಿ ಅವಲೋಕನ ಮಾಡಲಾಗಿದೆ.

**ಸಂಘದ ರಚನೆ ಮತ್ತ ಸ್ವರೂಪ :** ಶ್ರೀ ಲಕ್ಷ್ಮೀ ನರಸಿಂಹ ಸ್ವಾಮಿ ಸ್ವಸಹಾಯ ಸಂಘವು 2005ರಲ್ಲಿ 20 ಸದಸ್ಯರೊಂದಿಗೆ ಸ್ಥಾಪಿಸಲಾದ ಮಹಿಳಾ ಸ್ವಸಹಾಯ ಸಂಘವಾಗಿದೆ. ಇದು ಇಬ್ಬರು ಪ್ರತಿನಿಧಿಗಳನ್ನು ಹೊಂದಿದ್ದು, ಮೊದಲ ಪ್ರತಿನಿಧಿಯಾಗಿ ಶ್ರೀಮತಿ ಯಲ್ಲಮ್ಮ, 2ನೇ ಪ್ರತಿನಿಧಿಯಾಗಿ ಶ್ರೀಮತಿ ಸುಮಿತ್ರ, ಕಾರ್ಯನಿರ್ವಹಿಸುತ್ತಿದ್ದಾರೆ. ಶ್ರೀಮತಿ ಸಾವಿತ್ರಮ್ಮ ಅಂಗನವಾಡಿ ಶಿಕ್ಷಕಿ ಸಂಘದ ಉಸ್ತುವಾರಿ ನೋಡಿಕೊಳ್ಳುತ್ತಿದ್ದಾರೆ. ಇತರರು ಸದಸ್ಯರಾಗಿರುತ್ತಾರೆ. ಈ ಸಂಘದ ಸದಸ್ಯರು ಎಲ್ಲರೂ 18 ವರ್ಷಕ್ಕಿಂತ ಮೇಲ್ಪಟ್ಟವರಾಗಿದ್ದು, ಸಕ್ರಿಯ ಸದಸ್ಯರಾಗಿರುತ್ತಾರೆ. ಈ ಸಂಘವು ಪ್ರತಿ ಬುಧವಾರ ಸಭೆ ಸೇರುತ್ತಿದ್ದು ಎಲ್ಲಾ ಸದಸ್ಯರು ಕಡ್ಡಾಯವಾಗಿ ಹಾಜರಾಗುತ್ತಿದ್ದಾರೆಂದು ಸಂಘದ ಪ್ರತಿನಿಧಿಗಳು ಮತ್ತು ಉಸ್ತುವಾರಿ ನೋಡಿಕೊಳ್ಳುವ ಅಂಗನವಾಡಿ ಶಿಕ್ಷಕರು ಹೇಳಿರುತ್ತಾರೆ. ಈ ಸಂಘವು ಸ್ವರ್ಣಜಯಂತಿ ಸ್ವರೋಜ್‌ಗಾರ್ ಯೋಜನೆಯ ಪ್ರಮುಖ ಉದ್ದೇಶವಾದ ಗ್ರಾಮೀಣ ಪ್ರದೇಶದ ಬಡಜನರಿಗೆ ಅಂದರೆ ಬಡತನ ರೇಖೆಗಿಂತ ಕೆಳಗಿರುವವರಿಗೆ ಆರ್ಥಿಕ ಮಟ್ಟವನ್ನು ಹೆಚ್ಚಿಸಿ ಅವರನ್ನು ಮೇಲೆ ತರುವ ಉದ್ದೇಶ ಹೊಂದಿದೆ. ಇದರಲ್ಲಿನ ಬಹುತೇಕ ಸದಸ್ಯರು ಬಡತನ ರೇಖೆಗಿಂತ ಕೆಳಗಿರುವವರಾಗಿರುತ್ತಾರೆ.

**ಸಂಘದ ಆರ್ಥಿಕ ಚಟುವಟಿಕೆ :** ಸಂಘವು ವಾರಕ್ಕೆ 10 ರೂ.ಗಳಂತೆ ಸದಸ್ಯರಿಂದ ವಂತಿಕೆ ಸಂಗ್ರಹಿಸಲಾಗುತ್ತಿದೆ. ಸದಸ್ಯರಿಗೆ 15–20 ಸಾವಿರ ರೂ.ಗಳವರೆಗೆ ವೈಯಕ್ತಿಕ ಸಾಲ ನೀಡುತ್ತಿದ್ದು, ಸದಸ್ಯರು ಅದರ ಸದುಪಯೋಗಪಡಿಸಿ ಕೊಂಡಿರುತ್ತಾರೆ. ಈ ವೈಯಕ್ತಿಕ ಸಾಲದ ಮೇಲೆ ಶೇಕಡ 2 ಮಾಸಿಕ ಬಡ್ಡಿ ವಿಧಿಸಿದ್ದು, ಸಾಲದ ಕಂತು ಮತ್ತು ಬಡ್ಡಿಯನ್ನು ಕ್ರಮಬದ್ಧ ವಾಗಿ ಕಟ್ಟಿಕೊಂಡು ಹೋಗಿರುತ್ತಾರೆ. ಸಾಲ ವಸೂಲಾತಿ ಅವಧಿ ಸಂಘದ ನಿಯಮದಂತೆ 5 ವರ್ಷವಿದ್ದರೂ ಅವಧಿಗೆ ಮೊದಲೇ ತೀರಿಸಿರುತ್ತಾರೆ. ಸಂಘವು ಇದುವರೆವಿಗೂ ಸುಮಾರು 76,000/– ರೂ.ಗಳನ್ನು ಉಳಿತಾಯ ಮಾಡಿ ಅದಕ್ಕೆ ಸುಮಾರು 74,000/– ರೂ. ಬಡ್ಡಿ ಬಂದಿರುತ್ತದೆ ಹಾಗೂ 2006–07ನೇ ಸಾಲಿಗೆ ರೂ. 5,000/– ಸರ್ಕಾರದಿಂದ ಸುತ್ತು ನಿಧಿ ಬಂದಿರುತ್ತದೆ.

ಈ ಸಂಘವು ಗುಬ್ಬಿ ನಗರದಲ್ಲಿರುವ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಇವರಿಂದ ಸಾಲದ ನೆರವನ್ನು ಪಡೆಯುತ್ತಿದೆ. ಸಂಘ ಸಾಲ ಮತ್ತು ಸಹಾಯ ಧನ ಎರಡನ್ನೂ ಒಳಗೊಂಡ ಕಾರ್ಯಕ್ರಮಗಳಿಗೆ ಒಳಪಟ್ಟಿದೆ. ಹಾಗಾಗಿ ಇತ್ತೀಚೆಗೆ 2010ನೇ ಸಾಲಿಗೆ ಕುರಿ ಸಾಕಾಣಿಕೆಗಾಗಿ ಒಂದು ಲಕ್ಷ ರೂ. ಸಬ್ಸಿಡಿ ಬಂದಿದ್ದು, ಬ್ಯಾಂಕಿನ ಸಾಲವನ್ನು ನಿರೀಕ್ಷಿಸುತ್ತದೆ. ಆದರೆ ಸದಸ್ಯರು ಹೇಳಿದ ಪ್ರಕಾರ ಬ್ಯಾಂಕ್‌ನ ಸಹಕಾರ ಅಷ್ಟಾಗಿ ದೊರಕುತ್ತಿಲ್ಲ. ಬ್ಯಾಂಕ್‌ನ ಬದಲಾಗಿ ವ್ಯವಸಾಯ ಉತ್ಪನ್ನ ಸಹಕಾರ ಸಂಘ (ವಿ.ಎಸ್.ಎಸ್.ಎನ್.)ಕ್ಕೆ ಕೊಟ್ಟಿದ್ದರೆ ಹೆಚ್ಚು ಅನುಕೂಲ. ಆದರೆ ವಿ.ಎಸ್.ಎಸ್.ಎನ್ 3 ಬಾರಿ ಮಾತ್ರ ಸಾಲ ನೀಡುತ್ತದೆ. ಹಾಗಾಗಿ ಪ್ರಯೋಜನಕಾರಿಯಾಗುವುದಿಲ್ಲ. ವಿ.ಎಸ್.ಎಸ್.ಎನ್. ಬಡ್ಡಿ ದರವೂ ಕಡಿಮೆ ಅಂದರೆ 4 ಇದ್ದು ಹೆಚ್ಚು ಅನುಕೂಲಕರ.

**ಸಂಘದ ಕಾರ್ಯಚಟುವಟಿಕೆ (ಉತ್ಪಾದನೆ) ಮತ್ತು ಮಾರುಕಟ್ಟೆ :** ಈ ಸಂಘವು ಹಲವಾರು ಚಟುವಟಿಕೆಗಳನ್ನು ಹೊಂದಿದ್ದು, ಸ್ಥಳೀಯವಾಗಿ ದೊರೆಯುವ ಅಡಕೆ ಪಟ್ಟೆಯಲ್ಲಿ ಊಟದ ತಟ್ಟೆ ತಯಾರಿಕೆ, ಅಡಿಕೆ ವ್ಯಾಪಾರ, ಊದುಬತ್ತಿ ತಯಾರಿಕೆ, ಹೂ ಕಟ್ಟಿ ಮಾರುವುದು, ಕುರಿ ಸಾಕಾಣಿಕೆಯಂತಹ ಚಟುವಟಿಕೆಯಲ್ಲಿ ತೊಡಗಿದ್ದು, ಯಶಸ್ವಿಯಾಗಿ ನಿರ್ವಹಿಸಿ ಕೊಂಡು ಹೋಗುತ್ತಿದೆ. ಸಂಘವು ತಯಾರಿಸಿದ ಉತ್ಪಾದನಾ ವಸ್ತುಗಳಿಗೆ ಸ್ಥಳೀಯ ಗುಬ್ಬಿ ಮಾರುಕಟ್ಟೆ ವ್ಯವಸ್ಥೆ ಇರುತ್ತದೆ. ಹಾಗೂ ಸಂಘವು ಇದುವರೆಗೂ ಒಂದು ಕೋಟಿಗೂ ಅಧಿಕವಾದ ವ್ಯವಹಾರ ನಡೆಸುತ್ತಿದೆ ಎಂದು ಸಂಘದ ಸದಸ್ಯರು ತಿಳಿಸಿರುತ್ತಾರೆ.

**ಸಂಘಕ್ಕೆ ತರಬೇತಿ ಕಾರ್ಯಕ್ರಮ :** ಈ ಸಂಘದ ಸದಸ್ಯರುಗಳಿಗೆ ಎ.ಆರ್.ಎಫ್. ದೊಡ್ಡಬಳ್ಳಾಪುರ, ಗುಬ್ಬಿ ತಾಲ್ಲೂಕು ಪಂಚಾಯ್ತಿ, ಹೇರೂರಿನಲ್ಲಿರವ ಐ.ಟಿ.ಐ. ಕಾಲೇಜಿನಲ್ಲಿ ಹಸು ಸಾಕಾಣಿಕೆ, ಕುರಿಸಾಕಾಣಿಕೆ, ಊದುಬತ್ತಿ ತಯಾರಿಕೆ, ಸುಲಪಟ್ಟೆ ಎಲೆಯಲ್ಲಿ ಊಟದ ತಟ್ಟೆ ತಯಾರಿಕೆ ಮುಂತಾದವುಗಳಿಗೆ ತರಬೇತಿ ನೀಡಿರುತ್ತಾರೆ. ಆದರೆ ಸದಸ್ಯರು ಇನ್ನೂ ಹೆಚ್ಚಿನ ತರಬೇತಿಯನ್ನು ನಿರೀಕ್ಷಿಸುತ್ತಾರೆ.

**ಸಂಘದ ಲೆಕ್ಕಪತ್ರ ತಯಾರಿಕೆ ಮತ್ತು ಪರಿಶೋಧನೆ :** ಈ ಸಂಘದ ಲೆಕ್ಕಪತ್ರಗಳು ಸಂಘದ ನಡವಳಿಕೆಗಳು, ಸದಸ್ಯರ ಪಾಸ್ ಪುಸ್ತಕಗಳು ಮುಂತಾದವುಗಳನ್ನು ಕ್ರಮಬದ್ಧವಾಗಿ ನಿರ್ವಹಿಸಿರುತ್ತಾರೆ. ಈ ನಿರ್ವಹಣೆಗೆ ಸಿ.ಡಿ.ಪಿ.ಓ. ಕಛೇರಿ ಗುಬ್ಬಿಯಲ್ಲಿ ತರಬೇತಿ ಕೊಟ್ಟಿರುತ್ತಾರೆ. ಹಾಗೆಯೇ ಸಿ.ಡಿ.ಪಿ.ಓ. ಕಛೇರಿಯಿಂದ ಲೆಕ್ಕಪರಿಶೋಧನೆಯು ನಡೆದಿರುತ್ತದೆ. ಹಾಗಾಗಿಯೇ ಈ ಸಂಘವು ಈ ಮೇಲಿನ ಎಲ್ಲಾ ಚಟುವಟಿಕೆಗಳ ಆಧಾರದ ಮೇಲೆ ಗ್ರೇಡಿಂಗ್ ವ್ಯವಸ್ಥೆಯಲ್ಲಿ 80–100% ಗ್ರೇಡಿಂಗ್‌ನಲ್ಲಿ ಈ ಸಂಘ ನಡೆಯುತ್ತಿದೆ.

**ಸಂಘದ ವಿಶೇಷ ಸಾಧನೆಗಳು :** ಸಂಘವು ಯಾವುದೇ ರಾಜಕೀಯ ಚಟುವಟಿಕೆಗಳಲ್ಲಾಗಲೀ ರಾಜಕೀಯ ಪಕ್ಷಗಳ ಚಟುವಟಿಕೆಗಳಲ್ಲಾಗಲೀ ಭಾಗವಹಿಸುವುದಾಗಲೀ, ರಾಜಕೀಯ ಪಕ್ಷಗಳ ಹಸ್ತಕ್ಷೇಪವಾಗಲೀ ಇರುವುದಿಲ್ಲ. ಆದರೆ ವಿಧಾನಸಭಾ ಸದಸ್ಯರು ಸಹಕಾರ ಕೋರಿರುತ್ತಾರೆ. ಹಾಗೆಯೇ ಸಂಘದ ಸದಸ್ಯರು ಸಹಕಾರ ತೋರಿರುತ್ತಾರೆ. ಹಾಗೆಯೇ ಸಂಘದ ಸದಸ್ಯರು ಕೌಟುಂಬಿಕ ಜೀವನದಲ್ಲಿ ಕುಟುಂಬ ವರ್ಗದ ಸದಸ್ಯರು ತುಂಬಾ ಸಹಕಾರ ನೀಡಿರುತ್ತಾರೆ ಎಂಬ ಅಭಿಪ್ರಾಯವನ್ನು ಸಂಘದ ಸದಸ್ಯರು ವ್ಯಕ್ತಪಡಿಸಿರುತ್ತಾರೆ. ಸಂಘವು ತುಂಬಾ ಭಾವನಾತ್ಮಕ ಸಂಬಂಧ ಹೊಂದಿದ್ದು, ಸಂಘದ ಸದಸ್ಯರಿಗೆ ಯಾರಿಗೇ ಆದರೂ ಕಷ್ಟ ಬಂದಾಗ 50,000/–ರೂ.ಗಳಿಂದ 1 ಲಕ್ಷದವರೆಗೆ ತಮ್ಮ ತಮ್ಮಲ್ಲೇ ವೈಯಕ್ತಿಕ ಹಣ ಶೇಖರಿಸಿ ಅವರಿಗೆ ನೆರವು ನೀಡುವುದರಿಂದ ಇದು ಸಂಘದ ಸದಸ್ಯರಿಗೆ ಭಾವನಾತ್ಮಕ ಸಂಬಂಧ ಹೊಂದಿದ್ದು, ಉತ್ತಮವಾಗಿ ಕಾರ್ಯನಿವಾಹಿಸುತ್ತದೆ.

**ಸದಸ್ಯರಿಂದ ಬಂದ ಸಲಹೆ ಸೂಚನೆಗಳು :** ಸಂಘವು ಅತ್ಯುತ್ತಮವಾಗಿ ನಡೆದುಕೊಂಡು ಹೋಗುವುದರಿಂದ ಅದನ್ನು ಮತ್ತಷ್ಟು ವಿಸ್ತರಿಸುವ ಉದ್ದೇಶ ಹೊಂದಿದೆ. ಸದಸ್ಯರು ಸಂಘದಿಂದ ಹೆಚ್ಚು ಸೌಲತ್ತುಗಳನ್ನು ಪಡೆಯುತ್ತಿರುವುದು ಸಂತೋಷದಾಯಕವಾಗಿರುತ್ತದೆ ಎಂಬುದನ್ನು ವ್ಯಕ್ತಪಡಿಸಿರು ತ್ತಾರೆ. ಸಾಲದ ನೆರವಿನಲ್ಲಿ ಬ್ಯಾಂಕಿನ ಸಹಕಾರ ಸರಿಯಾಗಿ ಸಿಗದ ಕಾರಣ ವಿ.ಎಸ್.ಎಸ್.ಎನ್.ಗೆ ಕೊಟ್ಟರೆ ಉತ್ತಮ ವಾಗಿರುತ್ತದೆ ಎಂಬ ಸಲಹೆ ನೀಡಿದ್ದಾರೆ. ಜೊತೆಗೆ ಸದಸ್ಯರ ಅಪೇಕ್ಷೆಯಂತೆ ಸರ್ಕಾರ ಬ್ಯಾಂಕುಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿ ಹೆಚ್ಚು ಹೆಚ್ಚು ಸಹಕರಿಸುವಂತೆ ನೋಡಿಕೊಳ್ಳಬೇಕು ಎಂಬ ಸಲಹೆ ನೀಡಿದ್ದಾರೆ. ಮತ್ತು ವಿ.ಎಸ್.ಎಸ್.ಎನ್.ಗೆ ಇರುವ 3 ಭಾರೀ

ಸಾಲದ ಮಿತಿಯನ್ನು ತೆಗೆದುಹಾಕಬೇಕು ಎಂಬ ಸಲಹೆ ನೀಡಿದ್ದಾರೆ. ಕೃಷಿ ಚಟುವಟಿಕೆಗಳನ್ನು ಮಾಡುವುದರಿಂದ ಉಪಕಸುಬನ್ನು ಮಾಡಲಿಕ್ಕೆ ಹೆಚ್ಚು ಅವಕಾಶ ಒದಗಿಸಿ ಕೊಡಬೇಕು ಎಂಬ ಹಲವು ಸಲಹೆ ನೀಡಿರುತ್ತಾರೆ. ಹೀಗಾಗಿ ಶ್ರೀ ಲಕ್ಷ್ಮಿ ನರಸಿಂಹ ಸ್ವಾಮಿ ಸ್ವಸಹಾಯ ಸಂಘ ಅತ್ಯುತ್ತಮವಾಗಿ ಯಶಸ್ವಿಯಾಗಿ ನಡೆಯುತ್ತಿದ್ದು, ಸರ್ಕಾರದ ಬ್ಯಾಂಕುಗಳ, ಮಾರುಕಟ್ಟೆಯ ಸೌಲಭ್ಯ ಮತ್ತು ಇನ್ನೂ ಹೊಸ ಹೊಸ ತರಬೇತಿಯನ್ನು ಕೊಟ್ಟಿದ್ದೇ ಆದರೆ ಇಂತಹ ಇನ್ನೂ ಹತ್ತಾರು ಸ್ವಸಹಾಯ ಸಂಘಗಳು ಉತ್ತಮವಾಗಿ ನಡೆಯುತ್ತವೆ.

## ಸ್ವಸಹಾಯ ಸಂಘದ ವಿಫಲತೆಗೆ ಕಾರಣಗಳು:

1. ಉಳಿತಾಯಗಳಿಗೆ ಪ್ರಾಮುಖ್ಯತೆಯನ್ನು ನೀಡದೆ ಸಾಲಪಡೆಯುವುದೇ ಮುಖ್ಯ ಗುರಿಯಾಗಿರಿಸಿ ಕೊಂಡರೆ ಸ್ವಸಹಾಯ ಸಂಘವು ತನ್ನ ಉದ್ದೇಶದಲ್ಲಿ ವಿಫಲತೆಯನ್ನು ಹೊಂದುತ್ತದೆ.

2. ಸ್ವಸಹಾಯ ಸಂಘ ಪ್ರಾರಂಭಗೊಂಡು ಉಳಿತಾಯ ಖಾತೆಯನ್ನು ತೆರೆದು ಬಹಳ ವರ್ಷಗಳ ನಂತರವೂ ಸಾಲ ಜೋಡಣೆಯನ್ನು ಮಾಡದಿದ್ದರೆ ಸಂಘ ತನ್ನ ಉದ್ಧೇಶದಲ್ಲಿ ವಿಫಲಗೊಳ್ಳುತ್ತದೆ.

3. ಸ್ವಸಹಾಯ ಸಂಘವು ಒಂದು ಬಾರಿಯೂ ಸಾಲ ಜೋಡಣೆಯನ್ನು ಮಾಡದೇ ನೇರವಾಗಿ ಎಸ್.ಜಿ.ಎಸ್.ವೈ. ಮುಂತಾದ ಯೋಜನೆಗಳ ಆಶ್ರಯದಲ್ಲಿ ಸಹಾಯ ಧನವನ್ನು ಒಳಗೊಂಡ ಸಾಲವನ್ನು ಒದಗಿಸುವಿಕೆಯಲ್ಲಿ ವಿಫಲವಾಗಲು ಕಾರಣವಾಗುತ್ತದೆ.

4. ಸ್ವಸಹಾಯ ಸಂಘದ ಸದಸ್ಯರು ಪರಸ್ಪರ ಸಹಾಯದ ಮಹತ್ವವನ್ನು ಅರ್ಥಮಾಡಿಕೊಳ್ಳದೇ ಇರುವುದು ವಿಫಲತೆಗೆ ಕಾರಣವಾಗುತ್ತದೆ. ಸಾಲವನ್ನು ಪಡೆಯುವಾಗ ಹಣವು ಕಡಿಮೆ ಇದ್ದು ಸಾಲವನ್ನು ಪಡೆಯುವವರ ಸಂಖ್ಯೆ ಹೆಚ್ಚಾಗಿರುವಾಗ ಆದ್ಯತೆಯ ಮೇಲೆ ಅನುಸರಿಸಿ ಸಾಲವನ್ನು ದೊರಕಿಸಿಕೊಡಬೇಕು. ಪ್ರತಿಷ್ಠೆ ಮತ್ತು ವೈಷಮ್ಯತೆಯು ಸಂಘವನ್ನು ವಿನಾಶದ ಅಂಚಿಗೆ ದೂಡುತ್ತದೆ.

## ಸ್ವಸಹಾಯ ಸಂಘಗಳ ಯಶಸ್ಸಿಗೆ ಪ್ರಮುಖ ಕಾರಣಗಳು

1. ಸ್ವಸಹಾಯ ಗುಂಪು ಸಮಾನ ಮನಸ್ಕರ, ಸಮಾನ ಆರ್ಥಿಕ ಮತ್ತು ಸಾಮಾಜಿಕ ಹಿನ್ನೆಲೆಯನ್ನು ಹೊಂದಿರುವ ಮತ್ತು ಸಮಾನ ಧ್ಯೇಯೋದ್ದೇಶಗಳನ್ನು ಹೊಂದಿರುವ ಜನಸಮೂಹವಾಗಿರಬೇಕು.

2. ಸ್ವಸಹಾಯ ಸಂಘದ ಸದಸ್ಯರುಗಳಲ್ಲಿ ಶಿಸ್ತು ಬದ್ಧತೆ, ಪ್ರಮಾಣಿಕತೆ, ಪರಸ್ಪರ ಗೌರವ, ಪ್ರೀತಿ ಅತೀ ಮುಖ್ಯವಾದುದು.

3. ಸಂಘದ ಸಭೆಗಳನ್ನು ನಿಗದಿತವಾಗಿ ನಡೆಸುವುದು.

4. ಸಾಲವನ್ನು ಸದ್ಬಳಕೆ ಮಾಡಿಕೊಂಡಿರಬೇಕು.

5. ಹೆಚ್ಚಿನ ಪ್ರಮಾಣದಲ್ಲಿ ಸಾಲ ಮರುಪಾವತಿ ಮಾಡಿರಬೇಕು.

6. ಸ್ವಸಹಾಯ ಸಂಘಗಳ ಯೋಜನೆಯಲ್ಲಿ ತರಬೇತಿಗೆ ಹೆಚ್ಚಿನ ಆದ್ಯತೆ ನೀಡಿದರೆ ಸಂಘಗಳು ಯಶಸ್ಸು ಗಳಿಸುತ್ತವೆ.

7. ಸ್ವಸಹಾಯ ಸಂಘಗಳ ಯಶಸ್ಸಿಗೆ ಸಾಲ ನೀಡುವ ಸಂಸ್ಥೆ, ಸ್ವಯಂ ಸೇವಾ ಸಂಸ್ಥೆ ಮತ್ತು ಸರ್ಕಾರದ ಇಲಾಖೆಗಳ ನಡುವೆ ಸಹಕಾರ ಮತ್ತು ಸಮನ್ವಯತೆ ಇರಬೇಕು.

8. ವಯಕ್ತಿಕ ಮತ್ತು ಗುಂಪು ಆರ್ಥಿಕ ಚಟುವಟಿಕೆಗಳ ನಿರ್ವಹಣೆಯು ಸ್ವಸಹಾಯ ಸಂಘದ ಯಶಸ್ಸಿಗೆ ಪ್ರಮುಖ ಕಾರಣವಾಗುತ್ತದೆ.

ಒಟ್ಟಾರೆ ಗ್ರಾಮೀಣ ಪ್ರದೇಶದ ಮತ್ತು ಬಡ ಜನರ ಸರ್ವತೋಮುಖ ಅಭಿವೃದ್ಧಿಗಾಗಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸರ್ಕಾರ ಸ್ವಸಹಾಯ ಸಂಘಗಳ ಮೂಲಕ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದೆ. ಸರ್ಕಾರ ಹಮ್ಮಿಕೊಂಡಿರುವ ಇಂತಹ ಯೋಜನೆಗಳು ಮತ್ತು ಕಾರ್ಯಕ್ರಮಗಳು ವ್ಯವಸ್ಥಿತ ಮತ್ತು ಪರಿಣಾಮಕಾರಿಯಾಗಿ ಅನುಷ್ಠಾನವಾಗಬೇಕಾದರೆ ಅಧಿಕಾರಿಗಳ, ಜನಪ್ರತಿನಿಧಿಗಳ, ಸಂಘಸಂಸ್ಥೆಗಳ ಮತ್ತು ಜನಸಾಮಾನ್ಯರ ಸಹಕಾರ ತುಂಬಾ ಅಗತ್ಯವಾಗಿದೆ.

# ಶ್ರೀ ರೇಣುಕಾಂಭ ಸ್ವಸಹಾಯ ಸಂಘದ ಸಾಧನೆಯ ಚಿತ್ರಣ

ಶ್ರೀ ರೇಣುಕಾಂಭ ಸ್ವಸಹಾಯ ಸಂಘದ ಸದಸ್ಯರುಗಳು ಅಭಿವೃದ್ಧಿ ಹೊಂದಿರುವ ಬಗ್ಗೆ ಅವರುಗಳ ಹೃದಯಾಂತರಾಳದ ಮಾತುಗಳು.

ಶ್ರೀರೇಣುಕಾಂಭ ಸ್ವಸಹಾಯ ಸಂಘ, ಸದಸ್ಯರಾದ ನಾವು ಶಾಗದಡು ಗ್ರಾಮದಲ್ಲಿ ಒಂದು ಕಡೆ ಸೇರಿ 13 ಜನ ವಾರಕ್ಕೆ 20ರೂಗಳಂತೆ ಉಳಿತಾಯ ಹಣವನ್ನು ಬ್ಯಾಂಕಿಗೆ ಜಮಾ ಮಾಡುತ್ತೀದ್ದೇವೆ. ಆದರೆ ನಮಗೆ ಉಳಿತಾಯ ಮಾಡುವ ಬಗ್ಗೆ ಬ್ಯಾಂಕಿಗೆ ಹೋದ ಬಗ್ಗೆ ಯಾವುದೇ ವಿಧವಾದ ತಿಳುವಳಿಕೆ ಇರುವುದಿಲ್ಲ. ಆದ ಕಾರಣ ಎನ್.ಜಿ.ಓ. ಸಂಸ್ಥೆಯುವರು ನಮ್ಮ ಊರಿಗೆ ಬಂದು ಗ್ರಾಮಕ್ಕೆ ಬೇಟಿ ನೀಡಿ ನಮ್ಮೆಲ್ಲರನ್ನು ಒಟ್ಟುಗೂಡಿಸಿ ಒಂದು ಸ್ವಸಹಾಯ ಸಂಘವನ್ನು ರಚನೆ ಮಾಡಿ ನಿಮ್ಮ ಸ್ವಸಹಾಯ ಸಂಘಕ್ಕೆ ರೇಣುಕಾಂಭ ಮಹಿಳಾ ಸ್ವಸಹಾಯ ಸಂಘ ಎಂದು ನಮ್ಮ ಇಚ್ಛೆಯುಂತೆಯೇ ನಾಮಕರಣ ಮಾಡಿದರು ಹಾಗೂ ನಮ್ಮ ಸಂಘದ ಉಳಿತಾಯವನ್ನು ಬ್ಯಾಂಕಿಗೆ ಕಟ್ಟುವ ಸಲುವಾಗಿ ಬ್ಯಾಂಕಿನಲ್ಲಿ ಖಾತೆಯುನ್ನು ಪ್ರಾರಂಭಿಸಿದೆ ನಂತರ ಸರ್ಕಾರದ ವತಿಯಿಂದ ನಮಗೆ ಮತ್ತು ನಿಧಿಯನ್ನು ನಮ್ಮ ಸಂಘದ ಪುನಶ್ಚೇತನಕ್ಕಾಗಿ ಹಾಗೂ ಸಾಲವನ್ನು ಸಹ ಕೊಟ್ಟಿರುತ್ತಾರೆ. ಈ ಸಾಲದ ಬಾಬ್ತನ್ನು ತಿಂಗಳಿಗೊಮ್ಮೆ ಮರುಪಾವತಿ ಮಾಡುತ್ತಿದ್ದೇವೆ. ಕ್ರಮೇಣ ಬ್ಯಾಂಕ್ ನವರು ಸರ್ಕಾರದ ಮೂಲಕ ಸಹಾಯು ಧನ ಪಡೆಯುಬೇಕೆ ಎಸ್.ಜಿ.ಎಸ್.ವೈ ಯೋಜನೆಯಡಿ ನೀವು ಸಾಲ ಪಡೆಯಬೇಕಾದರೆ 13 ಜನ ಬಡತನ ರೇಖೆಗಿಂತ ಕೆಳಗಿನವರಾಗಿರಬೇಕೆಂದು ತಿಳುವಳಿಕೆ ನೀಡಿರುತ್ತಾರೆ. ಅದೇ ಪ್ರಕಾರ ನಾವು ತಾಲ್ಲೂಕು ಪಂಚಾಯತ್ ಕಛೇರಿಗೆ ಬೇಟಿ ನೀಡಿ ಸಾಲ ಮತ್ತು ಸಹಾಯುಧನಕ್ಕೆ ಪ್ರಸ್ತಾವಣೆಯುನ್ನು ಸಲ್ಲಿಸಿರುತ್ತೇವೆ. ನಮ್ಮ ಪ್ರಸ್ತಾವನೆಯ ಮೇರೆಗೆ ಕಾರ್ಯನಿರ್ವಾಹಕ ಅಧಿಕಾರಿ 1 ಲಕ್ಷ ಸಹಾಯಧನವನ್ನು ಮಂಜೂರು ಮಾಡಿದರು ಹಾಗೂ ಬ್ಯಾಂಕಿನವರು 3 ಲಕ್ಷ ಸಹಾಯುಧನವನ್ನು ನೀಡಿ ಕುರಿ ಉಣ್ಣೆ ಚಟುವಟಿಕೆಯನ್ನು ಪ್ರಾರಂಭಿಸಲು ಅನುಕೂಲ ಮಾಡಿಕೊಟ್ಟಿರುತ್ತಾರೆ. ನಂತರ ಪಶುಪಾಲನೆ ಇಲಾಖೆ ಶಿರಾ ಇವರ ಸಹಯೋಗದಿಂದ ಮೂರು ದಿನ ಕುರಿ ಉಣ್ಣೆ ತಯಾರಿಕೆಯು ಬಗ್ಗೆ ವೃತ್ತಿಪರ ತರಬೇತಿಯುನ್ನು ಪಶುಪಾಲನಾ ಇಲಾಖೆ, ಶಿರಾ ಇಲ್ಲಿ ತರಬೇತಿಯನ್ನು ಪಡೆದಿರುತ್ತೇವೆ. ಪ್ರಮಾಣ ಪತ್ರಗಳನ್ನು ಸಹ ಪಡೆದು ಬ್ಯಾಂಕಿಗೆ ಸಲ್ಲಿಸಿರುತ್ತೇವೆ. ನಂತರ ಬ್ಯಾಂಕ್ ನವರು 13 ಜನಕ್ಕೆ ಉಣ್ಣೆ ಉತ್ಪಾದನೆಗಾಗಿ ಕಚ್ಚಾ ವಸ್ತುಗಳನ್ನು ಖರೀದಿಗಾಗಿ ಸಾಲವನ್ನು ಮಂಜೂರು ಮಾಡಿರುತ್ತಾರೆ. ತರುವಾಯ ಈ

* ಅಧ್ಯಕ್ಷರು, ಶ್ರೀ ರೇಣುಕಾಂಭ ಸ್ವಸಹಾಯ ಸಂಘ, ಶಾಗದಡು, ಹುಯಿಲುದೊರೆ ಗ್ರಾಮ ಪಂಚಾಯಿತಿ.

ಯೋಜನೆಯು ಮೂಲಕ ಕ್ರಮೇಣವಾಗಿ ನಮ್ಮಗಳ ಆರ್ಥಿಕಪರಿಸ್ಥಿತಿ ಉತ್ತಮಗೊಂಡು ಮೇಲ್ಮಟ್ಟಕ್ಕೇರಲು ಸಹಾಯ ಮಾಡಿರುತ್ತಾರೆ.

1. ಗಿರಿಜಮ್ಮ ಕೋಂ ಚಿದಾನಂದಚಾರ್ ಇವರು ಮಾತನಾಡಿ ಎಸ್.ಜಿ.ಎಸ್.ವೈ. ಯೋಜನೆ ಯಡಿಯಲ್ಲಿ ಸಾಲ ಸಹಾಯಧನ ಸಹಯೋಗದೊಂದಿಗೆ ನಾವು ಉಣ್ಣೆಯಿಂದ ತಯಾರಾದ ವಸ್ತುಗಳನ್ನು ಮಾರಿ ನನ್ನ ಮಕ್ಕಳ ವಿದ್ಯಾಭ್ಯಾಸ ಮತ್ತು ನನ್ನ ಗಂಡನ ಆರೋಗ್ಯ ಕಾಪಾಡಿ ಕೊಳ್ಳಲು ಎಸ್.ಜಿ.ಎಸ್.ವೈ ಯೋಜನೆಯು ತುಂಬಾ ಸಹಕಾರಿಯಾಗಿದೆ. ಹಾಗೂ ಈಗ ನಮ್ಮ ಜೀವನಮಟ್ಟ ಸುಧಾರಣೆಯಾಗಿದೆ. ಆರ್ಥಿಕವಾಗಿ ನಾವು ಸಫಲತೆಯನ್ನು ಕಂಡಿದ್ದೇವೆ. ಮುಖ್ಯವಾದ ವಿಷಯ ವೇನೆಂದರೆ ಈಗ ನಮಗೆ ಬ್ಯಾಂಕಿನ ವ್ಯವಹಾರಗಳ ಬಗ್ಗೆ ತಿಳುವಳಿಕೆಯು ಸಹ ಮೂಡಿದೆ. ಮತ್ತು ಬ್ಯಾಂಕಿನಲ್ಲಿ ವ್ಯವಹರಿ ಸುವ ಬಗ್ಗೆ ತಿಳಿದುಕೊಂಡಿದ್ದೇನೆ.

2. ಸಿದ್ದಗಂಗಮ್ಮ ಕೋಂ ಕೆಂಚಣ್ಣ ಇವರು ಮಾತನಾಡಿ ನಾವು ಆರ್ಥಿಕವಾಗಿ ತುಂಬಾ ಹಿಂದುಳಿದವರಾಗಿದ್ದೇವು ನಮಗೆ ಯಾವುದೇ ವಿಧವಾದ ಬ್ಯಾಂಕಿನ ವ್ಯವಹಾರ ಗಳ ಬಗ್ಗೆ ಮಾಹಿತಿ ತಿಳಿದಿರುವುದಿಲ್ಲ. ಎಸ್.ಜಿ.ಎಸ್.ವೈ ಯೋಜನೆಯಡಿಯಲ್ಲಿ ಸಹಾಯಧನ ಮತ್ತು ಬ್ಯಾಂಕಿನಿಂದ ಪಡೆದ ಸಾಲ ಹಾಗೂ ನಮಗೆ ಉಳಿತಾಯ ಮತ್ತು ಬ್ಯಾಂಕಿನಲ್ಲಿ ವ್ಯವಹರಿಸುವ ಬಗ್ಗೆ ತಿಳಿದು ಕೊಂಡಿದ್ದೇನೆ.

3. ತಾಯಮ್ಮ ನವರು ಮಾತನಾಡಿ ಸರ್ಕಾರವು ಎಸ್.ಜಿ.ಎಸ್.ವೈ. ಎಂಬ ಯೋಜನೆ ಯನ್ನು ರಚಿಸಿ ಬಡತನ ರೇಖೆಗಿಂತ ಕೆಳಗಿ ರುವ ಮಹಿಳೆಯರ ಅಭಿವೃದ್ಧಿಗೆ ತುಂಬಾ ಸಹಾಯ ಮಾಡಿದೆ ಇದರ ಸಹಯೋಗ ದೊಂದಿಗೆ ಇಂದು ನಮ್ಮ ಜೀವನ ಮಟ್ಟ ಬದಲಾಗಿದೆ ಇದರಿಂದ ಸಂಪಾದಿಸಿದ ಹಣದಿಂದ ನನ್ನ ಮಗಳ ವಿದ್ಯಾಭ್ಯಾಸಕ್ಕೆ ಹಾಗೂ ಆಕೆಯ ಮದುವೆಗೆ ತುಂಬಾ ಅನುಕೂಲವಾಯಿತು.

4. ಮಂಜುಳ ರವರು ಮಾತನಾಡಿ ಈ ಯೋಜನೆ ಯಿಂದ ನನ್ನ ಆರ್ಥಿಕ ಸ್ಥಿತಿಗತಿ ಮಕ್ಕಳ ಆರೋಗ್ಯ ಮತ್ತು ಮಗಳ ಮದುವೆಗೆ ಸಹಕಾರಿಯಾಗಿದೆ ನನಗೆ ಯಾವುದೇ ವಿಧವಾದ ಬ್ಯಾಂಕಿನ ವ್ಯವಹಾರಗಳಿಗೆ ಸಾಮಾಜಿಕ, ಆರ್ಥಿಕ, ಶೈಕ್ಷಣಿಕವಾಗಿ ತಿಳಿದುಕೊಳ್ಳಲು ಅನುಕೂಲ ವಾಯಿತು.

5. ನಾಗರತ್ನಮ್ಮ ರವರು ಮಾತನಾಡಿ ಈ ಯೋಜನೆಯಿಂದ ನನ್ನ ಮಗನ ಎಂ.ಎ. ವಿದ್ಯಾಭ್ಯಾಸಕ್ಕೆ ಅನುಕೂಲವಾಯಿತು ಹಾಗೂ ನನಗೆ ಆರ್ಥಿಕವಾಗಿ, ಭೌತಿಕವಾಗಿ ವ್ಯವಹಾರ ಜ್ಞಾನವನ್ನು ಈ ಯೋಜನೆಯ ಸಹಯೋಗ ದೊಂದಿಗೆ ತಿಳಿದುಕೊಂಡಿರುತ್ತೇನೆ. ಹಾಗೂ ಈ ಹಿಂದೆ ನಾನು ಬಿ.ಪಿ.ಎಲ್. ಕಾರ್ಡುದಾರ ಳಾಗಿದ್ದೆ ಈಗ ನನಗೆ ಎ.ಪಿ.ಎಲ್ ಕಾರ್ಡಿನ ಮಟ್ಟಕ್ಕೆ ನನ್ನ ಆರ್ಥಿಕ ಸ್ಥಿತಿಗತಿ ಬದಲಾಗಿದೆ.

6. ಕರಿಯಮ್ಮರವರ ಅಭಿಪ್ರಾಯ ಇಂತಹ ಯೋಜನೆಯಿಂದ ಜನರಲ್ಲಿ ವ್ಯವಹಾರಿಕವಾಗಿ ತಿಳುವಳಿಕೆ ಮೂಡುತ್ತದೆ. ಹೇಗೆಂದರೆ ಹಳ್ಳಿಯಲ್ಲಿನ ಮಹಿಳೆಯರು ಆರ್ಥಿಕವಾಗಿ ಹಿಂದುಳಿದಿರುತ್ತಾರೆ. ಅವರನ್ನು ಎಸ್.ಜಿ.ಎಸ್.ವೈ ಯೋಜನೆಯು ಗುರುತಿಸಿ ಅಂತಹವರಿಗೆ ಸಹಾಯಧನ ಮತ್ತು ಸಾಲವನ್ನು ನೀಡಿ ಅವರ ಜೀವನ ಮಟ್ಟವನ್ನು ಬದಲಾಯಿಸುತ್ತದೆ. ಈ ಯೋಜನೆಯಿಂದ ಬಡ ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ಪೂರಕ ವಾಗಿದೆ.

7. ನಾಗಮ್ಮ ರವರ ಅಭಿಪ್ರಾಯ ನಾವು ತಯಾರಿಸುವ ಕುರಿ ಉಣ್ಣೆ, ವಸ್ತುಗಳಿಗೆ ಜಿಲ್ಲಾ ಮಟ್ಟದ, ರಾಜ್ಯಮಟ್ಟದ ಹಾಗೂ ದೇಶಿಯ ವಾಗಿ ಅಂತರಾಷ್ಟ್ರೀಯ ಮಟ್ಟದಲ್ಲಿ ಬೇಡಿಕೆ ಇರುತ್ತದೆ. ಇದರಿಂದ ನಮ್ಮ ಸ್ಥಿತಿ-ಗತಿ ಸುಧಾರಣೆಯಾಗಿದೆ.

8. ಸರೋಜಮ್ಮ ರವರ ಅಭಿಪ್ರಾಯ ಸರ್ಕಾರವು ಎಸ್.ಜಿ.ಎಸ್.ವೈ. ಯೋಜನೆಯನ್ನು ಜಾರಿಗೆ ತಂದಿರುವುದರಿಂದ ಸ್ವಸಹಾಯ ಗುಂಪಿನ ಮಹಿಳಾ ಸದಸ್ಯರಿಗೆ ಆರ್ಥಿಕವಾಗಿ, ಭೌತಿಕವಾಗಿ ಅವರ ಜೀವನ ಮಟ್ಟ ಸುಧಾರಿಸಲು ಈ ಯೋಜನೆಯು ತುಂಬಾ ಪ್ರಯೋಜನಕಾರಿಯಾಗಿದೆ.

9. ಜಯಲಕ್ಷ್ಮಮ್ಮ ರವರ ಅಭಿಪ್ರಾಯ ನಾವು ಈ ಯೋಜನೆಯಿಂದ ಕುರಿ ಉಣ್ಣೆ ಖರೀದಿಸಿ ಆದಾಯ ಉತ್ಪಾನ ವಸ್ತುಗಳನ್ನು ತಯಾರಿಸಿ ವಸ್ತು ಪ್ರದರ್ಶನದಲ್ಲಿ ಮಾರಾಟ ಮಾಡುವುದರಿಂದ ಬರುವ ಲಾಭದಿಂದ ಬ್ಯಾಂಕಿನವರು ನೀಡಿದ ಸಾಲಕ್ಕೆ ಮರು ಪಾವತಿ ಮಾಡಲು ತುಂಬಾ ಅನುಕೂಲಕರ ವಾಗಿರುತ್ತದೆ. ಹಾಗೂ ಈ ಯೋಜನೆಯ ವತಿಯಿಂದ ನನ್ನ ಮಗನು ಬಿ.ಎಸ್ಸಿ. ಪದವಿಧರನಾಗಲು ಸಹಕಾರಿಯಾರುತ್ತದೆ.

10. ಪುಟ್ಟತಾಯಮ್ಮ ರವರ ಅಭಿಪ್ರಾಯ ಈ ಎಸ್.ಜಿ.ಎಸ್.ವೈ ಯೋಜನೆಯು ನಮಗೆ ಧನ ಸಹಾಯ ಮತ್ತು ಸಾಲವನ್ನು ಕೊಡಿಸು ವುದರಿಂದ ನಾವುಗಳು ಬ್ಯಾಂಕಿಗೆ ಹೋಗುವುದು ವ್ಯವಹಾರ ಮಾಡುವುದು ತಿಳಿದುಕೊಂಡಿರುತ್ತೇವೆ. ಇದರಿಂದ ನಾನು ಸಹ ನನ್ನ ಕುಟುಂಬಕ್ಕೆ ಒಂದು ಖಾತೆಯನ್ನು ತೆರೆದುಕೊಂಡು ಆ ಖಾತೆಯಲ್ಲಿ ವ್ಯವಹಾರ ಮಾಡುತ್ತೀದ್ದೇನೆ.

11. ಗೌರಮ್ಮ ರವರ ಅಭಿಪ್ರಾಯ ಈ ಹಿಂದೆ ಸರ್ಕಾರದಿಂದ ಯಾವುದೇ ಆರ್ಥಿಕ ಸಹಾಯ ವನ್ನು ನಾನು ಪಡೆದುಕೊಂಡಿರುವುದಿಲ್ಲ ಎಸ್.ಜಿ.ಎಸ್.ವೈ ಯೋಜನೆ ಯಿಂದ ಆರ್ಥಿಕ ಸಹಾಯವನ್ನು ಪಡೆದ ನಂತರ ನಮ್ಮ ಜೀವನ ಸ್ಥಿತಿ-ಗತಿ ಬದಲಾಗಿ ಬಿ.ಪಿ.ಎಲ್. ಇದ್ದ ನಮ್ಮ ರೇಷನ್ ಕಾರ್ಡ್ ಈಗ ಎ.ಪಿ.ಎಲ್.ಗೆ ಬದಲಾಗಿದೆ. ಈ ಮಟ್ಟಕ್ಕೆ ನಮ್ಮ ಜೀವನ ಶೈಲಿಯು ಸಹ ಬದಲಾಗಿದೆ.

12. ಚಂದ್ರಮ್ಮ ರವರ ಅಭಿಪ್ರಾಯ ಈ ಯೋಜನೆಯು ನೀಡಿದ ಗುಂಪುಸಾಲ ಮತ್ತು ಸಹಾಯಧನ ಇದರ ಸಹಾಕಾರದಿಂದ ನಾವೆಲ್ಲರೂ ಬ್ಯಾಂಕಿನ ವ್ಯವಹಾರವನ್ನು ತಿಳಿದುಕೊಂಡಿರುತ್ತೇವೆ. ಹಾಗೂ ಎಲ್ಲರೂ ಸಹ ಕುಟುಂಬಕ್ಕೆ ಒಂದರಂತೆ ಬ್ಯಾಂಕಿನಲ್ಲಿ ಖಾತೆಯನ್ನು ತೆರೆದಿರುತ್ತೇವೆ. ಹಾಗೂ ಸುಗಮವಾಗಿ ವ್ಯವಹಾರಿಸುತ್ತೀದ್ದೇವೆ. ಈ ಯೋಜನೆಯು ಮಹಿಳೆಯರ ಅಭಿವೃದ್ಧಿ ಹಾಗೂ ಅವರ ಜೀವನಮಟ್ಟ ಆರ್ಥಿಕ ಸುಧಾರಣೆ ಮಾಡುವುದಕ್ಕೆ ಈ ಯೋಜನೆಯು ತುಂಬಾ ಸಹಕಾರಿಯಾಗಿದೆ.

ಈ ಯೋಜನೆಯಲ್ಲಿ ಒಟ್ಟಾರೆ ಹೇಳುವುದಾದರೆ ಶ್ರೀ ರೇಣುಕಾಂಭ ಮಹಿಳಾ ಸ್ವ-ಸಹಾಯ ಸಂಘ ಶಾಗದಡು, ಹುಯಿಲ್ ದೊರೆ ಗ್ರಾಮ ಪಂಚಾಯಿತಿ, ಶಿರಾ ತಾಲ್ಲೂಕು ಆದ ನಾವು ಮೊದಲು ಯಾವುದೇ ರೀತಿಯ ಜೀವನ ನಡೆಸುತ್ತೀದ್ದೇವು ಮತ್ತು ಈಗ ನಮ್ಮ ಜೀವನ ಶೈಲಿ ನಾವು ಉತ್ಪಾದಿಸಿದ ಕುರಿ ಉಣ್ಣೆ ವಸ್ತುಗಳನ್ನು ತಯಾರಿಸಿ ಮಾರಾಟ ಮಾಡಿ ನಮ್ಮೆಲ್ಲರ ಜೀವನ ಮಟ್ಟ ಸುಧಾರಣೆಯಾಗಿ ನಾವು ಉತ್ಪಾದಿಸಿದ ವಸ್ತುಗಳಿಗೆ ರಾಜ್ಯ, ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಬೇಡಿಕೆ ಹೆಚ್ಚಾಗಿ ರುತ್ತದೆ. ಆದ್ದರಿಂದ ನಮ್ಮಗಳ ಆರ್ಥಿಕ ಸ್ಥಿತಿ-ಗತಿ ಉತ್ತಮವಾಗಿ ಬೆಳೆದು ಹೊರಹೊಮ್ಮಿದೆ.

❑

# ಎಸ್.ಜಿ.ಎಸ್.ವೈ. ಯೋಜನೆಯಡಿ ಕುರಿ ಉಣ್ಣೆಯಿಂದ ಮೌಲ್ಯವರ್ಧಿತ ಉತ್ಪನ್ನಗಳನ್ನು ತಯಾರಿಸಲು ಸ್ವಸಹಾಯ ಗುಂಪಿನ ಮಹಿಳೆಯರಿಗೆ ತರಬೇತಿ ಕಾರ್ಯಕ್ರಮ

ಎಸ್.ಜಿ.ಎಸ್.ವೈ. ಯೋಜನೆಯಡಿ ಹಮ್ಮಿಕೊಂಡ ತರಬೇತಿಯ ಪಕ್ಷನೋಟ.

**ಪೀಠಿಕೆ :** ಕರ್ನಾಟಕ ರಾಜ್ಯದಲ್ಲಿನ ಕುರಿ ತಳಿಗಳಿಂದ ದೊರೆಯುವ ಉಣ್ಣೆಯು ಒರಟಾಗಿದ್ದು, ಉತ್ತಮ ಗುಣಮಟ್ಟದ ಉತ್ಪನ್ನಗಳ ತಯಾರಿಕೆಗೆ ಯೋಗ್ಯವಲ್ಲದ ಕಾರಣ ಕೇವಲ ಕಂಬಳಿಗಳನ್ನು ನೇಯ್ದು ಮಾರಾಟ ಮಾಡಲಾಗುತ್ತಿತ್ತು.. ಆದರೆ ಈಗ ಬೇರೆ ವಸ್ತುಗಳಿಂದ ತಯಾರಾದ ಹೊದಿಕೆಗಳು ಮಾರುಕಟ್ಟೆಗೆ ಬಂದ ಕಾರಣ ಕಂಬಳಿಗಳಿಗೆ ಬೇಡಿಕೆಯಿಲ್ಲದಂತಾಗಿದೆ. ಕಂಬಳಿ ನೇಯ್ಗೆ ಮಾಡುವವರು ತಮ್ಮ ಉದ್ಯಮವನ್ನು ನಿಲ್ಲಿಸಿದ್ದಾರೆ. ಹಾಗಾಗಿ ಕುರಿಗಳಿಂದ ಉತ್ಪತ್ತಿಯಾಗುವ ಉಣ್ಣೆಗೆ ಬೇಡಿಕೆಯಿಲ್ಲದಂತಾಗಿ, ಈ ಉಣ್ಣೆಯನ್ನು ಯಾವುದೇ ಉತ್ಪನ್ನಗಳ ತಯಾರಿಕೆಗಾಗಿ ಬಳಸದೇ ವ್ಯರ್ಥಮಾಡಲಾಗು ತ್ತಿದೆ. ಒಂದು ಅಂದಾಜಿನ ಪ್ರಕಾರ ತುಮಕೂರು ಜಿಲ್ಲೆಯಲ್ಲಿ ವಾರ್ಷಿಕ ಸುಮಾರು 3.52 ಲಕ್ಷ ಕಿ.ಗ್ರಾಂ.ನಷ್ಟು ಉಣ್ಣೆಯನ್ನು ಅನುಪಯುಕ್ತವಾಗಿ ಎಸೆಯಲಾಗುತ್ತಿದೆ. ಇದರ ಬೆಲೆ ಸುಮಾರು 70.40 ಲಕ್ಷ ರೂಪಾಯಿಗಳಾಗುತ್ತದೆ.



* ಪಶುಪಾಲನಾ ಇಲಾಖೆ, ಶಿರಾ ತಾಲ್ಲೂಕು, ತುಮಕೂರು ಜಿಲ್ಲಾ ಪಂಚಾಯಿತಿ.



ಶ್ರೀಮತಿ ತುಳಸಿ ಮದ್ದಿನೇನಿ, ಅಂದಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿ.ಪಂ. ತುಮಕೂರು ರವರು ತರಬೇತಿ ಕಾರ್ಯಾಗಾರಕ್ಕೆ ಭೇಟಿ ನೀಡಿದ ಸಮಯ

ಇದೇ ಪರಿಸ್ಥಿತಿ ರಾಜ್ಯದ ಇತರೆ ಜಿಲ್ಲೆಗಳಲ್ಲಿಯೂ ಇರುವುದನ್ನು ಮನಗಂಡು ಬೆಳಗಾವಿಯ ಶ್ರಮಿಕ ಅಭಿವೃದ್ಧಿ ಸಂಘದವರು ಕುರಿ ಉಣ್ಣೆಯಿಂದ ಕೈಚೀಲಗಳು, ನೆಲ ಹಾಸು, ಫೋನ್ ಮ್ಯಾಟ್, ಚೇರ್ ಮ್ಯಾಟ್, ಫೈಲ್ಸ್ ಇತರೆ ಮೌಲವರ್ಧಿತ ಉತ್ಪನ್ನಗಳ ತಯಾರಿಕೆ ಬಗ್ಗೆ ಸ್ವಸಹಾಯ ಗುಂಪಿನ ಮಹಿಳೆಯರಿಗೆ ತರಬೇತಿ ನೀಡಿ, ಅವರಿಗೆ ಕಚ್ಚಾ ಸಾಮಾಗ್ರಿಗಳನ್ನು ನೀಡಿ, ಅವರಿಂದ ಸದರಿ ಉತ್ಪನ್ನಗಳನ್ನು ತಯಾರಿಸಿ ವಿದೇಶ (ಜಪಾನ್, ಅಮೇರಿಕಾ, ಇಂಗ್ಲೆಂಡ್, ಬ್ರೆಜಿಲ್, ಸ್ಪೈನ್ ದೇಶ)ಗಳಿಗೆ ರಫ್ತು ಮಾಡುತ್ತಿದ್ದಾರೆ. ಸದರಿ ಸ್ವಸಹಾಯ ಗುಂಪಿನ ಮಹಿಳೆಯರಿಗೆ ಪ್ರತಿ ಚದರ ಇಂಚಿಗೆ ಇಂತಿಷ್ಟು ಮಜೂರಿ ನೀಡುತ್ತಿದ್ದು, ಒಬ್ಬ ಮಹಿಳೆ ದಿನಕ್ಕೆ ಸರಾಸರಿ ರೂ. 80/– ರಿಂದ 250/– ವರೆಗೆ ಸಂಪಾದಿಸುತ್ತಿದ್ದಾರೆ. ಇದರಿಂದಾಗಿ ಅನುಪಯುಕ್ತವಾಗುತ್ತಿದ್ದ ಉಣ್ಣೆಯನ್ನು ಸಮರ್ಪಕವಾಗಿ ಬಳಸಿದಂತಾಗುತ್ತದೆ, ಅಲ್ಲದೇ ಗ್ರಾಮೀಣ ಪ್ರದೇಶದ ಮಹಿಳೆಯರಿಗೆ ಉದ್ಯೋಗ ದೊರೆತು ಅವರ ಕೌಟುಂಬಿಕ ವರಮಾನ ಹೆಚ್ಚಾಗಿ ಅವರು ನೆಮ್ಮದಿಯಿಂದ ಜೀವಿಸಲು ಅನುವು ಮಾಡಿಕೊಟ್ಟಂತಾಗುತ್ತಿದೆ. ಇದರಿಂದಾಗಿ ಕೆಲಸ ಹುಡುಕಿಕೊಂಡು ನಗರ ಪ್ರದೇಶಗಳಿಗೆ ವಲಸೆ ಹೋಗುವುದನ್ನು ತಡೆಗಟ್ಟಬಹುದಾಗಿದೆ.

ಇದನ್ನು ಮನಗಂಡು ತುಮಕೂರು ಜಿಲ್ಲೆಯ ಸಿರಾ ತಾ. ನ ಗುಮ್ಮನಹಳ್ಳಿಯಲ್ಲಿರುವ ಸಮತಾ ವಿದ್ಯಾಲಯದ ವತಿಯಿಂದ ಸಿರಾ ತಾಲ್ಲೂಕಿನ 10 ಜನ ಮಹಿಳೆಯರು ಬೆಳಗಾವಿ ಜಿಲ್ಲೆಯ ಈ ಕುರಿ ಉಣ್ಣೆ ಉತ್ಪನ್ನಗಳ ತಯಾರಿಕಾ ಘಟಕಗಳಿಗೆ ಸಹಾಯಕ ನಿರ್ದೇಶಕರು, ಪಶುಪಾಲನಾ ಇಲಾಖೆ, ಸಿರಾ ಇವರ ನೇತೃತ್ವದಲ್ಲಿ, 7 ದಿನಗಳ ಕಾಲ ತರಬೇತಿ ಪಡೆದಿರುತ್ತಾರೆ. ಈ ತರಬೇತಿ ಪಡೆದ ಮಹಿಳೆಯರು ಕುರಿ ಉಣ್ಣೆಯಿಂದ ಈ ಮೇಲೆ ತಿಳಿಸಿದ ಉತ್ಪನ್ನಗಳನ್ನು ತಯಾರಿಸಲು ಉತ್ಸುಕರಾಗಿರುತ್ತಾರೆ.

ಮಾನ್ಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯಿತಿ, ತುಮಕೂರು ಇವರು ಸಿರಾ ತಾ.ಗೆ ಬೇಟಿ ನೀಡಿದಾಗ ಸಹಾಯಕ ನಿರ್ದೇಶಕರು, ಪಶುಪಾಲನಾ ಇಲಾಖೆ, ಸಿರಾ ಇವರು ಈ ಉದ್ದಿಮೆ ಬಗ್ಗೆ ನೀಡಿದ ವಿವರಗಳ ಬಗ್ಗೆ ತುಂಬಾ ಆಸಕ್ತಿ ತಳೆದು, ಎಸ್.ಜೆ.ಎಸ್.ವೈ. ಯೋಜನೆಯಡಿ ಸಿರಾ ತಾ.ನ ಆಸಕ್ತ ಸ್ತ್ರೀ ಶಕ್ತಿ/ಸ್ವಸಹಾಯ ಗುಂಪಿನ ಮಹಿಳೆಯರಿಗೆ ತರಬೇತಿ ಕೊಡಿಸಿ, ಕುರಿ ಉಣ್ಣೆಯಿಂದ ಮೌಲವರ್ಧಿತ ಉತ್ಪನ್ನಗಳ ತಯಾರಿಕಾ ಘಟಕವೊಂದನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲು ಸೂಚಿಸಿದರು. ಆದ ಪ್ರಯುಕ್ತ ಮೊದಲಿಗೆ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ನಿರ್ಧರಿಸಿ, ಅದರಂತೆ ಜಿಲ್ಲಾ ಪಂಚಾಯಿತಿ, ತುಮಕೂರು ಇದರ ನೆರವಿನೊಂದಿಗೆ ಎಸ್.ಜಿ.ಎಸ್.ವೈ, ಯೋಜನೆಯಡಿ ಶ್ರಮಿಕ್ ಕಲಾ ಸಂಸ್ಥೆ, ಬೆಳಗಾಂ ಇವರ ಸಹಯೋಗದೊಂದಿಗೆ ತುಮಕೂರು ಜಿಲ್ಲೆಯ ಸಿರಾ ತಾಲ್ಲೂಕಿನ ಆರು ಆಯ್ದ ಮಹಿಳಾ ಸ್ವಸಹಾಯ ಗುಂಪಿನ ಒಟ್ಟು 64 ಜನ ಸದಸ್ಯರಿಗೆ ಎರಡು ತಂಡಗಳಲ್ಲಿ 15 ದಿನಗಳ ಕಾಲ ಕುರಿ ಉಣ್ಣೆಯಿಂದ ಮೌಲವರ್ಧಿತ ಉತ್ಪನ್ನಗಳ ತಯಾರಿಕೆ ಬಗ್ಗೆ ಸಮಗ್ರ ತರಬೇತಿ ನೀಡಲಾಗಿದೆ.



ಬಣ್ಣವಾರು ಉಣ್ಣೆ ವಿಂಗಡನೆ ಮಾಡುತ್ತಿರುವ ಶಿಭಿರಾರ್ಥಿಗಳು

**ತರಬೇತಿಯ ವಿವರ :**

**ಮೊದಲನೇ ತಂಡ :**

- ತರಬೇತಿ ನೀಡಿದ ಅವದಿ : 15 ದಿನಗಳು
- ತರಬೇತಿ ನೀಡಿದ ಸ್ಥಳ : ಲೋಹಿಯ ಸಮತಾ ವಿದ್ಯಾಲಯ, ರಾ.ಹೆ. ಶಿರಾ.
- ಆಯ್ಕೆ ಮಾಡಿದ ಸ್ವಸಹಾಯ ಸಂಘಗಳ ಹೆಸರು, ಸದಸ್ಯರು :

I. **ದಿವ್ಯಾ ಶ್ರೀ ಸ್ವಸಹಾಯ ಸಂಘ, ಗುಮ್ಮನಹಳ್ಳಿ ಗೊಲ್ಲರಹಟ್ಟಿ** : 1. ಮಾಧವಿ 2. ಸವಿತ 3. ಸರೋಜಮ್ಮ 4. ಗಂಗಮ್ಮ 5. ಗಂಗಮ್ಮ ತಿಮ್ಮರಾಜು

II. **ಶ್ರೀ ಅನ್ನಪೂರ್ಣೇಶ್ವರಿ ಸ್ವಸಹಾಯ ಸಂಘ, ನಿಡಗಟ್ಟೆ** : 1. ಸಣ್ಣಲಿಂಗಮ್ಮ 2. ಸುಜಾತ 3. ಹನುಮಕ್ಕ 4. ಲಿಂಗಮ್ಮ 5. ಸುಧಾಮಣಿ 6. ಯಲ್ಲಮ್ಮ 7. ಮಂಜುಳ

III. **ಶ್ರೀ ರೇಣುಕಾಂಭ ಸಾಕ್ಷರತಾ ಸ್ವಸಹಾಯ ಸಂಘ. ಶಾಗದಡು** : 1. ಗಿರಿಜಮ್ಮ 2. ಸಿದ್ಧಗಂಗಮ್ಮ 3. ತಾಯಮ್ಮ 4. ಮಂಜುಳ 5. ನಾಗರತ್ನಮ್ಮ 6. ಕರಿಯಮ್ಮ 7. ನಾಗಮ್ಮ 8. ಸರೋಜಮ್ಮ 9. ಜಯಲಕ್ಷ್ಮಮ್ಮ 10. ಪುಟ್ಟತಾಯಮ್ಮ 11. ಗೌರಮ್ಮ 12. ಚಂದ್ರಮ್ಮ

IV. **ಶ್ರೀ ಅನ್ನಪೂರ್ಣೇಶ್ವರಿ ಸ್ವಸಹಾಯ ಸಂಘ, ಜುಂಜರಾಮನಹಳ್ಳಿ**: 1. ಮೈತ್ರಿ 2. ಮಾಲಶ್ರೀ 3. ಅನಿತಾ 4. ಭಾಗ್ಯ 5. ಶಶಿಕಲಾ 6. ಚೌಡಮ್ಮ 7. ಜ್ಯೋತಮ್ಮ 8. ರಂಗಮ್ಮ 9. ಮಂಜುಳಾ

ಉದ್ಘಾಟನಾ ಸಮಾರಂಭದಲ್ಲಿ ಸಿರಾ ತಾಲ್ಲೂಕು ಪಂಚಾಯಿತಿಯ ಉಪಾಧ್ಯಕ್ಷರಾದ ಶ್ರೀಯುತ ಜುಂಜಯ್ಯನವರು, ಖ್ಯಾತ ಹಿರಿಯ ನ್ಯಾಯವಾದಿಗಳಾದ ಪ್ರೊ. ರವಿವರ್ಮಕುಮಾರ್,ಶ್ರಮಿಕ್ ಕಲಾ ಸಂಸ್ಥೆ, ಬೆಳಗಾಂನ ಶ್ರೀಯುತ ಗೋಪಿಕೃಷ್ಣರವರು, ಸಿರಾ ತಾ.ನ ಪಶುಪಾಲನಾ ಇಲಾಖೆಯ ಸಹಾಯಕ ನಿರ್ದೇಶಕರಾದ ಡಾ. ಗೌ.ಮು.ನಾಗರಾಜರವರು ಭಾಗವಸಿದ್ದರು.

- ಭಾಗವಹಿಸಿದ ಸಂಪನ್ಮೂಲ ವ್ಯಕ್ತಿಗಳು : ಶ್ರೀ ಕುಭೇಂದ್ರಪ್ಪ ಪಟ್ಟಣ ಶೆಟ್ಟಿ, ಬೆಳಗಾಂ ಹಾಗೂ ಕು. ಗೀತಾ ಪಾಟೀಲ್, ಬೆಳಗಾಂ

**ಎರಡನೇ ತಂಡ :**

- ತರಬೇತಿ ನೀಡಿದ ಅವದಿ : 15 ದಿನಗಳು
- ತರಬೇತಿ ನೀಡಿದ ಸ್ಥಳ : ಲೋಹಿಯ ಸಮತಾ ವಿದ್ಯಾಲಯ, ರಾ.ಹೆ. ಶಿರಾ.
- ಆಯ್ಕೆ ಮಾಡಿದ ಸ್ವಸಹಾಯ ಸಂಘಗಳ ಹೆಸರು, ಸದಸ್ಯರು :

I. **ಶ್ರೀ ವರಲಕ್ಷ್ಮಿ ಮಹಿಳಾ ಸ್ವಸಹಾಯ ಸಂಘ, ಚನ್ನನಕುಂಟೆ** : 1. ಶಾಂತಮ್ಮ 2. ಪುಟ್ಟಮ್ಮ 3. ಮಂಜಮ್ಮ 4. ಶಾಂತಮ್ಮ (ಕೆಂಚಣ್ಣ) 5. ಪುಟ್ಟತಾಯಮ್ಮ 6. ಜಯಲಕ್ಷ್ಮಿ 7. ರಂಗಮ್ಮ 8. ತಿಮ್ಮರಾಜಮ್ಮ



9. ಪುಟ್ಟಮ್ಮ (ರಂಗನಾಪ್ಪ) 10. ಸುಮಂಗಳ
11. ತಿಮ್ಮಮ್ಮ 12. ಶಾರದಮ್ಮ 13. ರಂಗಮ್ಮ
14. ಪಾರ್ವತಮ್ಮ (ರಾಮಣ್ಣ) 15. ಲಕ್ಷ್ಮಮ್ಮ
16. ಹೇಮಲತಾ 17. ಲತಾ 18. ರಾಜೇಶ್ವರಿ
19. ಪಾರ್ವತಮ್ಮ

**II. ಶ್ರೀ ಲಕ್ಷ್ಮಿ ಸ್ವಸಹಾಯ ಸಂಘ, ಹುಯಿಲದೊರೆ** : 1. ಗೀತಾ 2. ನಾಗರತ್ನಮ್ಮ 3. ಭಾಗ್ಯಮ್ಮ
4. ಲಲಿತಮ್ಮ 5. ಪುಟ್ಟಲಿಂಗಮ್ಮ 6. ಗಂಗಮ್ಮ
7. ಯಶೋಧ 8. ರಾಧಮ್ಮ 9. ಗೀತಾ (ಉಮೇಶ್)
10. ಮಂಜಮ್ಮ 11. ಪುಟ್ಟಮ್ಮ (ಮಹಲಿಂಗಪ್ಪ)

ಉದ್ಘಾಟನಾ ಸಮಾರಂಭದಲ್ಲಿ ಸಿರಾ ತಾಲ್ಲೂಕು ಪಂಚಾಯಿತಿಯ ಉಪಾಧ್ಯಕ್ಷರಾದ ಶ್ರೀಯುತ ಜುಂಜಯ್ಯನವರು, ಕಾರ್ಯನಿರ್ವಹಣಾಧಿಕಾರಿಗಳಾದ ಎಂ.ಎಲ್. ಮಂಜುನಾಥ ರವರು , ತಾಲ್ಲೂಕು ಪಂಚಾಯಿತಿಯ ಸದಸ್ಯರಾದ ಶ್ರೀಯುತ ಚಿಕ್ಕಣ್ಣನವರು, ಶ್ರೀಮತಿ ಲಕ್ಷ್ಮೀದೇವಿಯವರು ಹಾಗೂ ಸಿರಾ ತಾ.ನ ಪಶುಪಾಲನಾ ಇಲಾಖೆಯ ಸಹಾಯಕ ನಿರ್ದೇಶಕರಾದ ಡಾ. ಗೌ.ಮು.ನಾಗರಾಜರವರು ಭಾಗವಸಿದ್ದರು.

➢ ಭಾಗವಹಿಸಿದ ಸಂಪನ್ಮೂಲ ವ್ಯಕ್ತಿಗಳು : ಶ್ರೀ ಕುಬೇಂದ್ರಪ್ಪ ಪಟ್ಟಣ ಶೆಟ್ಟಿ, ಹಾಗೂ ಕು. ಗೀತಾ ಪಾಟೀಲ್, ಬೆಳಗಾಂ



ಮ್ಯಾಟ್ ತಯಾರಿಕಾ ನಿರತ ಶಿಭಿರಾರ್ಥಿಗಳು

**ತರಬೇತಿ ನಡೆಯುವ ಸಮಯದಲ್ಲಿ ಭೇಟಿ ನೀಡಿದ ಗಣ್ಯರು** :– ಈ ತರಬೇತಿ ಕಾರ್ಯಕ್ರಮದಲ್ಲಿ ಸ್ವಸಹಾಯ ಗುಂಪಿನ ಸದಸ್ಯರ ಕೌಶ್ಯಲತೆ, ಕಲಿಯುವ ಆಸಕ್ತಿ ಬಗ್ಗೆ ಈ ಕೆಳಕಂಡ ಗಣ್ಯರು ತಾವು ಭೇಟಿ ನೀಡಿದ ಸಂಧರ್ಭದಲ್ಲಿ ತುಂಬಾ ಮೆಚ್ಚುಗೆ ವ್ಯಕ್ತಪಡಿಸಿರುತ್ತಾರೆ ಅಲ್ಲದೇ ಈ ಉದ್ಯಮವನ್ನು ಮುಂದೆ ಈ ಮಹಿಳೆಯರು ಮುಂದುವರೆಸಿದಾದಲ್ಲಿ ಅವರು ಆರ್ಥಿಕವಾಗಿ ಸಬಲರಾಗಲು ಇದೊಂದು ಒಳ್ಳೆಯ ಅವಕಾಶವಾಗಿದ್ದು,ಈ ನಿಟ್ಟಿನಲ್ಲಿ ಇವರಿಗೆ ಎಲ್ಲಾ ರೀತಿಯ ಸೌಲಭ್ಯಗಳನ್ನು ಕಲ್ಪಿಸಿಕೊಡಲು ಸಂಬಂಧಪಟ್ಟವರು ಕ್ರಮಕೈಗೊಳ್ಳುವುದು ಸೂಕ್ತವೆಂದು ಸೂಚಿಸಿದರು.

- ಶ್ರೀಯುತ ಟಿ.ಬಿ. ಜಯಚಂದ್ರರವರು, ಸನ್ಮಾನ್ಯ ಶಾಸಕರು, ಶಿರಾ ವಿಧಾನಸಭಾ ಕ್ಷೇತ್ರ
- ಶ್ರೀಮತಿ ತುಳಸಿ ಮದ್ದಿನೇನಿಯವರು, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿ.ಪಂ. ತುಮಕೂರು
- ಡಾ : ಆರ್.ಆರ್. ರವೀಂದ್ರರವರು , ಉಪನಿರ್ದೇಶಕರು, ಪಶುಪಾಲನಾ ಇಲಾಖೆ, ತುಮಕೂರು ಜಿಲ್ಲೆ
- ಶ್ರೀಯುತ ಪರಮೇಶ್ವರಪ್ಪನವರು, ಜಂಟಿ ನಿರ್ದೇಶಕರು, ಕೈಗಾರಿಕಾ ಇಲಾಖೆ, ತುಮಕೂರು ಜಿಲ್ಲೆ

**ಇವರಲ್ಲದೇ–**

- ಸಮತಾ ವಿದ್ಯಾಲಯದ ಧರ್ಮದರ್ಶಿಗಳು ಹಾಗೂ ಖ್ಯಾತ ಹಿರಿಯ ನ್ಯಾಯವಾದಿಗಳಾದ ಪ್ರೊ. ರವಿವರ್ಮಕುಮಾರ್‌ರವರು
- ರೈತ ನಾಯಕರಾದ ಕಡಿದಾಳ್ ಶ್ಯಾಮಣ್ಣನವರು, ಕೆ.ಎಸ್.ಪುಟ್ಟಣ್ಣಯ್ಯನವರು
- ಖ್ಯಾತ ಸಾಹಿತಿಗಳಾದ ದೇವನೂರು ಮಹದೇವರವರು,
- ಖ್ಯಾತ ನಾಟಕಕಾರರು ಹಾಗೂ ಹೆಗ್ಗೋಡು ಚರಕ ಸಂಸ್ಥೆಯ ಸಂಸ್ಥಾಪಕರಾದ ಶ್ರೀಯುತ ಪ್ರಸನ್ನರವರು
- ಡಿ.ಐ.ಜಿ. ಅರಕೇಶ್ ರವರು, ಬಿ.ಬಿ.ಎಂ.ಪಿ. ಜಿಲ್ಲಾಧಿಕಾರಿಗಳಾದ ರುದ್ರಪ್ಪ ಅನಗವಾಡಿಯವರು
- ಸಮತಾ ವಿದ್ಯಾಲಯದ ನಿರ್ದೇಶಕರು ಹಾಗೂ ಹಿರಿಯ ಚಿಂತಕರಾದ ಶ್ರೀಯುತ ದೊರೈರಾಜುರವರು
- ಹಿರಿಯ ಪತ್ರಕರ್ತರಾದ ಶ್ರೀಯುತ ಎಸ್. ನಾಗಣ್ಣನವರು



ಡಾ॥ ಆರ್.ಆರ್. ರವೀಂದ್ರ ಉಪ ನಿರ್ದೇಶಕರು, ಪಶುಪಾಲನಾ ಇಲಾಖೆ, ತುಮಕೂರು ಇವರ ಶಿಬಿರಾರ್ಥಿಗಳೊಂದಿಗೆ ಅನುಭವ ಹಂಚಿಕೆ

## ವಸ್ತುಪ್ರದರ್ಶನ ಹಾಗೂ ಸಮಾರೋಪ ಸಮಾರಂಭ :

ಮೇಲಿನ ಎರಡು ತಂಡಗಳಲ್ಲಿ ತರಬೇತಿ ಪಡೆದ ಮಹಿಳೆಯರು ಕುರಿ ಉಣ್ಣೆಯಿಂದ ತಯಾರಿಸಿದ ಕರಕುಶಲ ಉತ್ಪನ್ನಗಳ ವಸ್ತುಪ್ರದರ್ಶನವನ್ನು ಹಾಗೂ ಸಮಾರಂಭವನ್ನು ಸಮತ ವಿದ್ಯಾಲಯದಲ್ಲಿ ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ತುಮಕೂರು ಜಿಲ್ಲಾಧಿಕಾರಿಗಳಾದ ಡಾ॥ ಸೋಮಶೇಖರ್‌ರವರಯ, ಜಿ.ಪಂ ಅಧ್ಯಕ್ಷರಾದ ಶ್ರೀಮತಿ ಜಯಮ್ಮ ದಾನಪ್ಪನವರು, ಜಿ.ಪಂ ಸದಸ್ಯರಾದ ಎಂ. ರಂಗಶ್ಯಾಮಯ್ಯ, ರಾಮಚಂದ್ರಪ್ಪ ಹಾಗೂ ತಾಲ್ಲೂಕು ಪಂಚಾಯಿತಿ ಉಪಾಧ್ಯಕ್ಷರಾದ ಜುಂಜಯ್ಯನವರು ಹಾಗೂ ಸದಸ್ಯರಾದ ಎಸ್.ಆರ್ ಗೌಡ, ಕಾಳಪ್ಪ ಚಿಕ್ಕಣ್ಣ, ಸುದರ್ಶನ್, ಯಶೋದಮ್ಮ ತಿಮ್ಮಯ್ಯ, ಮತ್ತು ಹಿರಿಯ ನ್ಯಾಯವಾಧಿಗಳಾದ ಪ್ರೊ. ರವಿವರ್ಮ ಕುಮಾರ್‌ರವರು ಪಶುಪಾಲನಾ ಇಲಾಖೆಯ ಸಹಾಯಕ ನಿರ್ದೇಶಕರಾದ ಡಾ. ರೇಣುಕ ಪ್ರಸನ್ನ ಡಾ. ಶಂಕರಪ್ಪ, ಡಾ. ಕೃಷ್ಣಮೂರ್ತಿ, ಡಾ. ಪಟೇಲ್, ಡಾ. ಗೌ.ಮು. ನಾಗರಾಜ ಇತರರು ಭಾಗವಹಿಸಿದ್ದರು.



ಡಾ॥ ಸಿ. ಸೋಮಶೇಖರ್, ಅಂದಿನ ಜಿಲ್ಲಾಧಿಕಾರಿಗಳು, ತುಮಕೂರು ಇವರು ಶಿಬಿರಾರ್ಥಿಗಳು ತಯಾರಿಸಿದ ಮೌಲ್ಯವರ್ಧಿತ ಉಣ್ಣೆ ಉತ್ಪನ್ನಗಳ ವಸ್ತು ಪ್ರದರ್ಶನದ ಉದ್ಘಾಟನಾ ಕಾರ್ಯಕ್ರಮ

❑




# ಸ್ವಯಂ-ಉದ್ಯೋಗ ಯೋಜನೆ ಮತ್ತು ಸ್ವಸಹಾಯ ಗುಂಪುಗಳು



**ಪ್ರೊ. ಎ.ಎಚ್. ಮಾಸಾಪತಿ***
ಮೊಬೈಲ್ : 93435 35229

ತರಬೇತಿ, ಸಾಲ, ತಂತ್ರಜ್ಞಾನ, ಮೂಲಸೌಕರ್ಯ ಮತ್ತು ಮಾರುಕಟ್ಟೆ ಸೌಲಭ್ಯದಂತಹ ಹಲವಾರು ಅಂಶಗಳನ್ನು ಸೂಚಿಸುವ ಪ್ರಾಯೋಜನಾ ಮಾರ್ಗವನ್ನು ಎಸ್.ಜಿ.ಎಸ್.ವೈ. ಅಂಗೀಕರಿಸುತ್ತದೆ.

ಸಮಗ್ರ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮದ ಅನುಷ್ಠಾನದಲ್ಲಿ ಕಂಡುಬಂದಿರುವ ಪ್ರಧಾನ ಲೋಪ-ದೋಷಗಳನ್ನು ಅದರ (IRDP) ಮೌಲ್ಯಮಾಪನ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಕಳೆದ ಶತಮಾನದ ತೊಂಭತ್ತರ (1990) ದಶಕದಲ್ಲಿ ಆರಂಭಿಸಿದ ಕಾರ್ಯಕ್ರಮದ ಅನುಭವದಿಂದ ಪ್ರೇರಿತವಾಗಿ, 1999ರಲ್ಲಿ ಕೇಂದ್ರ ಸರ್ಕಾರವು 'ಸ್ವರ್ಣ ಜಯಂತಿ ಗ್ರಾಮ್ ಸ್ವರೋಜಗಾರ್ ಯೋಜನೆ'ಯನ್ನು (SGSY) ಜಾರಿಗೊಳಿಸಿದೆ. ಗ್ರಾಮೀಣಾಭಿವೃದ್ಧಿ ಪ್ರಕ್ರಿಯೆಯಲ್ಲಿ, ಸಾಮುದಾಯಿಕ ಸಹಭಾಗಿತ್ವಕ್ಕೆ ಉತ್ತೇಜನ ನೀಡಿ ಗ್ರಾಮೀಣ ಬಡಜನರ ಸ್ವಸಹಾಯ ಗುಂಪುಗಳನ್ನು ರಚಿಸಿ, ಬ್ಯಾಂಕು ಸಾಲ ಮತ್ತು ಸರ್ಕಾರದ ಸಹಾಯಧನ ಪಡೆಯುವ ಮುಖಾಂತರ ವಿವಿಧ ಆರ್ಥಿಕ ಚಟುವಟಿಕೆಗಳ ನಿರಂತರವಾದ ನಿರ್ವಹಣೆಯೆಡೆಗೆ ಲಕ್ಷ್ಯವನ್ನು ಕೇಂದ್ರೀಕರಿಸಲಾಗಿದೆ.

ಸ್ವಸಹಾಯ ಗುಂಪು, ಸ್ತ್ರೀಶಕ್ತಿ ಸಂಘ ಹಾಗೂ ಗುಂಪು ಚಟುವಟಿಕೆಗಳಿಗಾಗಿ, ಈ ಯೋಜನೆಯನ್ನು ನೀಡಲಾಗುತ್ತದೆ. ಸಾಮಾನ್ಯವಾಗಿ, ಒಂದು ಸ್ವಸಹಾಯಕ ಗುಂಪು ಸುಮಾರು 10 ರಿಂದ 20 ಸದಸ್ಯರನ್ನು ಹೊಂದಿರುತ್ತದೆ. ಅದು ಸಮಾನವಾದ ಆರ್ಥಿಕ, ಸಾಮಾಜಿಕ ಮತ್ತು ಮಾನಸಿಕ ಹಿನ್ನಲೆಯೊಂದಿಗೆ ಏಕರೂಪದ ಧ್ಯೇಯೋದ್ದೇಶ ಸಂಪನ್ನರಾದ ವ್ಯಕ್ತಿಗಳ ಸಮೂಹವಾಗಿದೆ. ಸ್ವಸಹಾಯ ಹಾಗೂ ಪರಸ್ಪರಾವಲಂಬನೆಯ ತತ್ವಗಳ ತಳಹದಿಯ ಮೇಲೆ ಅಭಿವೃದ್ಧಿಯನ್ನು ಸಾಧಿಸಲು ಅಪೇಕ್ಷಿಸುತ್ತದೆ. ಕೇಂದ್ರ ಸರ್ಕಾರವು ಈ ಯೋಜನೆಯನ್ನು ದಾರಿದ್ರ್ಯ ನಿರ್ಮೂಲನೆಯ ಧ್ಯೇಯ ಸಾಧನೆಗಾಗಿ, ಕಾರ್ಯಾಚರಣೆಗೆ ತಂದಿದೆ. ಸ್ವಸಹಾಯ ಗುಂಪಿನ ಮೂಲಕ ಸಂಘಟಿತರಾಗಿ, ಆರ್ಥಿಕ ಕಾರ್ಯಕ್ರಮಗಳನ್ನು ನಿರ್ವಹಿಸುತ್ತ ಚೌಕಾಸಿ ಸಾಮರ್ಥ್ಯವನ್ನು (Bargaining Power) ಹೆಚ್ಚಿಸಿಕೊಂಡು, ಸೂಕ್ತವಾದ ಮಾರುಕಟ್ಟೆಯ ವ್ಯವಸ್ಥೆಯನ್ನು ಪಡೆದು ಸ್ವಸಹಾಯ ಗುಂಪಿನ ಸದಸ್ಯರು ಆರ್ಥಿಕ ಪ್ರಗತಿಯನ್ನು ಸಾಧಿಸಲು ಸಾಧ್ಯವಿದೆ. ಕಿರು-ಸಾಲ ಮತ್ತು ಉಳಿತಾಯದ ಮೂಲಕ, ಸ್ವಸಹಾಯ ಗುಂಪುಗಳು ಸ್ವಯಂ ಉದ್ಯೋಗದ ಸದವಕಾಶಗಳನ್ನು ಕಲ್ಪಿಸುತ್ತವೆ. ಸಾಲ ಕೊಡುವ ಸಂಸ್ಥೆ, ಸ್ವಯಂ ಸೇವಾ ಸಂಘ ಹಾಗೂ ಸರ್ಕಾರಿ ವಿಭಾಗಗಳ ಯೋಗ್ಯವಾದ ಸಮನ್ವಯವಿರಬೇಕು.

ಗ್ರಾಮೀಣ ಪ್ರದೇಶಗಳಲ್ಲಿ ಹಲವಾರು ಲಘು-ಕೈಗಾರಿಕೆಗಳನ್ನು ಸ್ಥಾಪಿಸುವ ಮೂಲಕ, ಗ್ರಾಮೀಣ ಬಡ ಜನರ ಸುಪ್ತ-ಸಾಮರ್ಥ್ಯ ನಿರ್ಮಾಣದ ಧ್ಯೇಯವನ್ನು ಹೊಂದಲಾಗಿದೆ. ಗ್ರಾಮೀಣ ಜನರ ಸ್ಪರ್ಧಾತ್ಮಕ ಶಕ್ತಿಯು, ಸುಪ್ತ-ಸ್ಥಿತಿಯಲ್ಲಿದೆ. ಅವರಿಗೆ ಸೂಕ್ತವಾದ ಬೆಂಬಲ ಕೊಡುವುದರಿಂದ, ಅವರು ಉಪಯುಕ್ತ ಮತ್ತು ಬೆಲೆ ಬಾಳುವಂತಹ ಸರಕು/ಸೇವೆಗಳ ಉತ್ಪಾದಕರಾಗಲು ಸಾಧ್ಯವಿದೆ.

* ನಿರ್ದೇಶಕರು, ವಿಕಾಸ ಪ್ರಕಾಶನ, ನಂ. 1/4, 1ನೇ ಅಡ್ಡರಸ್ತೆ, ಕೆ.ಎಚ್.ಬಿ. ರಸ್ತೆ, ಸುಲ್ತಾನ್‌ಪಾಳ್ಯ, ಬೆಂಗಳೂರು-560 032.

## ಸಮಗ್ರತೆಯ ಮಾರ್ಗ (Holistic-Approach)

ಗ್ರಾಮೀಣ ಬಡ ಜನರ ಸಂಘಟನೆ, ಕ್ರಿಯಾಶೀಲ ಗುಂಪುಗಳ ಯೋಜನೆ, ಸ್ವಸಹಾಯ ಸಂಘಗಳ ರಚನೆ, ಸಾಮರ್ಥ್ಯ ಸೃಷ್ಟಿ, ಮೂಲ ಸೌಕರ್ಯ, ತಂತ್ರಜ್ಞಾನ, ಸಾಲ-ಸೌಲಭ್ಯ ಹಾಗೂ ಮಾರುಕಟ್ಟೆ ವ್ಯವಸ್ಥೆಯ ನಿರ್ಮಾಣ ಇತ್ಯಾದಿ. ಸ್ವಯಂ-ಉದ್ಯೋಗದ ಎಲ್ಲ ದೃಷ್ಟಿಕೋನಗಳನ್ನು ಒಳಗೊಳ್ಳುವ ಲಘು ಉದ್ದಿಮೆಗಳ ಸಮಗ್ರವಾದ ಕಾರ್ಯಕ್ರಮವೆಂದು 'ಸ್ವರ್ಣ ಜಯಂತಿ ಗ್ರಾಮ್ ಸ್ವರೋಜಗಾರ್ ಯೋಜನೆ'ಯು ಪರಿಗಣಿಸಲ್ಪಟ್ಟಿದೆ. ಪ್ರತಿಯೊಂದು ಕ್ಷೇತ್ರವು (Block) ವಿಭಿನ್ನ ಚಟುವಟಿಕೆಗಳಿಗೆ ಹಣಕಾಸು ಪೂರೈಸುವ ಬದಲು, ಆಯ್ಕೆ ಮಾಡಿದ 4 ಅಥವಾ 5 ಪ್ರಧಾನ ಚಟುವಟಿಕೆಗಳ ಮೇಲೆ ಲಕ್ಷ್ಯವನ್ನು ಕೇಂದ್ರೀಕರಿಸಬೇಕು. ಪ್ರತಿಯೊಂದು ಕ್ಷೇತ್ರದಲ್ಲಿ ಪ್ರಧಾನ ಚಟುವಟಿಕೆಗಳ ಆಯ್ಕೆಯು ಸಂಪನ್ಮೂಲಗಳು ವೃತ್ತಿಪರ ಕೌಶಲ್ಯ ಮತ್ತು ಮಾರುಕಟ್ಟೆಗಳ ಸೌಲಭ್ಯದ ಆಧಾರದ ಮೇಲೆ ಆಗುತ್ತದೆ. ವಿಭಾಗ ಮಟ್ಟದ ಪಂಚಾಯತ್ ಸಮಿತಿ ಹಾಗೂ ಜಿಲ್ಲಾ ಮಟ್ಟದಲ್ಲಿ, ಜಿಲ್ಲಾ ಗ್ರಾಮೀಣಾಭಿವೃದ್ಧಿ ಸಂಸ್ಥೆ (DRDA) ಜಿಲ್ಲಾ ಪರಿಷತ್ತಿನ ಅನುಮತಿಯೊಂದಿಗೆ, ಇಂತಹ ಕ್ರಮಗಳನ್ನು ಕೈಕೊಳ್ಳಲಾಗುತ್ತದೆ.

ತರಬೇತಿ, ಸಾಲ, ತಂತ್ರಜ್ಞಾನ, ಮೂಲಸೌಕರ್ಯ ಮತ್ತು ಮಾರುಕಟ್ಟೆ ಸೌಲಭ್ಯದಂತಹ ಹಲವಾರು ಅಂಶಗಳನ್ನು ಸೂಚಿಸುವ ಪ್ರಾಯೋಜನಾ ಮಾರ್ಗವನ್ನು (ಪ್ರತಿಯೊಂದು ಪ್ರಧಾನ ಚಟುವಟಿಕೆಗಾಗಿ) ಎಸ್.ಜಿ.ಎಸ್.ವೈ. ಅಂಗೀಕರಿಸುತ್ತದೆ. ಒಂದು ಕ್ಷೇತ್ರದಲ್ಲಿ ಆರ್ಥಿಕವಾಗಿ ಎಷ್ಟು ಜನರನ್ನು ಒಂದು ಪ್ರಧಾನ ಚಟುವಟಿಕೆಯ ವ್ಯಾಪ್ತಿಯಲ್ಲಿ ಒಳಪಡಿಸಲು ಸಾಧ್ಯವೆಂಬುದನ್ನು, ಪ್ರಾಯೋಜನೆಯ ವರದಿಯು ಸೂಚಿಸಬೇಕು. ಇಂತಹ ಪ್ರಾಯೋಜನಾ ವರದಿಗಳನ್ನು ತಯಾರಿಸುವ ಪ್ರಕ್ರಿಯೆಯಲ್ಲಿ, ಬ್ಯಾಂಕುಗಳು ಹಾಗೂ ಇತರ ಹಣಕಾಸು ಸಂಸ್ಥೆಗಳು ನಿಕಟವಾಗಿ ಕಾರ್ಯನಿರತವಾಗುವುದರಿಂದ, ಸಾಲದ ಮಂಜೂರಾತಿ ಮತ್ತು ಸಾಕಷ್ಟು ಹಣಕಾಸಿನ ಸೌಲಭ್ಯವನ್ನು ಖಚಿತಪಡಿಸುವ ಕಾರ್ಯದಲ್ಲಿ ಸಂಭವಿಸಬಹುದಾದ ವಿಳಂಬವನ್ನು ನಿವಾರಿಸಲು ಸಾಧ್ಯವಿದೆ. ಸಮುದಾಯ ಚಟುವಟಿಕೆಗಳ ಬಗೆಗಿನ ಪ್ರಚಲಿತ ಮೂಲಸೌಕರ್ಯದ ಪರಿಶೀಲನೆ ಮಾಡಿ ಕುಂದು ಕೊರತೆಗಳನ್ನು ಗುರುತಿಸಬೇಕು. ಎಸ್.ಜಿ.ಎಸ್.ವೈ ಪ್ರಾಯೋಜನೆಯ ವ್ಯಾಪ್ತಿಯಲ್ಲಿ, ಹಣಹೂಡಿಕೆಯಲ್ಲಿ ಕಂಡುಬಂದಿರುವಂತಹ ತೆರವು (gaps) ಗಳನ್ನು ಭರಿಸಲಾಗುತ್ತದೆ. ಪ್ರತಿ ಜಿಲ್ಲೆಯ ಒಟ್ಟು ಕಾರ್ಯಕ್ರಮಕ್ಕೆ ನಿಗದಿಮಾಡಿದ ಹಣಕಾಸಿನ ಶೇಕಡಾ 20ರಷ್ಟು ಮಿತಿಯಲ್ಲಿ 'ಎಸ್.ಜಿ.ಎಸ್.ವೈ.ದ ಮೂಲ ಸೌಕರ್ಯ ನಿಧಿ' ಎಂದು ಪರಿಗಣಿಸಿ ಅದರ ನಿರ್ವಹಣೆಯನ್ನು ಜಿಲ್ಲಾ ಗ್ರಾಮೀಣಾಭಿವೃದ್ಧಿ ಸಂಸ್ಥೆಯು ಮಾಡುತ್ತದೆ.

ಸ್ವಸಹಾಯ ಗುಂಪುಗಳು, ಗ್ರಾಮೀಣ ಪ್ರದೇಶಗಳಲ್ಲಿ ದಾರಿದ್ರ್ಯ, ನಿರುದ್ಯೋಗ ಮತ್ತು ಹಣಕಾಸಿನ ಕೊರತೆಯನ್ನು ನಿವಾರಿಸುವ ಕಾರ್ಯದಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತವೆ. ವಿಶಿಷ್ಟವಾಗಿ, ಗ್ರಾಮೀಣ ಬಡ ಮಹಿಳೆಯರ ಸಾಮಾಜಿಕ/ಆರ್ಥಿಕ ಸಮಸ್ಯೆಗಳಿಗೆ ಯೋಗ್ಯವಾದ ಪರಿಹಾರ ಕಲ್ಪಿಸಿ, ಸಮಾಜದ ಪ್ರಧಾನ ವಾಹಿನಿಗೆ ತರುವಂತಹ ಪರಿಣಾಮಕಾರಿ ಸಾಧನಗಳಾಗಿವೆ. ಸ್ವಸಹಾಯ ಗುಂಪುಗಳ ಮಹಿಳಾ ಸದಸ್ಯರನ್ನು ಸಮಾವೇಶಗೊಳಿಸಲು ಪ್ರಯತ್ನಿಸುವುದರ ಜೊತೆಗೆ ಸಂಪೂರ್ಣ ಮಹಿಳಾ ಗುಂಪುಗಳನ್ನು ರಚಿಸುವ ಕಾರ್ಯವನ್ನು ಮುಂದುವರಿಸಲಾಗುತ್ತದೆ. ಕನಿಷ್ಠ ಪಕ್ಷಕ್ಕೆ, ವಿಭಾಗ ಮಟ್ಟದಲ್ಲಿ ಅರ್ಧದಷ್ಟು ಗುಂಪುಗಳು ಸಂಪೂರ್ಣ ಮಹಿಳಾ ಗುಂಪುಗಳಾಗಬೇಕು.

## ಸ್ವರ್ಣ ಜಯಂತಿ ಗ್ರಾಮ್ ಸ್ವರೋಜಗಾರ್ ಯೋಜನೆ (S.G.S.Y)

ಈ ಯೋಜನೆಯ ವ್ಯಾಪ್ತಿಯಲ್ಲಿ ಸಹಾಯ ಪಡೆದ ಪ್ರತಿಯೊಂದು ಕುಟುಂಬವನ್ನು ಕಿರು-ಉದ್ದಿಮೆಗಳ ಲಭ್ಯತೆಯ ಮೂಲಕ, ದಾರಿದ್ರ್ಯರೇಖೆಯ ಕೆಳಗಿನಿಂದ ಮೇಲಕ್ಕೆತ್ತುವ ಮಹತ್ವದ ಧ್ಯೇಯವನ್ನು ಹೊಂದಲಾಗಿದೆ. ಕಳೆದ ಒಂದು ದಶಕದಿಂದಲೂ, ಇಂತಹ ಗುರಿ ಸಾಧನೆಗಾಗಿ, ಕ್ರಮಗಳನ್ನು ಕೈಕೊಳ್ಳಲಾಗುತ್ತಿದೆ. ಭಾರತದ ವಿವಿಧ ರಾಜ್ಯಗಳಲ್ಲಿ, ದಾರಿದ್ರ್ಯ ರೇಖೆಯನ್ನು ಕುರಿತು ವಿಭಿನ್ನತೆಗಳಿವೆ. 9ನೇ ಯೋಜನೆಯಲ್ಲಿ ದಾರಿದ್ರ್ಯ ರೇಖೆಯು ವಾರ್ಷಿಕವಾಗಿ 13,000 ರೂ.ಗಳಿಂದ 19650 ರೂ.ಗಳ ವರೆಗಿನ ವ್ಯತ್ಯಾಸವನ್ನು ಹೊಂದಿತ್ತು. 10ನೇ ಯೋಜನೆಯಲ್ಲಿ ವಾರ್ಷಿಕವಾಗಿ, ಅದು 22000 ರೂ.ಗಳಿಂದ 24000 ರೂ.ಗಳಷ್ಟು ಇರಬಹುದೆಂದು ನಿರೀಕ್ಷಿಸಲಾಗಿತ್ತು. ಸ್ವರೋಜಗಾರ್ ವ್ಯಕ್ತಿಯು ಮೂರು ವರ್ಷದ ಅವಧಿಯಲ್ಲಿ ತನ್ನ ಆಸ್ತಿ ಮತ್ತು ಕೌಶಲ್ಯವನ್ನು ವಿಸ್ತರಿಸುವಂತಹ ಅವಕಾಶಗಳು ಲಭಿಸುವಂತೆ, ಚಟುವಟಿಕೆಗಳನ್ನು ಆಯ್ಕೆಮಾಡಬೇಕು. ನಿಗದಿತ

ಅವಧಿಯಲ್ಲಿ, ಸ್ವರೋಜ್‌ಗಾರ್ ವ್ಯಕ್ತಿಯ ಒಟ್ಟು ಆದಾಯವು 2000 ರೂ. ಗಳಿಗಿಂತಲೂ ಹೆಚ್ಚಾಗಬೇಕೆಂದು ಅಪೇಕ್ಷಿಸ ಲಾಗಿತ್ತು. ಆದರೆ, ಮಾತು ಹಾಗೂ ಕೃತಿಯ ನಡುವೆ ಅಪಾರ ತಾರತಮ್ಯವಿದೆ. 11ನೇ ಯೋಜನೆಯಲ್ಲಿ ಎಸ್.ಜಿ.ಎಸ್.ವೈ. ಕಾರ್ಯಕ್ರಮಗಳ ಸಫಲತೆ ಮತ್ತು ವಿಫಲತೆಗಳನ್ನು ಕುರಿತು ನಿಷ್ಪಕ್ಷಪಾತವಾದ ಪರಿಶೀಲನೆ ಮಾಡಬೇಕು.

1) ಎಸ್.ಜಿ.ಎಸ್.ವೈ. ಅಡಿಯಲ್ಲಿ, ಫಲಾನುಭವಿಗಳನ್ನು 'ಸ್ವರೋಜ್‌ಗಾರಿ'ಗಳೆಂದು ಗುರುತಿಸಲಾಗಿದೆ.
2) ಸ್ವರೋಜ್‌ಗಾರಿಗಳು, ವ್ಯಕ್ತಿ ಅಥವಾ ಗುಂಪುಗಳಾಗಿರ ಬಹುದಾಗಿದೆ.
3) ಈ ಯೋಜನೆಯಲ್ಲಿ, 'ಗುಂಪು-ಮಾರ್ಗ'ಕ್ಕೆ ಒತ್ತು ನೀಡಲಾಗಿದೆ.
4) ಸ್ವಸಹಾಯ ಗುಂಪುಗಳು ಮೂರು ಹಂತಗಳಲ್ಲಿ ಸಾಗುತ್ತವೆ :

   (ಅ) ಗುಂಪು ರಚನೆ, (ಬ) ಬಂಡವಾಳ ನಿರ್ಮಾಣ, (ಕ) ಆದಾಯ ಸೃಷ್ಟಿಗಾಗಿ, ಆರ್ಥಿಕ ಚಟುವಟಿಕೆಗಳನ್ನು ಕೈಕೊಳ್ಳುವುದು.
5) ಬಿ.ಪಿ.ಎಲ್. ಜನಗಣತಿಯ ಮೂಲಕ ಗುರುತಿಸಲಾದ ಕುಟುಂಬಗಳಿಗೆ ಗ್ರಾಮಸಭೆಯು ಮನ್ನಣೆ ನೀಡುತ್ತದೆ.

ಸ್ವಯಂ-ಉದ್ಯೋಗಿಗಳಿಗೆ ಹಣಕಾಸು ನೆರವು ಎರಡು ಪ್ರಕಾರಗಳಲ್ಲಿ ಪ್ರಾಪ್ತವಾಗುತ್ತದೆ. (1) ಸಾಲ ಮತ್ತು (2) ಸಹಾಯಧನ. ಎಸ್.ಜಿ.ಎಸ್.ವೈ.ದಲ್ಲಿ, ಸಾಲವು ಪ್ರಧಾನ ಅಂಶವಾಗಿದೆ. ಆದರೆ, ಸಹಾಯ ಧನವು ಅಲ್ಪ ಪ್ರಮಾಣದ ಸಹಾಯಕ ಘಟಕವಾಗಿದೆ. ವಾಣಿಜ್ಯ ಬ್ಯಾಂಕು, ಸಹಕಾರಿ ಬ್ಯಾಂಕು ಹಾಗೂ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳಂತಹ ಹಣಕಾಸು ಸಂಸ್ಥೆಗಳಿಂದ ಸಾಲರೂಪದಲ್ಲಿ ಪಡೆದ ಹಣಕಾಸು, ಹೂಡಿಕೆಯ ಪ್ರಧಾನ ಭಾಗವಾಗಿರುತ್ತದೆ. ಒಂದು ಪ್ರಾಯೋಜನೆಯ ಸಾಲದ ಗಾತ್ರವು, ಪ್ರಾಯೋಜನೆಯ ಸ್ವರೂಪವನ್ನು ಅವಲಂಬಿಸುತ್ತದೆ. ಸಾಲ ಮಂಜೂರಾತಿಗಾಗಿ, ಎರಡು ವಾರಗಳಿಗಿಂತಲೂ ಹೆಚ್ಚಿನ ಕಾಲಾವಧಿಯನ್ನು ಬ್ಯಾಂಕು ತೆಗೆದುಕೊಳ್ಳುವುದಿಲ್ಲ. ನಿಗದಿತ ಹಾಗೂ ದುಡಿಮೆ ಬಂಡವಾಳದ ರೂಪದಲ್ಲಿ, ಸಾಲವಿರುತ್ತದೆ. ಪ್ರಾಯೋಜನೆಯ ವೆಚ್ಚದ ಶೇಕಡಾ 30ರಷ್ಟು ಸಹಾಯಧನ ಇರುತ್ತದೆ. ಗರಿಷ್ಠ ಮೊತ್ತವು 7,500 ರೂ.ಗಳಿಗೆ ಸೀಮಿತವಾಗಿದೆ. ಎಸ್.ಸಿ./ ಎಸ್.ಟಿ.ಗಳಿಗೆ ಸಂಬಂಧಿಸಿದ ಪ್ರಕಾರ, ಅನುಕ್ರಮವಾಗಿ ಸಹಾಯಧನವು ಶೇಕಡಾ 50ರಷ್ಟು ಮತ್ತು 1000 ರೂ.ಗಳಾಗಿರುತ್ತವೆ.

ಸ್ವಯಂ-ಉದ್ಯೋಗಿಗಳು ಉತ್ಪಾದಿಸಿದ ಸರಕು/ಸೇವೆಗಳ ಪ್ರಚಾರ, ಉನ್ನತೀಕರಣ ಹಾಗೂ ಮಾರಾಟಕ್ಕಾಗಿ, ಎಸ್.ಜಿ.ಎಸ್.ವೈ. ವ್ಯವಸ್ಥೆ ಮಾಡುತ್ತದೆ. ರಫ್ತುಗಳನ್ನು ಸಹ ಒಳಗೊಂಡಂತೆ ಸರಕುಗಳನ್ನು ಮಾರುಕಟ್ಟೆಗಳಿಗೆ ಸಾಗಿಸಲು ಮಾರುಕಟ್ಟೆಯ ಬಗೆಗಿನ ತಿಳುವಳಿಕೆ, ಮಾರುಕಟ್ಟೆಗಳ ಅಭಿವೃದ್ಧಿ, ಸಲಹಾ/ಸಮಾಲೋಚನಾ ಸೇವೆ ಮತ್ತು ಸಾಂಸ್ಥಿಕ ಏರ್ಪಾಡುಗಳಿಗೂ, ಅದು ಸಂಬಂಧಿಸಿದೆ.

## ಕೌಶಲ್ಯಾಭಿವೃದ್ಧಿ ತರಬೇತಿ (Skill Development Training)

ಸಾಕ್ಷರತೆ/ಶಿಕ್ಷಣ ಮತ್ತು ತರಬೇತಿಯು, ಗ್ರಾಮೀಣ ಸಮುದಾಯಗಳ ಸಶಕ್ತೀಕರಣ ಪ್ರಕ್ರಿಯೆಯಲ್ಲಿ ಅತ್ಯಂತ ಮಹತ್ವದ ಪಾತ್ರ ನಿರ್ವಹಿಸುತ್ತದೆ. ಎಸ್.ಜಿ.ಎಸ್.ವೈ.ಯ ನಿಕಟವಾದ ಪರಿಚಯ ಅದರ ಧ್ಯೇಯೋದ್ದೇಶ ಹಾಗೂ ಸ್ವಯಂ-ಉದ್ಯೋಗಿಗಳ ಹೊಣೆಗಾರಿಕೆಯನ್ನು ಕುರಿತು ಆರಂಭಿಕ ಮುನಶ್ಚೇತನ ಕಾರ್ಯಕ್ರಮವು ವಿವರಿಸುತ್ತದೆ. ಸ್ವಯಂ-ಉದ್ಯೋಗಿಗೆ ಕನಿಷ್ಠ ಕೌಶಲ್ಯದ ಅಗತ್ಯ (MSR) ದ ಭರವಸೆ ನೀಡಲು 'ಕೌಶಲ್ಯಾಭಿವೃದ್ಧಿ ತರಬೇತಿ'ಯನ್ನು ಕೈಕೊಳ್ಳ ಬೇಕಾಗುತ್ತದೆ. ಆಯ್ಕೆಯಾದ ಚಟುವಟಿಕೆಗಳ ಅವಶ್ಯಕತೆಗಳನ್ನು ಪೂರೈಸಲು ತರಬೇತಿಯ ಮಾದರಿ, ಕಾಲಾವಧಿ ಮತ್ತು ವ್ಯಾಸಂಗ ಕ್ರಮಗಳನ್ನು ರೂಪಿಸಲಾಗುತ್ತದೆ. ಶೇಕಡಾ 10ರಷ್ಟು ಎಸ್.ಜಿ.ಎಸ್.ವೈ. ನಿಧಿಯನ್ನು ತರಬೇತಿಗಾಗಿ ಮೀಸಲು ಇಡಲಾಗುತ್ತದೆ. ಇಂತಹ ನಿಧಿಯ ಸಮರ್ಪಕವಾದ ಬಳಕೆಯನ್ನು ಕುರಿತು ಗಂಭೀರವಾಗಿ ಯೋಚಿಸಬೇಕು.

ಸ್ವಯಂ-ಉದ್ಯೋಗಿಗಳಿಗೆ ಎರಡು ಪ್ರಕಾರದ ತರಬೇತಿಯನ್ನು ಕೈಕೊಳ್ಳಲಾಗುತ್ತದೆ. : (1) ಮುನಶ್ಚೇತನ ಕಾರ್ಯಕ್ರಮ ಮತ್ತು (2) ಕೌಶಲ್ಯ ವಿಕಾಸ ಕಾರ್ಯಕ್ರಮ. ವ್ಯವಸ್ಥಿತವಾಗಿ ರೂಪಿಸಿದಂತಹ ಕಾರ್ಯಕ್ರಮದ ಮೂಲಕ, ಕೌಶಲ್ಯಾಭಿವೃದ್ಧಿಗೆ ಒತ್ತು ನೀಡಲಾಗುತ್ತದೆ. ಒಂದು ಉತ್ತಮ ತರಬೇತಿ ಕಾರ್ಯಕ್ರಮವು ತರಬೇತಿ ನಿರತ ಅಭ್ಯರ್ಥಿಗಳಲ್ಲಿ ಪ್ರೇರಕಶಕ್ತಿ ಹಾಗೂ ಕಾರ್ಯಾಸಕ್ತಿಯನ್ನು ಜಾಗೃತಗೊಳಿಸುತ್ತದೆ. ವಿವಿಧ ಕಾರ್ಯಕ್ರಮಗಳಲ್ಲಿ ತರಬೇತಿ ಪಡೆಯುವ ಅಭ್ಯರ್ಥಿಗಳ ಪೂರ್ವ ಆಯ್ಕೆಯು ವಿವೇಚನಾಬದ್ಧವಾಗಿದ್ದರೆ, ಸೂಕ್ತವಾದ ಪರಿಣಾಮವನ್ನು ಹೊಂದಲು ಸಾಧ್ಯವಿದೆ.

ಸ್ವಸಹಾಯ ಗುಂಪುಗಳಿಗೆ ಯೋಗ್ಯವಾದ ಉದ್ಯಮಶೀಲತಾ ಪ್ರಶಿಕ್ಷಣ/ತರಬೇತಿ ನೀಡಿಕೆ ಮತ್ತು ಲಘು

ಉದ್ಯಮ ಕೇಂದ್ರಗಳ ಕಾರ್ಯಾವಲೋಕನ ಹಾಗೂ ಸಂದರ್ಶನ ಇತ್ಯಾದಿ ಕಾರ್ಯಕ್ರಮಗಳನ್ನು ಏರ್ಪಡಿಸುವುದರಿಂದ, ಸದಸ್ಯರ ಕಾರ್ಯದಕ್ಷತೆ ಮತ್ತು ಉತ್ಪಾದನೆಯ ಗುಣಾತ್ಮಕ ಬೆಳವಣಿಗೆಗೆ ಪ್ರೋತ್ಸಾಹನೆ ಲಭಿಸುವುದು. ಕೆಲವು ಲಘು ಉದ್ದಿಮೆಗಳಿಗೆ ಉತ್ತಮವಾದ ಮಾರುಕಟ್ಟೆ ಇದೆ. ಉದಾಹರಣೆಗಾಗಿ, ಹಪ್ಪಳ ತಯಾರಿಕೆಯಲ್ಲಿ ಹಣಹೂಡಿಕೆ ಹಾಗೂ ಮೂಲ ಸೌಲಭ್ಯದ ಅಗತ್ಯವಿದೆ. ಆಹಾರ ಸಂಸ್ಕರಣೆ, ವಿಭಿನ್ನ ಖಾದ್ಯ/ಪದಾರ್ಥ ತಯಾರಿಕೆ, ಜೇನು–ತುಪ್ಪ, ಅಗರಬತ್ತಿ, ಮೇಣಬತ್ತಿ, ಬೀಡಿ, ಬೇಕರಿ ಉತ್ಪನ್ನ, ಬುಟ್ಟಿ ಹೆಣಿಕೆ, ನೇಯ್ಗೆ, ನಾರಿನಿಂದ ಹಗ್ಗ ತಯಾರಿಕೆ ಇತ್ಯಾದಿ ಕಿರು–ಉದ್ದಿಮೆಗಳಲ್ಲಿ ಸೂಕ್ತವಾದ ತರಬೇತಿಯು ಅಗತ್ಯವಾಗಿದೆ. ಭಾರತದಲ್ಲಿ, ಸ್ವಸಹಾಯ ಗುಂಪುಗಳು ಕೆಳಮಟ್ಟದಿಂದ ಬೆಳವಣಿಗೆ ಹೊಂದಿ, ಪಾರದರ್ಶಕತೆ, ಮಿತವ್ಯಯ, ಅನುದಾನದ ಸದ್ಬಳಕೆ ಮತ್ತು ಅಭಿವೃದ್ಧಿಯ ಚಾಲಕಶಕ್ತಿಯಾದರೆ ಗ್ರಾಮ ಸ್ವರಾಜ್ಯದ ಕನಸನ್ನು ಸಾಕಾರಗೊಳಿಸಬಹುದಾಗಿದೆ.

## ಜಿಲ್ಲಾ ಗ್ರಾಮೀಣಾಭಿವೃದ್ಧಿ ಸಂಸ್ಥೆ (District Rural Development Agency)

ಈ ಸಂಸ್ಥೆಯ ಪಾತ್ರ ಮತ್ತು ಕಾರ್ಯವೈಖರಿಯನ್ನು ಕುರಿತು ಪ್ರತಿಯೊಬ್ಬ ಗ್ರಾಮಸ್ಥರು ಚನ್ನಾಗಿ ತಿಳಿದುಕೊಳ್ಳಬೇಕು. ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ, ಅದು ಕೈಕೊಂಡಿರುವಂತಹ ಚಟುವಟಿಕೆಗಳನ್ನು ಪರಿಶೀಲಿಸಬೇಕು. ಗ್ರಾಮೀಣ ಸಮುದಾಯಗಳ ಸಶಕ್ತೀಕರಣದ ಮಾರ್ಗದಲ್ಲಿ ಎಷ್ಟು ದೂರದ ದಾರಿಯನ್ನು, ಅದು ಕ್ರಮಿಸಿದೆ ಎಂಬುದರ ಬಗೆಗೆ ಜಾಗೃತಿ ಮೂಡಬೇಕು.

ಅದು (DRDA) ಪಂಚಾಯತ್ ಸಮಿತಿಗಳ ಮುಖಾಂತರ 'ಸ್ವರ್ಣ ಜಯಂತಿ ಸ್ವರೋಜ್‌ಗಾರ್ ಯೋಜನೆ'ಯನ್ನು ಅನುಷ್ಠಾನಗೊಳಿಸುತ್ತದೆ. ಯೋಜನಾ ಪ್ರಕ್ರಿಯೆ, ಕಾರ್ಯಾಚರಣೆ ಮತ್ತು ನಿರ್ವಹಣೆಯು ಬ್ಯಾಂಕು, ಇತರ ಹಣಕಾಸು ಸಂಸ್ಥೆಗಳು, ಪಂಚಾಯತ್ ರಾಜ್ ಸಂಸ್ಥೆಗಳು, ಸರ್ಕಾರೇತರ ಸಂಘಟನೆಗಳು ಹಾಗೂ ಜಿಲ್ಲೆಯ ತಾಂತ್ರಿಕ ಸಂಸ್ಥೆಗಳನ್ನು ಸಂಯೋಜಿಸುವುದು.

ಎಸ್.ಜಿ.ಎಸ್.ವೈ. ವ್ಯಾಪ್ತಿಯಲ್ಲಿ, ಅನುಕ್ರಮವಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಶೇಕಡಾ 75 ಮತ್ತು 25ರಷ್ಟು ನಿಧಿ ಪೂರೈಕೆಯ ಜವಾಬ್ದಾರಿ ಹೊಂದಿವೆ. ವಿವಿಧ ರಾಜ್ಯಗಳಲ್ಲಿ ಕಂಡುಬರುವ ದಾರಿದ್ರ್ಯದ ಒತ್ತಡಕ್ಕೆ ಸಂಬಂಧಿಸಿದಂತೆ, ಕೇಂದ್ರ ಸರ್ಕಾರದ ನಿಧಿಯನ್ನು, ರಾಜ್ಯಗಳಿಗೆ ವಿತರಿಸಲಾಗುತ್ತದೆ. ಈ ಯೋಜನೆಯ ಕಾರ್ಯಾಚರಣೆಗೆ ಸ್ವಸಹಾಯ ಗುಂಪುಗಳು ಸಮರ್ಪಕವಾದ ತಳಹದಿಯನ್ನು ನಿರ್ಮಿಸುವಂತಹ ಮಹತ್ವದ ಹೊಣೆಗಾರಿಕೆಯನ್ನು ಹೊಂದಿವೆ. ಗ್ರಾಮೀಣ ಜನರ ದಾರಿದ್ರ್ಯ ನಿವಾರಣೆ, ಜೀವನಮಟ್ಟ ಸುಧಾರಣೆ, ವಿಭಿನ್ನ ಮಂತ್ರಾಲಯ, ವಿಭಾಗ ಮತ್ತು ಸಂಸ್ಥೆಗಳು ಅನುಷ್ಠಾನಗೊಳಿಸುವ ಕಾರ್ಯಕ್ರಮಗಳನ್ನು ಕುರಿತು ಸಾರ್ವಜನಿಕರಲ್ಲಿ ಜಾಗೃತಿಯನ್ನುಂಟು ಮಾಡುವ ಹಾಗೂ ಜನರಿಗೆ ಮಾಹಿತಿ ನೀಡುವ ಕಾರ್ಯದಲ್ಲಿ, ಸ್ವಸಹಾಯ ಗುಂಪುಗಳು ಲಕ್ಷ್ಯವನ್ನು ಕೇಂದ್ರೀಕರಿಸಬೇಕು.

ಸ್ವಸಹಾಯ ಗುಂಪುಗಳ ಸದ್ಬಳಕೆಗೆ ಅವಕಾಶವಿರುವಂತಹ ಇಲಾಖೆಗಳು/ಕಾರ್ಯಕ್ಷೇತ್ರಗಳನ್ನು ಗುರುತಿಸಲಾಗಿದೆ. ಆರೋಗ್ಯ, ಅರಣ್ಯೀಕರಣ, ಕೃಷಿ/ಕೃಷಿಯೇತರ ಚಟುವಟಿಕೆ, ಗ್ರಾಮೀಣ ಕೈಗಾರಿಕೆಗಳ ಅಭಿವೃದ್ಧಿ, ಗ್ರಾಮೀಣ ನೈರ್ಮಲೀಕರಣ (1986), ಶಿಕ್ಷಣ, ಮಧ್ಯಾಹ್ನದ ಬಿಸಿಯೂಟ ಕಾರ್ಯಕ್ರಮ, ಸ್ವರ್ಣ ಜಯಂತಿ ಗ್ರಾಮ್ ಸ್ವರೋಜಗಾರ್ ಯೋಜನೆ (1999) ಸ್ತ್ರೀ ಶಕ್ತಿ ಯೋಜನೆ (2000–10), ಪರಿಹಾರ ಕಾರ್ಯಕ್ರಮ, ಇತ್ಯಾದಿ ಕ್ಷೇತ್ರಗಳಲ್ಲಿ ಸ್ವಸಹಾಯ ಗುಂಪುಗಳ ಕಾರ್ಯದಕ್ಷತೆಯನ್ನು ಪರಿಶೀಲಿಸಬೇಕಾಗುತ್ತದೆ.

ಗ್ರಾಮೀಣ ಬಡವರಲ್ಲಿ (ದಾರಿದ್ರ್ಯ ರೇಖೆಯ ಕೆಳಗಿನವರು) ಕಡುಬಡವರು/ಅತಿ ದುರ್ಬಲ ಗುಂಪುಗಳ ಮೇಲೆ ಲಕ್ಷ್ಯವನ್ನು ಕೇಂದ್ರೀಕರಿಸಲಾಗುತ್ತದೆ. ಎಸ್.ಸಿ. ಮತ್ತು ಎಸ್.ಟಿ.ಗಳು ಸ್ವಯಂ–ಉದ್ಯೋಗಿಗಳ ಶೇಕಡಾ 50, ಮಹಿಳೆಯರು ಶೇಕಡಾ 40ರಷ್ಟು ಹಾಗೂ ಶೇಕಡಾ 3ರಷ್ಟು ವಿಕಲ ಚೇತನರು. ಜನಸಂಖ್ಯೆಯ ಬದಲಾವಣೆ ಮತ್ತು ಸಾಮಾಜಿಕ/ಆರ್ಥಿಕ ಸ್ಥಿತ್ಯಂತರದ ಬೆಳಕಿನಲ್ಲಿ, ಫಲಾನುಭವಿಗಳ ಪ್ರಮಾಣವನ್ನು ಕುರಿತು, ನಿರಂತರ ಸಂಶೋಧನೆಗಳನ್ನು ಕೈಕೊಳ್ಳಬೇಕಾಗುತ್ತದೆ.

ಜಿಲ್ಲಾ ಗ್ರಾಮೀಣಾಭಿವೃದ್ಧಿ ಸಂಸ್ಥೆಯಲ್ಲಿ, ಆಮೂಲಾಗ್ರವಾದ ಪರಿವರ್ತನೆಗಳಾಗಬೇಕು. 'ಅಭಿವೃದ್ಧಿ' ಮತ್ತು 'ಆಡಳಿತೆ'ಯ ಪ್ರಗತಿಪರ ಅನುಷ್ಠಾನಗೊಳಿಸುವಂತಹ ಪ್ರಧಾನ ಆಡಳಿತಾಧಿಕಾರಿಗಳಿಗೆ ಆದ್ಯತೆ ನೀಡಬೇಕು. DRDA ಯ ಸುಧಾರಣೆ ಮಾಡಿ, ಸುದೃಢಗೊಳಿಸಬೇಕು.

❑

# ಮಕ್ಕಳ ಗ್ರಾಮಸಭೆ – ಮಕ್ಕಳಿಗಾಗಿ ಆದ್ಯತೆ



ಶ್ರೀಮತಿ ರಶ್ಮಿ ವಿ. ಭಾ.ಆ.ಸೇ.,*

ಮಕ್ಕಳ ಗ್ರಾಮಸಭೆಯಲ್ಲಿ ಚರ್ಚಿಸಬಹುದಾದ ವಿಷಯಗಳ ಕುರಿತು ಮಾಹಿತಿ.

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಪ್ರತಿ ವರ್ಷ ನವೆಂಬರ್ ತಿಂಗಳಲ್ಲಿ ಮಕ್ಕಳ ಹಕ್ಕುಗಳ ದಿನಾಚರಣೆ ಹಮ್ಮಿಕೊಳ್ಳಲು ಹಾಗೂ ಒಂದು ದಿನವನ್ನು ವಿಶೇಷ ಗ್ರಾಮ ಸಭೆ ನಡೆಸಲು ಮೀಸಲಿಡಬೇಕೆಂದು ಈಗಾಗಲೇ ಸುತ್ತೋಲೆಯಲ್ಲಿ ಎಲ್ಲಾ ಸ್ಥಳೀಯ ಪಂಚಾಯತ್ ಸಂಸ್ಥೆಗಳಿಗೆ ತಿಳಿಸಲಾಗಿದೆ. ಗ್ರಾಮ ಸಭೆಗಳಲ್ಲಿ ಸಮಗ್ರವಾಗಿ ಚರ್ಚಿಸಿ ಮಕ್ಕಳಿಗೆ ಅನುಕೂಲವಾಗುವಂತೆ ಗ್ರಾಮ ಪಂಚಾಯತಿಗಳು, ಶಾಲೆಗಳು, ಅಂಗನವಾಡಿಗಳು ಮತ್ತು ಆರೋಗ್ಯ ಕೇಂದ್ರಗಳು ಸೂಕ್ತ ಕ್ರಮ ಕೈಗೊಳ್ಳಲು ಗುರುತರವಾದ ಜವಾಬ್ದಾರಿಯನ್ನು ಹೊಂದಿವೆ. ಹಾಗೂ ಮಕ್ಕಳ ಪರವಾದ ನೀತಿ ನಿಯಮಗಳನ್ನು ಜಾರಿ ಮಾಡಲು ಕ್ರಿಯಾಶೀಲವಾಗಿರಬೇಕು.

ಪ್ರತಿ ಗ್ರಾಮ ಪಂಚಾಯತಿಯಲ್ಲಿ ಕೆಳಗೆ ಬರುವ ಗ್ರಾಮಗಳಲ್ಲಿ ಗ್ರಾಮವಾರು ನಮೂದು ಮಾಡಿರುವ ವಿಷಯಗಳ ಬಗ್ಗೆ ಅಂಕಿ ಅಂಶಗಳು ಲಭ್ಯವಿರಬೇಕು ಮತ್ತು ಇದನ್ನು ಮಕ್ಕಳ ಗ್ರಾಮ ಸಭೆಯಲ್ಲಿ ಕಡ್ಡಾಯವಾಗಿ ಮಂಡಿಸಿ ಚರ್ಚೆ ನಡೆಸಿದರೆ ಉತ್ತಮ ಚರ್ಚೆಗೆ ಅವಕಾಶವಾಗುತ್ತದೆ ಮತ್ತು ಗ್ರಾಮದಲ್ಲಿ ಇರುವ ವಸ್ತುಸ್ಥಿತಿ ಮುಂದೆ ಬರುತ್ತದೆ.

1. ಗರ್ಭಿಣಿಯರಿಗೆ ಸ್ಥಳೀಯ ಗ್ರಾಮ ಪಂಚಾಯತಿ ವ್ಯಾಪ್ತಿಯ ಅಂಗನವಾಡಿ ಕೇಂದ್ರಗಳಲ್ಲಿ ಪೌಷ್ಠಿಕ ಆಹಾರ/ನ್ಯೂಟ್ರಿಷನ್ ಕಿಟ್ಸ್‌ಗಳನ್ನು ನೀಡಲಾಗುವ ಕಾರ್ಯಕ್ರಮವನ್ನು ಸರ್ಕಾರ ಹಮ್ಮಿಕೊಂಡಿದೆ. ಇದಕ್ಕಾಗಿ ಗರ್ಭಿಣಿಯರು ಮೊದಲ ಮೂರು ತಿಂಗಳೊಳಗಾಗಿ ಅಂಗನವಾಡಿಯಲ್ಲಿ ನೋಂದಣಿ ಮಾಡಿಸಿಕೊಳ್ಳಬೇಕಾಗುತ್ತದೆ. ಹಾಗಾಗಿ ನಿಮ್ಮ ಗ್ರಾಮದಲ್ಲಿ ಗರ್ಭಿಣಿಯರು ನೋಂದಣಿ ಮಾಡಿಸಿಕೊಳ್ಳದಿದ್ದ ಪಕ್ಷದಲ್ಲಿ ಅದಕ್ಕೆ ಕಾರಣಗಳೇನು? ಹೌದು ಎಂದಾದಲ್ಲಿ ಎಲ್ಲಾ ಗರ್ಭಿಣಿಯರು ನೋಂದಾವಣಿ ಮಾಡಿಕೊಳ್ಳಲು ಏನು ಕ್ರಮ ತೆಗೆದುಕೊಂಡಿದ್ದೀರಿ?

2. ತಮ್ಮ ಗ್ರಾಮ ಪಂಚಾಯತಿ ವ್ಯಾಪ್ತಿಯ ಗರ್ಭಿಣಿಯರು ನಿಗದಿಪಡಿಸಿರುವ ಷೆಡ್ಯೂಲ್‌ನ್ನು ಅನುಸರಿಸಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ತಪಾಸಣೆಗೆ ಒಳಗಾಗುತ್ತಿದ್ದಾರೆಯೇ? ಇಲ್ಲದಿದ್ದಲ್ಲಿ ಇದರ ಬಗ್ಗೆ ಕೈಗೊಂಡ ಕ್ರಮಗಳೇನು?

3. ಗರ್ಭಿಣಿಯರು ವೈದ್ಯ ತಪಾಸಣೆಯೊಂದಿಗೆ ಆಸ್ಪತ್ರೆಗಳಲ್ಲಿಯೇ ಮಗುವಿಗೆ ಜನ್ಮ ನೀಡಬೇಕು. ಮನೆಯಲ್ಲಿಯೇ ಮಕ್ಕಳಿಗೆ ಜನ್ಮ ನೀಡುವುದು ತಾಯಿ ಮತ್ತು ಮಗುವಿಗೆ ಅಪಾಯಕಾರಿ. ಇದಕ್ಕಾಗಿ ನಿಮ್ಮ ಗ್ರಾಮ ಪಂಚಾಯತ್‌ನಲ್ಲಿ ಎಲ್ಲಾ ಅನುಕೂಲವಿದೆಯೇ? ಇಲ್ಲದಿದ್ದ ಪಕ್ಷದಲ್ಲಿ ಈ ನಿಟ್ಟಿನಲ್ಲಿ ಏನು ಕ್ರಮ ತೆಗೆದುಕೊಂಡಿದ್ದೀರಿ?

4. ಹೆಣ್ಣು ಭ್ರೂಣ ಹತ್ಯೆಯನ್ನು ತಡೆಯುವ ಬಗ್ಗೆ ಗ್ರಾಮಸ್ಥರಲ್ಲಿ ಅರಿವು ಮೂಡಿಸಲು ಯಾವ ಕ್ರಮಗಳನ್ನು ಕೈಗೊಂಡಿದ್ದೀರಿ? ಹೆಣ್ಣು ಮತ್ತು ಗಂಡು ಮಕ್ಕಳಿಗೆ ಸಮಾನ ರೀತಿಯಲ್ಲಿ ಅವಕಾಶಗಳು ದೊರೆಯುತ್ತಿವೆಯೇ?

5. ನಿಮ್ಮ ಗ್ರಾಮದಲ್ಲಿ ಅಂಗನವಾಡಿಗೆ ಅಂದರೆ 6 ವರ್ಷದೊಳಗೆ ದಾಖಲಾಗಬೇಕಾಗಿರುವ ಮಕ್ಕಳ ಸಂಖ್ಯೆ ಎಷ್ಟು? ಎಷ್ಟು ಮಕ್ಕಳು ದಾಖಲಾಗಿರುತ್ತವೆ? ಯಾವುದಾದರೂ ಮಕ್ಕಳು ದಾಖಲಾಗದೆ ಇದ್ದಲ್ಲಿ ಅವರನ್ನು ಅಂಗನವಾಡಿಗೆ ದಾಖಲು ಮಾಡಲು ಏನು ಕ್ರಮ ಕೈಗೊಂಡಿರುತ್ತೀರಿ?

* ಸರ್ಕಾರದ ಕಾರ್ಯದರ್ಶಿಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

6. ಅಂಗನವಾಡಿಯಲ್ಲಿ ದಾಖಲಾಗುವ ಮಕ್ಕಳು ನಿಗದಿತವಾಗಿ ಬರುತ್ತಿದ್ದಾರೆಯೇ? ಅವರುಗಳು ಬಾರದಿದ್ದಲ್ಲಿ ಮತ್ತೆ ಅಂಗನವಾಡಿಗೆ ಬರುವಂತೆ ಮನವೊಲಿಸಲು ನಿಮ್ಮ ಕ್ರಮವೇನು?

7. ಸಬಲ ಯೋಜನೆಯಡಿಯಲ್ಲಿ 9 ಜಿಲ್ಲೆಗಳಲ್ಲಿ 11 ರಿಂದ 18 ವರ್ಷಗಳ ಹೆಣ್ಣು ಮಕ್ಕಳಿಗೆ ನೇರವಾಗಿ ಯೋಜನೆಯ ಅನುಕೂಲ ನೀಡಲಾಗುತ್ತಿದೆಯೇ? ನಿಮ್ಮ ಗ್ರಾಮ ಪಂಚಾಯತಿಯಲ್ಲಿ ಈ ಯೋಜನೆ ಇದೆಯೇ? ಇದ್ದಲ್ಲಿ, ಯೋಜನೆಗೆ ಒಳಪಡುವ ಎಲ್ಲಾ ಹೆಣ್ಣು ಮಕ್ಕಳು ನ್ಯೂಟ್ರೀಷನ್ ಕಿಟ್ ಪಡೆಯುತ್ತಿದ್ದಾರೆಯೇ?

8. ನಿಮ್ಮ ಗ್ರಾಮದಲ್ಲಿ ಅಂಗನವಾಡಿ ಸ್ವಂತ ಕಟ್ಟಡ ಇದೆಯೆ? ಇಲ್ಲದಿದ್ದಲ್ಲಿ ಸ್ವಂತ ಕಟ್ಟಡ ಹೊಂದಲು ಇರುವ ಅನಾನುಕೂಲಗಳೇನು?

9. ಅಂಗನವಾಡಿ ಕೇಂದ್ರಕ್ಕೆ ನೀರಿನ ಸೌಲಭ್ಯ ಇದೆಯಾ? ಇಲ್ಲದಿದ್ದಲ್ಲಿ ಕಾರಣ ಏನು? ನೀವು ಏನು ಮಾಡಬಹುದು?

10. ಅಂಗನವಾಡಿ ಕೇಂದ್ರಕ್ಕೆ ವಿದ್ಯುತ್ ಸೌಲಭ್ಯ ಇದೆಯಾ? ಇಲ್ಲದಿದ್ದಲ್ಲಿ ಕಾರಣ ಏನು? ಪಡೆಯಲು ಏನು ಕ್ರಮ ತೆಗೆದುಕೊಂಡಿದ್ದೀರಾ?

11. ಅಂಗನವಾಡಿ ಕೇಂದ್ರಕ್ಕೆ ಮಕ್ಕಳ ಸ್ನೇಹಿ ಶೌಚಾಲಯದ ಸೌಲಭ್ಯ ಇದೆಯಾ? ಇಲ್ಲದಿದ್ದಲ್ಲಿ ಕಾರಣ ಏನು?

12. ನಿಮ್ಮ ಗ್ರಾಮದಲ್ಲಿ ಶಾಲೆಗೆ ಹೋಗುವ ಮಕ್ಕಳ ಸಂಖ್ಯೆ ಎಷ್ಟು? ಅದರಲ್ಲಿ ಎಲ್ಲರೂ ಶಾಲೆಗೆ ಹೋಗುತ್ತಿದ್ದಾರಾ?

13. ಶಾಲೆಗೆ ಹೋಗುತ್ತಿರುವ ಮಕ್ಕಳು ನಿಗದಿತವಾಗಿ ಶಾಲೆಗೆ ಹೋಗುತ್ತಿದ್ದಾರೆಯೇ, ಅವರಲ್ಲಿ ಶಾಲೆ ಬಿಟ್ಟ ಮಕ್ಕಳು ಯಾರಾದರೂ ಇದ್ದಾರೆಯೇ? ಇದ್ದಲ್ಲಿ ಅವರು ಮತ್ತೆ ಶಾಲೆಗೆ ಮರಳಿ ಬರುವಂತೆ ಮನವೊಲಿಸಲು ಏನು ಕ್ರಮ ಕೈಗೊಂಡಿದ್ದೀರಾ?

14. ಶಾಲೆಗೆ ಹೋಗುತ್ತಿರುವ ಮಕ್ಕಳು ಮತ್ತು ಶಾಲೆಯನ್ನು ಮಧ್ಯದಲ್ಲೇ ಬಿಟ್ಟು ಬರುತ್ತಿರುವವರ ಸಂಖ್ಯೆಯನ್ನು ತಪಾಸಣೆ ಮಾಡಲಾಗುತ್ತಿದೆಯೇ?

15. ನಿಮ್ಮ ಊರಿನ ಶಾಲೆ/ಸರ್ಕಾರಿ ಪದವಿ ಪೂರ್ವ ಕಾಲೇಜು ಗಳಲ್ಲಿ ಶೌಚಾಲಯ, ನೀರಿನ ಸೌಲಭ್ಯ ಮತ್ತು ಕಾಂಪೌಂಡ್ ಸೌಲಭ್ಯವಿದೆಯೇ, ಇಲ್ಲದಿದ್ದಲ್ಲಿ ಇವುಗಳ ಬಗ್ಗೆ ತೆಗೆದುಕೊಳ್ಳ ಬಹುದಾದ ಕ್ರಮಗಳೇನು?

16. ನಿಮ್ಮ ಊರಿನಲ್ಲಿ 10ನೇ ತರಗತಿ ತೇರ್ಗಡೆಯಾದ ನಂತರ ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ಹೋಗುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು? ಕಾಲೇಜಿಗೆ ಹೋಗದೇ ಇರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು? ಕಾರಣಗಳೇನು? ಅವರನ್ನು ಕಾಲೇಜಿಗೆ ಕಳುಹಿಸಲು ತೆಗೆದುಕೊಳ್ಳಬಹುದಾದ ಕ್ರಮಗಳೇನು?

17. ಗ್ರಾಮಗಳನ್ನು ಬಿಟ್ಟು ವಲಸೆ ಹೋಗುತ್ತಿರುವ ಕುಟುಂಬಗಳು ಇವೆಯೇ? ಇದ್ದಲ್ಲಿ ಅವರು ವಲಸೆ ಹೋಗುವುದನ್ನು ತಪ್ಪಿಸಲು ಏನು ಕ್ರಮ ಕೈಗೊಂಡಿದ್ದೀರಿ?

18. ನಿಮ್ಮ ಗ್ರಾಮದಲ್ಲಿ ಬಾಲ ಕಾರ್ಮಿಕರು ಇದ್ದಾರೆಯೇ? ಬಾಲ ಕಾರ್ಮಿಕ ಪದ್ಧತಿ ನಿಷೇಧದ ಬಗ್ಗೆ ಗ್ರಾಮಸ್ಥರಲ್ಲಿ ಅರಿವು ಇದೆಯೇ? ಇಲ್ಲದಿದ್ದಲ್ಲಿ ಜಾಗೃತಿ ಮೂಡಿಸುವ ಹಾಗೂ ತಡೆಗಟ್ಟಲು ಏನು ಕ್ರಮ ತೆಗೆದುಕೊಂಡಿದ್ದೀರಿ?

19. ನಿಮ್ಮ ಗ್ರಾಮದಲ್ಲಿ ಮಕ್ಕಳು ಶಾಲೆ ಬಿಟ್ಟು ಬಾಲ ಕಾರ್ಮಿಕರಾಗಿ ಕೃಷಿ ಚಟುವಟಿಕೆಗಳನ್ನು ಮಾಡುತ್ತಿದ್ದಾರೆಯೇ? ಮಾಡುತ್ತಿದ್ದಲ್ಲಿ ಅವರನ್ನು ಗುರುತಿಸಿ ಮತ್ತೆ ಶಾಲೆಗೆ ಕರೆತರಲು ಕೈಗೊಂಡಿರುವ ಕ್ರಮಗಳೇನು?

20. ರಾಜ್ಯದಲ್ಲಿ ಮಕ್ಕಳ ಅನೈತಿಕ ಸಾಗಾಟವು ನಡೆಯುತ್ತಿರುವುದಾಗಿ ಆಗಿಂದಾಗ್ಗೆ ಪತ್ರಿಕೆಗಳಲ್ಲಿ ವರದಿಯಾಗುತ್ತಿದ್ದು, ಈ ಸಂಬಂಧ ಮಹಿಳೆಯರ ಮತ್ತು ಮಕ್ಕಳ ಅನೈತಿಕ ಸಾಗಾಟದ ವಿರುದ್ಧ ಜನರಲ್ಲಿ ಅರಿವು ಮೂಡಿಸುವ ಯಾವ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗಿದೆ?

21. ಬಾಲ್ಯ ವಿವಾಹ ಪ್ರಕರಣಗಳು ನಿಮ್ಮ ಗ್ರಾಮದಲ್ಲಿ ನಡೆಯು ತ್ತಿದೆಯಾ? ಅದನ್ನು ತಡೆಗಟ್ಟುವ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಕ್ರಮವನ್ನು ಕೈಗೊಂಡಿದ್ದೀರಾ?

ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ಮಕ್ಕಳ ಗ್ರಾಮ ಸಭೆಯಲ್ಲಿ ಈ ಮೇಲಿನ ವಿಷಯಗಳನ್ನು ಚರ್ಚಿಸಲು ಮತ್ತು ಅದಕ್ಕೆ ಸಂಬಂಧಪಟ್ಟ ಗ್ರಾಮಾವಾರು ಅಂಕಿ ಅಂಶಗಳನ್ನು ಗ್ರಾಮ ಸಭೆಯಲ್ಲಿ ಮಂಡಿಸಲು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು/ಕಾರ್ಯದರ್ಶಿ ಗಳಿಗೆ ನಿರ್ದೇಶನ ನೀಡುವುದಲ್ಲದೆ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಯವರ ಹಂತದಲ್ಲಿ ಎಲ್ಲಾ ಇಲಾಖೆಗಳ ಅಂಕಿ ಅಂಶಗಳನ್ನು ಪಡೆಯಲು ಆ ಇಲಾಖೆಗಳೊಂದಿಗೆ ಸಮನ್ವಯ ನಡೆಸಿ ಪಡೆದುಕೊಳ್ಳಬೇಕು. ಎಲ್ಲಾ ಜಿಲ್ಲೆಗಳಲ್ಲಿ ಮಕ್ಕಳ ಗ್ರಾಮ ಸಭೆಯನ್ನು ನಡೆಸಿದ ಬಗ್ಗೆ ನಡವಳಿಕೆ ಹಾಗೂ ವರದಿಯನ್ನು ಜನವರಿ 15ನೇ ತಾರೀಖಿನೊಳಗೆ ಕಡ್ಡಾಯ ವಾಗಿ ಕಳುಹಿಸಲು ಕ್ರಮ ವಹಿಸು ವುದು. ಇದನ್ನು ಅರ್ಥಪೂರ್ಣವಾಗಿ ನಡೆಸಿ ಗ್ರಾಮದ ಹಂತದಲ್ಲಿ ಮಕ್ಕಳ ವಿಷಯಗಳನ್ನು ಗಂಭೀರವಾಗಿ ಚರ್ಚಿಸಲು ಮತ್ತು ಪ್ರತಿ ನಾಲ್ಕು ತಿಂಗಳಿಗೊಮ್ಮೆ ತೆಗೆದುಕೊಳ್ಳ ಬಹುದಾದ ಪರಿಹಾರಾತ್ಮಕ ಕ್ರಮಗಳನ್ನು ಗ್ರಾಮವಾರು ಗ್ರಾಮೀಣ ನಾಗರಿಕರೊಂದಿಗೆ ಗ್ರಾಮ ಸಭೆಯಲ್ಲಿ ಚರ್ಚಿಸುತ್ತೀರೆಂದು ಆಶಿಸುತ್ತೇನೆ.

❑

# ಬರಿದಾದ ಬದುಕು



ಇನಾಯತ್ ಪಾಷ .ಎಸ್*
ಮೊಬೈಲ್ : 9845022741

ನಮ್ಮಲ್ಲಿರುವ ಕೋಟಿ ಕೋಟಿ ಹಣ ಅಥವಾ ಉನ್ನತ ತಂತ್ರಜ್ಞಾನ ಕಷ್ಟ ಕಾಲದಲ್ಲಿ ಒಂದು ಲೋಟ ಕುಡಿಯುವ ನೀರನ್ನು ಒದಗಿಸಲು ಅಸಮರ್ಥವಾದರೆ ಅದರ ಮೇಲೆ ಅಷ್ಟೊಂದು ಮೋಹ ಏಕೆ.

ಪ್ರೆಟ್ರೋಲಿಯಂ ಉತ್ಪನ್ನಗಳು ಮತ್ತು ವಿದ್ಯುತ್ ಇಲ್ಲದ ಮಾನವನ ಜೀವನ ಸ್ಥಿತಿಯನ್ನು ಹಾಗೆಯೇ ಸುಮ್ಮನೆ ಒಮ್ಮೆ ಕಲ್ಪಿಸಿಕೊಳ್ಳೋಣವೇ ?

ಮನುಷ್ಯನ ದಿನನಿತ್ಯದ ಆಗು ಹೋಗುಗಳಲ್ಲಿ ಪ್ರೆಟ್ರೋಲಿಯಂ ಉತ್ಪನ್ನಗಳು ಮತ್ತು ವಿದ್ಯುತ್ ಎಷ್ಟರ ಮಟ್ಟಿಗೆ ಪ್ರಾಮುಖ್ಯತೆ ಪಡೆದಿವೆಯೆಂದರೆ ಅದನ್ನು ಒಂದೆರಡು ಮಾತುಗಳಲ್ಲಿ ಹೇಳಿ ಮುಗಿಸುವುದು ಖಂಡಿತ ಸಾಧ್ಯವಿಲ್ಲ. ಪ್ರೆಟ್ರೋಲಿಯಂ ಉತ್ಪನ್ನಗಳು ಮತ್ತು ವಿದ್ಯುತ್ ಇಲ್ಲದೇ ಇಂದಿನ ಮಾನವ ಜೀವಿಸುವುದು ಎಂದರೆ ನೀರಿನಿಂದ ಹೊರತೆಗೆದ ಮತ್ಸ್ಯದ ಕಥೆಯಾದೀತು.

ಆ ದಿನ ಎಂದಿನಂತೆ ಕಛೇರಿ ಕೆಲಸಗಳನ್ನು ಮುಗಿಸಿ ಸಂಜೆ ನನ್ನ ದ್ವಿಚಕ್ರ ವಾಹನದಲ್ಲಿ ಮನೆಗೆ ಹೊರಟೆ. ದಿನನಿತ್ಯ ಗಿಜಿಗುಡುತ್ತಿದ್ದ ಬೆಂಗಳೂರಿನ ರಸ್ತೆಗಳು ಇಂದು ಬಿಕೋ ಎನ್ನುತ್ತಿದ್ದವು. ಕಾರಣ ತಿಳಿಯದಾದೆ. ಮನೆಗೆ ಹೋಗುತ್ತಾ ಮಾರ್ಗ ಮಧ್ಯ ನನ್ನ ವಾಹನ ಮುಂದೆ ಹೋಗದೇ ನಿಂತಿತು. ಕೆಳಗಿಳಿದು ನೋಡಿದರೆ ಪೆಟ್ರೋಲ್ ಟ್ಯಾಂಕ್ ಖಾಲಿ. ಗಾಡಿಯನ್ನು ನೂಕುತ್ತಾ ಪೆಟ್ರೋಲ್ ಬಂಕ್ ಅರಸುತ್ತಾ ಹೋದರೆ ಅಚ್ಚರಿಯೊಂದು ಕಾದಿತ್ತು. ಯಾವ ಬಂಕುಗಳಲ್ಲಿಯೂ ಸಹ ಇಂಧನಗಳ ಲಭ್ಯತೆ ಇಲ್ಲವೇ ಇಲ್ಲ. ಜನರನ್ನು ಕೇಳಿದರೆ ಒಂದೇ ಉತ್ತರ; ಪ್ರೆಟ್ರೋಲಿಯಂ ಉತ್ಪನ್ನಗಳನ್ನು ಭೂಮಿಯಿಂದ ಹೊರತೆಗೆಯಲು ಬರಿದಾಗಿವೆ. ಇನ್ನೆಲ್ಲಿಯ ಪೆಟ್ರೋಲ್, ಡೀಸೆಲ್, ಸೀಮೆಎಣ್ಣೆ. ಎಲ್ಲಿಯೂ ದೊರಕುವುದಿಲ್ಲ ಎಂಬುದು. ಹಾಗಾದರೆ ಬಹು ದೂರದ ನನ್ನ ಮನೆಯನ್ನು ತಲುಪುವುದಾದರೂ ಹೇಗೆ. ತಮ್ಮ ತಮ್ಮ ಗಾಡಿಗಳನ್ನು ಮೂಲೆಗೆ ತಳ್ಳಿ ನಡೆದು ಹೋಗುತ್ತಿದ್ದವರ ಚಿತ್ರಣ ಎಲ್ಲೆಡೆ. ಸಾರ್ವಜನಿಕ ಸಾರಿಗೆಯ ಬಸ್ಸುಗಳು ಸಹ ರಸ್ತೆ ಬದಿ ಎಲ್ಲೆಂದರಲ್ಲಿ ನಿಂತಿವೆ. ಎನೋ ಕೋಲಾಹಲ. ಜನರು ಗಾಬರಿಗೊಂಡಿದ್ದಾರೆ. ನನ್ನ ವಾಹನವನ್ನು ಸಹ ಒಂದು ಮೂಲೆಗೆ ತಳ್ಳಿ ಹಾಗೂ ಹೀಗೂ ನಡೆದು ಮನೆ ತಲುಪಿದ ಸಮಯ ರಾತ್ರಿ ಹತ್ತಾಗಿತ್ತು.

ಬೆಳಿಗ್ಗೆ ಹೋದ ಕರೆಂಟ್ ಇಷ್ಟೊತ್ತಾದರು ಬಂದಿಲ್ಲ. ಮನೇಲಿ ಹ್ಯಾಂಗಿರೋದು ಎಂದು ಮನೆಯವರ ಗದ್ದಲ. ಹೌದು ಮನೆಯು ಕತ್ತಲ ಗವಿಯಾಗಿದೆ, ಕುಡಿಯಲು ಬಳಸಲು ನೀರಿಲ್ಲ, ಅಡಿಗೆ ಮಾಡಲು ಸಾಧ್ಯವಾಗುತ್ತಿಲ್ಲ, ಮಕ್ಕಳು ಮೂಲೆ ಸೇರಿವೆ. ವಯಸ್ಸಾದ ಹಿರಿಯರು ಗಾಳಿ ಇಲ್ಲದೇ ಪರಿತಪಿಸುತ್ತಿದ್ದಾರೆ. ಒಂದು ಸಣ್ಣದಾದ ಮೇಣದ ಬತ್ತಿಯು ಸ್ಪರ್ಧೆಗೆ ಬಿದ್ದಂತೆ ಉರಿದು ಮನೆಗೆ ಬೆಳಕನ್ನು ನೀಡುವ ಪ್ರಯತ್ನ ಮಾಡುತ್ತಿದೆ. ಯಾವಾಗ ನಂದಿಹೋಗುವುದೋ ಎಂಬ ಆತಂಕ. ಏಕೆಂದರೆ ಬೆಳಕಿಗಾಗಿ ಸಧ್ಯ ಇರುವ ಆಧಾರ ಅದೊಂದೆ. ಅದಿಲ್ಲವಾದರೆ ಮನೆಯಲ್ಲಿ ಇರಲಸಾಧ್ಯ. ನಡೆದು ನಡೆದು ದಣಿದ ನನಗೆ ಕುಡಿಯಲು ಒಂದು ಲೋಟ ನೀರು ಸಹ ಸಿಗುತ್ತಿಲ್ಲವೆಂದರೆ ಪ್ರಕೃತಿ ಒಮ್ಮೆಲೆ ನಮ್ಮ ಮೇಲೆ ಎಷ್ಟೊಂದು ಮುನಿದುಬಿಟ್ಟಳು ಎಂದೆನಿಸಿತು. ದಾರೀಲಿ ಜನ ಮಾತಾಡುತ್ತಿರುವುದು ಕಿವಿಗೆ ಬಿತ್ತು. ವಿದ್ಯುತ್ ಉತ್ಪಾದಿಸಲು ನೀರಿಲ್ಲವಂತೆ, ಪರಮಾಣು ಶಕ್ತಿ ಉತ್ಪಾದಿಸಲು ತಂತ್ರಜ್ಞಾನದ ಕೊರತೆಯಿದೆಯಂತೆ, ಕಲ್ಲಿದ್ದಲು

* ಗ್ರಾ.ಅ.ಪಂ.ರಾಜ್ ಇಲಾಖೆ, ಬೆಂಗಳೂರು

ಕೂಡ ಸಿಗುತ್ತಿಲ್ಲವಂತೆ, ಸಧ್ಯ ಕರೆಂಟ್ ಬರುವ ಸಾಧ್ಯತೆಗಳು ಇಲ್ಲವಂತೆ. ಇನ್ನೇನು ಈಗ ಕರೆಂಟ್ ಬರಬಹುದು ಎಂದು ತಿಳಿದಿದ್ದ ನನಗೆ ಅಂತೆ ಕಂತೆಗಳ ಮಹಾಪೂರ ಕೇಳಿ ಬೇಸ್ತು ಬಿದ್ದೆನು.

ವಿದ್ಯುತ್ ಕೈ ಕೊಟ್ಟಾಗ ಆಸ್ಪತ್ರೆಗಳು ಹೇಗೆ ಕಾರ್ಯನಿರ್ವಹಿಸುತ್ತವೆ ? ಜನರೇಟರ್‌ಗಳ ಅಥವಾ ಪರ್ಯಾಯ ಸಾಧನಗಳ ಮೂಲಕ ಎಂಬುದು ತಟ್ಟನೇ ನೆನಪಿಗೆ ಬರುವ ಉತ್ತರ. ಸರಿ ! ಪರ್ಯಾಯ ಸಾಧನಗಳು ತಮ್ಮ ಕಾರ್ಯಕ್ಷಮತೆಯನ್ನು ನಿಲ್ಲಿಸಿಬಿಟ್ಟರೆ ಏನು ಗತಿ ಎಂದು ಕೇಳಿದರೆ ಪರಿಹಾರಕ್ಕೆ ನಮ್ಮ ಬಳಿ ತಟ್ಟನೇ ಹೇಳುವ ಉತ್ತರವಿಲ್ಲ. ಅಲ್ಯಾರೋ ಗೊಣಗಿದರು, ಸೌರ ಶಕ್ತಿ ಇದೆಯಲ್ಲಾ ಎಂದು. ಬೃಹತ್ ಆಸ್ಪತ್ರೆಗೆ ಸೌರಶಕ್ತಿ ಎಷ್ಟರ ಮಟ್ಟಿಗೆ ಪರಿಹಾರ ಒದಗಿಸೀತು. ಆಸ್ಪತ್ರೆಗೆ ಸೇರಿದ ರೋಗಿಗಳಿಗೆ ಇಲ್ಲಿಯೇ ನರಕ ದರ್ಶನವಾಗಿದೆ. ಅವರ ಸ್ಥಿತಿ ಯಾರಿಗೂ ಬೇಡ.

ಊರಿಂದ ಬರಬೇಕಾಗಿದ್ದವರು ಮಾರ್ಗ ಮಧ್ಯೆದಲ್ಲಿಯೇ ನಿಂತುಬಿಟ್ಟಿದ್ದಾರೆ. ಅತ್ತಲೂ ಹೋಗುವಂತಿಲ್ಲ, ಇತ್ತಲೂ ಬರುವಂತಿಲ್ಲ. ನೂರಾರು ಕಿಲೋ ಮೀಟರುಗಳ ಅಂತರದಲ್ಲಿರುವ ಅವರನ್ನು ಕರೆತರುವುದಾದರು ಹೇಗೆ ? ನಿಮ್ಮಲ್ಲೇನಾದರು ಉಪಾಯ ಇದ್ದರೆ ದಯವಿಟ್ಟು ತಿಳಿಸುವಿರಾ.

ಬೋರ್‌ವೆಲ್‌ಗಳಿಂದ ನೀರೆತ್ತಲು ಕರೆಂಟ್ ಇಲ್ಲವೆಂದು ಈಗಾಗಲೇ ಹೇಳಿಯಾಗಿದೆ. ಹಾಗಾದರೆ ನೀರು ತರಲು ಎಲ್ಲಿಗೆ ಹೋಗುವುದು. ಕೆರೆ ಕಟ್ಟೆಗಳೆಲ್ಲವೂ  ಧನ ದಾಹಿಗಳ ತುತ್ತಾಗಿ ಮಾಯವಾಗಿವೆ. ಎಲ್ಲಿ ನೋಡಿದರೂ ಬರೀ ಮನೆಗಳೇ. ಬಾಯಾರಿಕೆ........ ಬಾಯಾರಿಕೆ............ ಜೀವ ಹೋಗುವಂತ ಸ್ಥಿತಿ. ಒಂಟೆಯಾಗಿದ್ದರೆ ಚೆನ್ನಾಗಿತ್ತೇನೋ ಅನ್ನಿಸಿತು. ಪಕ್ಷಿಯಾಗಿದ್ದರೆ ಹಾರಿಕೊಂಡು ಹೋಗಿ ನೀರು ಕುಡಿದು ಜೀವ ಉಳಿಸಿಕೊಳ್ಳ ಬಹುದಿತ್ತು. ನೀನಾರಿಗಾದೆಯೋ ಎಲೆ ಮಾನವ ? ನೀನು ಪ್ರಕೃತಿಯಿಂದ ಕೊಳ್ಳೆ ಹೊಡೆದ ಹಣ ನಿನಗೆ ಒಂದು ಲೋಟ ನೀರು ಸಹ ತಂದುಕೊಡದಾಯಿತಲ್ಲೋ ಹುಚ್ಚಪ್ಪ. ನಾನಿನ್ನು ಸತ್ತೇ ಹೋಗುತ್ತೀನಿ ಕಾಪಾಡ್ರೋಪ್ಪೋ ಕಾಪಾಡಿ ನನಗೆ ಒಂದು ಲೋಟ ನೀರು ಕೊಡಿ...... ಪಾಪ ಅವರಿಗಾದರೂ ಎಲ್ಲಿ ಬರಬೇಕು ಒಂದು ಹನಿ ನೀರು. ಅವರದೂ ನನ್ನದೇ ದೈನೇಸಿ ಸ್ಥಿತಿ. ಹಾಗಾದರೆ ನಮ್ಮನ್ನು ಕಾಪಾಡುವವರು ಯಾರು ? ಯಾರೂ ಇಲ್ಲ, ಏಕೆಂದರೆ ಪ್ರಕೃತಿಯ ಮೇಲೆ ನಾವು ಮಾಡಿದ ದೌರ್ಜನ್ಯಕ್ಕೆ ನಾವು ಫಲ ಉಣ್ಣಲೇಬೇಕಲ್ಲವೇ.

ಪೆಟ್ರೋಲಿಯಂ ಉತ್ಪನ್ನಗಳು ಮತ್ತು ವಿದ್ಯುತ್ ಬರಿದಾಗಿ ಈಗ ಹಲವು ದಿನಗಳು ಕಳೆದಿವೆ. ಜಗತ್ತೇ ಸ್ತಬ್ಧ. ಏನಿದು ವಿಚಿತ್ರ. ಜೀವ ನಾಡಿಯೇ ನಿಂತುಹೋಗಿದೆ. ಯಾರನ್ನು ಯಾರು ಕಾಪಾಡಬೇಕು. ಮಾನವರು ಹಸಿವಿನಿಂದ, ದಾಹದಿಂದ ಕಂಗೆಟ್ಟು ಓಡುತ್ತಿದ್ದಾರೆ. ಮಕ್ಕಳು ಮತ್ತು ಹಿರಿಯರ ಸ್ಥಿತಿಯಂತು ವರ್ಣಿಸಲಸಾಧ್ಯ. ಜನರು ಕಾಡು ಜನರಾಗಿ ಮಾರ್ಪಾಡಾಗುತ್ತಿದ್ದಾರೆ. ಆಹಾರಕ್ಕೆ ಕಾಡುಗಳನ್ನು ಆಶ್ರಯಿಸುತ್ತಿದ್ದಾರೆ. ತಮ್ಮೆಲ್ಲ ನೌಕರಿಗಳನ್ನು ಮರೆತೆಬಿಟ್ಟಿದ್ದಾರೆ. ಯಾವ ಬಂಗಲೆ ಇಟ್ಟುಕೊಂಡು ಏನು ಮಾಡಬೇಕು. ಮಾರುಕಟ್ಟೆಗಳಲ್ಲಿನ ದವಸ ಧಾನ್ಯಗಳು ಎಂದೋ ಖಾಲಿಯಾಗಿಬಿಟ್ಟವು. ಎಲ್ಲೋ ಇರುವ ದವಸಗಳನ್ನು ಸಾಗಿಸಲು ಸಾಧ್ಯವಾಗುತ್ತಿಲ್ಲ. ನಗರಗಳು ಸ್ಮಶಾನ ಮೌನ ತಾಳಿವೆ. ಮುದುಡಿದ ನಿಸ್ತೇಜ ಜೀವಿಗಳು ಮನೆಯ ಮೂಲೆ ಹಿಡಿದಿವೆ.

ಪೆಟ್ರೋಲಿಯಂ ಉತ್ಪನ್ನಗಳು ಮತ್ತು ವಿದ್ಯುತ್ ಹೊರತುಪಡಿಸಿ ನಾಡಿನಲ್ಲಿ ಎಲ್ಲವೂ ಇದೆ. ಆದರೆ ಯವುದೂ ಕೆಲಸಕ್ಕೆ ಬಾರದಾಗಿದೆ. ಇಷ್ಟೊಂದು ಮಹತ್ವದ ಪೆಟ್ರೋಲಿಯಂ ಉತ್ಪನ್ನಗಳು ಮತ್ತು ವಿದ್ಯುತ್‌ನ್ನು ನಾವುಗಳು ಏಕೆ ಪ್ರಜ್ಞೆಯಿಂದ ಬಳಸುತ್ತಿಲ್ಲ ಅಥವಾ ಈ ಶಕ್ತಿ ಮೂಲಗಳಿಗೆ ಪರ್ಯಾಯಗಳನ್ನು ಹುಡುಕಿಕೊಂಡಿಲ್ಲ. ಇಂದು ಪ್ರತಿಯೊಬ್ಬ ಮನುಷ್ಯ ಪೆಟ್ರೋಲಿಯಂ ಉತ್ಪನ್ನಗಳು ಮತ್ತು ವಿದ್ಯುತ್ ಮೇಲೆ ಎಷ್ಟೊಂದು ಅವಲಂಬನೆಯಾಗಿದ್ದಾನೆಂದರೆ ಮೇಲಿನ ಕೆಲವು ದೃಷ್ಟಾಂತಗಳಿಂದಲೇ ತಿಳಿದುಕೊಳ್ಳಬಹುದು. ಯಾರಿಗೆ ಗೊತ್ತು ಮುಂದೊಂದು ದಿನ ಇಂತಹ ವಿಚಿತ್ರ ಪ್ರಕ್ಷುಬ್ಧ ಸ್ಥಿತಿ ಬರುವುದಿಲ್ಲವೆಂದು.

ನಮ್ಮಲ್ಲಿರುವ ಕೋಟಿ ಕೋಟಿ ಹಣ ಅಥವಾ ಉನ್ನತ ತಂತ್ರಜ್ಞಾನ ಕಷ್ಟ ಕಾಲದಲ್ಲಿ ಒಂದು ಲೋಟ ಕುಡಿಯುವ ನೀರನ್ನು ಒದಗಿಸಲು ಅಸಮರ್ಥವಾದರೆ ಅದರ ಮೇಲೆ ಅಷ್ಟೊಂದು ಮೋಹ ಏಕೆ. ಹಣಕ್ಕಾಗಿ ದಿನನಿತ್ಯವು ಪಕೃತಿ ಮೇಲಿನ ಕ್ರೌರ್ಯ ಹೆಚ್ಚಾಗುತ್ತಿದೆ. ಮಾನವ ಎಚ್ಚರ ಮುಂದೆ ಕಾದಿದೆ ದುಸ್ತರ. ಶಕ್ತಿ ಮೂಲಗಳನ್ನು ಮಿತವ್ಯಯಕಾರಿಯಾಗಿ ಬಳಸಬೇಕಾದ ಅಗತ್ಯವಿದೆ. ಪರ್ಯಾಯ ಶಕ್ತಿ ಮೂಲಗಳನ್ನು ಸಹ ಸಂಶೋಧನೆ ಮಾಡಬೇಕಿದೆ. ಪ್ರಕೃತಿಯಲ್ಲಿ ಸಮತೋಲನ ಕಾಪಾಡುವ ಗುರುತರ ಜವಾಬ್ದಾರಿ ನಮ್ಮ ಮೇಲಿದೆ. ಇವೆಲ್ಲವುಗಳನ್ನು ಅರಿತು ನಾವು ಬದುಕಬೇಕಿದೆ. ಇಲ್ಲದೇ ಹೋದರೆ ನಮ್ಮ ಬದುಕು ಬರಿದಾಗುವುದು. ನಮ್ಮ ಮುಂದಿನ ಪೀಳಿಗೆಗೆ ನಾವು ಉತ್ತಮವಾದುದನ್ನು ನೀಡುವ ಪಣ ತೊಡೋಣ. ಬದುಕು ಬರಿದಾಗದಿರಲಿ ಎಂದು ಹಾರೈಸೋಣ.

❑

# ನನ್ನಿಯ ನಾಯಿಗೊಂದು ವೀರಗಲ್ಲು



ಬಿ.ಎಂ. ಚಂದ್ರಶೇಖರಯ್ಯ*
ಮೊಬೈಲ್ : 080-25710162

ಒಡೆಯನ ಪ್ರಾಣವುಳಿಸುವ ಏಕಮಾತ್ರ ಕಾರಣಕ್ಕಾಗಿ ತಾನು ಹೋರಾಡಿ ಪ್ರಾಣಬಿಟ್ಟ ಸ್ವಾಮಿನಿಷ್ಠೆ ಮೆರೆದ ಕಾಳಿಯ ವೃತ್ತಾಂತ.

ಪರಾಕ್ರಮವೆಂಬುದೊಂದು ಗುಣ! ಗುಣಕ್ಕೆ ಮತ್ಸರವುಂಟೇ? ಗುಣವನ್ನು ಗೌರವಿಸುವವನಿಗೆ ಇವನು ಮನುಷ್ಯ, ಇದು ಮೃಗ ಎಂಬ ಭೇದಭಾವವಿರುವುದಿಲ್ಲ! ಯುದ್ಧದಲ್ಲಿ ತನ್ನ ಪರಾಕ್ರಮವನ್ನು ತೋರಿಸಿ ಇಲ್ಲವೇ ಗ್ರಾಮದ, ಮಹಿಳೆಯರ ಮಾನ ಕಾಪಾಡಲು ಹೋರಾಡಿ ದುರ್ದೈವವಶಾತ್ ಮಡಿದ ವೀರರ ಗೌರವಾರ್ಥ ವೀರಗಲ್ಲುಗಳನ್ನು ನಿಲ್ಲಿಸುವುದು ವಾಡಿಕೆಯಾಗಿತ್ತು. ಆದರೆ, ಒಡೆಯನ ಪ್ರಾಣವನ್ನು ಕಾಪಾಡಲು, ತನ್ನ ಪ್ರಾಣಕೊಟ್ಟ ನಾಯಿಯ ಸ್ಮರಣೆಗಾಗಿ ವೀರಗಲ್ಲುಗಳನ್ನು ನಿಲ್ಲಿಸಿದ ಉದಾತ್ತ ನಡೆ, ಕನ್ನಡಿಗರ ಸತ್ಪರಂಪರೆ! ಅಂತಹ ಎರಡು ಸಂದರ್ಭಗಳಲ್ಲಿ ನೆಡಿಸಿದ ವೀರಗಲ್ಲು. ಶಾಸನಗಳ ಅಪರೂಪದ ಕತೆ ಇಲ್ಲಿದೆ!

ಅಂತಹ ವೈಶಿಷ್ಟ ಶಾಸನವೊಂದು ಮಂಡ್ಯ ಜಿಲ್ಲೆಯ ಮದ್ದೂರು ಬಳಿಯ ಅತಕೂರಿನಲ್ಲಿದೆ. ಕ್ರಿ.ಶ. 943ರಲ್ಲಿ ರಾಷ್ಟ್ರಕೂಟ ಚಕ್ರೇಶ್ವರ ಮುಮ್ಮಡಿಕೃಷ್ಣನು (939–967) ಚೋಳ ದೇಶದ ಮೇಲೇರಿ ಹೋಗಿ ಕಾಂಚೀಪುರ ಮತ್ತು ಚೋಳರಾಜಧಾನಿ ತಂಜಾವೂರುಗಳನ್ನು ಆಕ್ರಮಿಸಿ ಸೂರೆಗೈದನು. ಚೋಳದೊರೆ ಪರಾಂತಕನು ತನ್ನ ಶತೃವನ್ನು ತಡೆಯುವ ಪ್ರಯತ್ನದಲ್ಲಿ ಶೋಚನೀಯವಾಗಿ ಪರಾಭವಗೊಂಡನು. ಈ ಬವರದಲ್ಲಿ ಕೃಷ್ಣನಿಗೆ ನೆರವಾದವನು ಗಂಗದೊರೆ ಇಮ್ಮಡಿ ಬೂತುಗನು (936–960). ಕೃಷ್ಣನ ಸೋದರಿ ರೇವಕನಿಮ್ಮಡಿಯನ್ನು ಮದುವೆಯಾಗಿದ್ದು, ತನ್ನ ಭಾವನಿಗಾಗಿ ಯುದ್ಧಮಾಡಿ, ತಮಿಳ್ನಾಡನ್ನು ಗೆದ್ದುಕೊಟ್ಟನು. ಬೂತುಗನು ಮಹಾನ್‌ಯೋಧನಾಗಿದ್ದುದಲ್ಲದೆ, ಕಲೆ, ಸಾಹಿತ್ಯಗಳ ಪೋಷಕನೂ ಆಗಿದ್ದನು!

ಕ್ರಿ.ಶ. 949ರಲ್ಲಿ ಮತ್ತೆ ರಾಷ್ಟ್ರಕೂಟ ಮತ್ತು ಚೋಳ ಸೈನ್ಯಗಳಿಗೆ ಕಾಂಚೀಪುರದ ಬಳಿಯ ತಕ್ಕೋಳಂನಲ್ಲಿ ನಡೆದ ಭೀಕರ ಸಮರದಲ್ಲಿ ಮತ್ತೆ ಪರಾರ್ತನು ದಯನೀಯವಾಗಿ ಸೋತುದಲ್ಲದೆ, ಅವನ ಮಗ ಯುವರಾಜ ರಾಜಾದಿತ್ಯನು ಇಮ್ಮಡಿ ಬೂತುಗನಿಂದ ಘೋರ ಹತ್ಯೆಗೀಡಾದನು. ಈ ಸೋಲು ಚೋಳರನ್ನು ಮತ್ತೆ ಮುಂದಿನ ನಾಲ್ಕು ದಶಕಗಳ ಕಾಲ ತಲೆಯೆತ್ತದಂತೆ ಮಾಡಿತು! ರಾಷ್ಟ್ರಕೂಟ ಸೈನ್ಯವು ಇಡೀ ತಮಿಳ್ನಾಡನ್ನು ವಶಪಡಿಸಿಕೊಂಡು, ರಾಮೇಶ್ವರದಲ್ಲಿ ಕೃಷ್ಣನ ಜಯಸ್ತಂಭವನ್ನು ನಿಲ್ಲಿಸಿತು.

ಹಾಗೆಯೇ, ಆಕಾಲ ವರ್ಷನೆಂದು ಬಿರುದಾಂಕಿತನಾದ ಮುಮ್ಮಡಿ ಕೃಷ್ಣನು ಉತ್ತರ ಭಾರತವನ್ನೆಲ್ಲಾ ತನ್ನ ಪಾದಾಕ್ರಾಂತ ಮಾಡಿಕೊಂಡು, ಜಬ್ಬಲ್‌ಪುರದ ಬಳಿಯ

* ನಿವೃತ್ತ ಉಪ ನಿರ್ದೇಶಕರು, 'ಹೇಮಕುಂಟ', 280, 3ನೇ 'ಎ' ಮೈನ್, 8ನೇ ಬ್ಲಾಕ್, ಕೋರಮಂಗಲ, ಬೆಂಗಳೂರು – 560 095.

ಜೂರಾದಲ್ಲಿ ಕನ್ನಡ ಶಾಸನವೊಂದನ್ನು ಹಾಕಿಸಿದ್ದು, ಅದರಲ್ಲಿ ಕೃಷ್ಣನ ಸಾಹಸ ಕೃತ್ಯಗಳನ್ನು ಕಾವ್ಯಮಯವಾಗಿ ಬಿತ್ತರಿಸಿರುವುದು ಮನಸೆಳೆಯುವಂತದ್ದಾಗಿದೆ !

ಚಕ್ರವರ್ತಿ ಕೃಷ್ಣನ ಈ ಸಾಹಸ ಕಾರ್ಯಗಳಿಗೆ ನೆರವಾದವನು ಅವನ ಬಲಗೈಬಂಟ ಇಮ್ಮಡಿ ಬೂತುಗನೆಂಬುವುದನ್ನು ಮರೆಯುವಂತಿಲ್ಲ. ಅದರಿಂದ ಸುಪ್ರೀತನಾದ ಕೃಷ್ಣನು, ಬೂತುಗನಿಗೆ ಬನವಾಸಿ, ಬೆಳವೊಲ, ಕಿಸುಕಾಡು ಮೊದಲಾದ ಪ್ರದೇಶಗಳ ಆಡಳಿತವನ್ನು ಬಿಟ್ಟುಕೊಟ್ಟು ಗೌರವಿಸಿದನು. ಅದರಿಂದ ಸಂತುಷ್ಟನಾದ ಬೂತುಗನು ತನ್ನ ಬಲಗೈ ಬಂಟನಾದ ಗಂಗ ದಂಡನಾಯಕ ಮಣಲೇರನ ಸಾಹಸ ಕೃತ್ಯಗಳಿಗೆ ಮೆಚ್ಚಿ ಆತನನ್ನು ಗೌರವಿಸಲು ಮುಂದಾದನು. ಆದರೆ, ಮಣಲೇರನುಧನ, ಧಾನ್ಯ, ಭೂಮಿಗಳಿಗೆ ಆಶೆಪಡದೆ, ಚಕ್ರವರ್ತಿ ಕೃಷ್ಣನ ಬೇಟೆ ನಾಯಿಗಳಲ್ಲಿ ಆತನಿಗೆ ಅತ್ಯಂತ ಪ್ರೀತಿಯುತವಾದ 'ಕಾಳಿ'ಯನ್ನು ಬೇಡಿದನು. ಕೃಷ್ಣನು ಅದಕ್ಕೆ ಅನ್ಯಥಾ ಭಾವಿಸದೆ, ಮಣಲೇರನಿಗೆ ಕಾಳಿಯನ್ನು ನೀಡಿ ಗೌರವಿಸಿದನು. ಹಾಗೆಯೇ, ಬೂತುಗನು ಕೂಡಾ ಮಣಲೇರನಿಗೆ ಬೆಳ್ತೊಲದ ಎಂದರೆ ಈಗಿನ ಮಂಡ್ಯ ಜಿಲ್ಲೆಯ 'ಅತಕೂರು ಪನ್ನೆರಡು' ಪ್ರದೇಶವನ್ನು ಬಿಟ್ಟುಕೊಟ್ಟು ಗೌರವಿಸಿದನು ! ಒಮ್ಮೆ ಅತಕೂರಿನ ಸುತ್ತಮುತ್ತಲಿನ ಪ್ರದೇಶದಲ್ಲಿ ಕಾಡು ಹಂದಿಗಳ ಉಪಟಳ ಹೆಚ್ಚಾಗಿ, ಬೆಳೆಗಳ ನಾಶಕ್ಕೆ ಮಣಲೇರನು ತನ್ನ ಪ್ರೀತಿಯ ನಾಯಿ ಕಾಳಿಯೊಡನೆ ಹಂದಿಗಳ ಬೇಟೆಗೆ ಹೊರಟನು. ಕಾಡಿನಲ್ಲಿ ಹಂದಿಗಳನ್ನರಸುತ್ತಾ ಹೋಗುತ್ತಿರುವಾಗ ಭಾರಿ ಗಾತ್ರದ ಕಾಡು ಹಂದಿಯೊಂದು ಧುತ್ತೆಂದು ಮಣಲೇರ ಮತ್ತು ಕಾಳಿಯ ಮುಂದೆ ದಾರಿಗಡ್ಡವಾಗಿ ನಿಂತಿತು ! ಆಗ ಕಾಳಿ ಮತ್ತು ಹಂದಿಯ ನಡುವೆ ನಡೆದ ಬೀಕರ ಹೋರಾಟದಲ್ಲಿ ಕಾಳಿಯು ಹಂದಿಯನ್ನು ಕೊಂದು ಹಾಕಿತಾದರೂ, ತೀವ್ರವಾಗಿ ಗಾಯಗೊಂಡು ತಾನೂ ಕೊನೆಯುಸಿರೆಳೆಯಿತು ! ಇದರಿಂದ, ಮಣಲೇರನಿಗೆ ಸಹಿಸಲಾರದ ದುಃಖವುಂಟಾಯಿತು. ಆದರೂ, ತನ್ನ ಒಡೆಯನ ಪ್ರಾಣವುಳಿಸುವ ಏಕಮಾತ್ರ ಕಾರಣಕ್ಕಾಗಿ ತಾನು ಹೋರಾಡಿ ಪ್ರಾಣಬಿಟ್ಟ ಸ್ವಾಮಿನಿಷ್ಠೆ ಮೆರೆದ ಕಾಳಿಯ ಮೇಲಿನ ಗೌರವ, ಪ್ರೀತಿಗಳಿಂದ ಮಣಲೇರನು ತನ್ನ ಆಡಳಿತ ಪ್ರದೇಶವಾದ ಅತಕೂರಿನ ಪ್ರಸಿದ್ಧ 'ಚಲ್ಲಲಿಂಗೇಶ್ವ ಸ್ವಾಮಿ' ದೇವಾಲಯದ ಬಳಿ ನಾಯಿ ಸಮಾಧಿಯನ್ನು ಸಕಲ ಗೌರವಪೂರ್ವಕವಾಗಿ ಮಾಡಿಸಿದನು. ಹಾಗೆಯೇ, ತನ್ನ ಪ್ರೀತಿಯ ಕಾಳಿಗಾಗಿ ವೀರಗಲ್ಲನ್ನು ನೆಡಿಸಿ, ಕ್ರಿ.ಶ. 950 ರಲ್ಲಿ ಶಾಸನವನ್ನು ಹಾಕಿಸಿದನು. ಅಷ್ಟೇ ಅಲ್ಲದೆ ವೀರಗಲ್ಲನ್ನು ಪ್ರತಿನಿತ್ಯ ಪೂಜಿಸಲು ಒಬ್ಬ ಗೊರವನನ್ನು ನೇಮಿಸಿ, ಅವನಿಗೆ ಭೂಮಿಯನ್ನು ಕೂಡ ದಾನ ಮಾಡಿದನು. ಶಾಸನದಲ್ಲಿ 'ಕಾಳಿಯನ್ನು ಪೂಜಿಸದೆ ಲೂಟಿ ಮಾಡಿದರೆ ನಾಯಿಕೊಂದ ಶಾಪ ತಗಲುವುದು' ಎಂಬ ಶಾಪಾಶಯವೂ ಕೂಡ ಇದೆ. ತನ್ನ ನಾಯಿಯ ಶೌರ್ಯದ ಬಗ್ಗೆ ಮಣಲೇರನಿಗೆ ಇದ್ದ ಗೌರವವು ಅತಿಶಯವಾದುದು ! ಎಂತಹ ಉದಾತ್ತ ನಡೆ ಈ ಶಾಸನವು ಈಗ ಬೆಂಗಳೂರಿನ ಸರ್ಕಾರಿ ವಸ್ತು ಸಂಗ್ರಹಾಲಯದಲ್ಲಿದೆ.

ಶಾಸನದಲ್ಲಿ ಪಡಿಮೂಡಿಸಿದ ಹಂದಿಯ ಬೇಟೆಯಲ್ಲಿ, ಪರಸ್ಪರ ಹೊಡೆತಗಳನ್ನು ತಪ್ಪಿಸಿಕೊಳ್ಳಲು ಹೆಣಗುತ್ತಾ, ಕೋಪದಿಂದ ಕೆರಳಿ, ಬಾಲವೆತ್ತಿದ ಹಂದಿ, ನಾಯಿಗಳು, ನೋಡುಗರು ನಿಬ್ಬೆರಗಾಗುವಂತೆ ಉಗ್ರವಾಗಿ ಕಾದಾಡುತ್ತಿರುವ ಉಬ್ಬ ಚಿತ್ರವೂ ಸಹಾ ಜೀವ ಕಳೆಯಿಂದ ಕೂಡಿ ಹೃನ್ಮನಗಳನ್ನಾಕರ್ಷಿಸುತ್ತದೆ !

ಇಂತಹದೇ ಉದಾತ್ತ ನಡೆಯ ಮತ್ತೊಂದು ವೀರಗಲ್ಲನ್ನು ನಾವು ಮಡಕಶಿರ ತಾಲ್ಲೂಕಿನಲ್ಲಿ ಕಾಣಬಹುದು. ಅದರಲ್ಲಿ ನೊಳಂಬಾಧಿರಾಜನ ಕಾಲದಲ್ಲಿ ನಡೆದ ಸಂಗತಿಯ ಪ್ರಸ್ತಾಪವಿದೆ. 'ಪೂಣಿಗ'ನೆಂಬ ಬೇಟೆ ನಾಯಿಯು ಕಾಡು ಹಂದಿಯೊಡನೆ ಹೋರಾಡಿ, ಅದನ್ನು ಕೊಂದು, ಗಾಯಗೊಂಡು ತಾನೂ ಪ್ರಾಣ ಬಿಟ್ಟಿತು ! ಪೂಣಿಗನೊಡೆಯ ತನ್ನ ನನ್ನಿಯ ನಾಯಿಗಾಗಿ ಒಂದು ವೀರಗಲ್ಲನ್ನು ನೆಡಿಸಿದನು ! ❑

# “ಮಲೇರಿಯಾ ಜ್ವರ”
## (ಹುಟ್ಟು, ಬದುಕು ಮತ್ತು ಅಳಿವು)



ವಾಮನರಾವ್ *
ಮೊಬೈಲ್ : 9035756330

ಸೋಂಕನ್ನು ಹೊಂದಿರುವ ಕೆಲವು ಜಾತಿಯ ಹೆಣ್ಣು ಅನಾಫೀಲೀಸ್ ಸೊಳ್ಳೆಗಳ ಕಡಿತದಿಂದ ರೋಗ ಒಬ್ಬರಿಂದೊಬ್ಬರಿಗೆ ಹರಡುತ್ತವೆ.

ಮಲೇರಿಯಾ ಎಂಬ ಪದ ಆಂಗ್ಲ ಭಾಷೆಗೆ ಸೇರಿದ್ದು, ಎಂದರೆ ಮಲಿನ, ಎಂದರೆ ಗಾಳಿ ಎಂಬರ್ಥ ಕೊಡುತ್ತದೆ. ಕನ್ನಡದಲ್ಲಿ ಚಳಿ ಜ್ವರ ಎಂಬುದು ವಾಡಿಕೆ. ವ್ಯಕ್ತಿಯಲ್ಲಿ ಚಳಿ ಮೊದಲು ಕಾಣಿಸಿಕೊಂಡು ಜ್ವರ ಆರಂಭವಾಗುವುದರಿಂದ ಚಳಿ ಜ್ವರವೆಂತಲೂ ಕರೆಯುವ ವಾಡಿಕೆ ಇದೆ. ಈ ರೋಗವನ್ನು ಪ್ಲಾಸ್ಮೋಡಿಯಂ ಎಂಬ ರೋಗಕಾರಕ ಮೂಲ ಜೀವಿಯನ್ನು ಹೊಂದಿರುವ ಅನಾಫಿಲೀಸ್ ಜಾತಿ ಹೆಣ್ಣು ಸೊಳ್ಳೆಗಳು ಒಬ್ಬರಿಂದೊಬ್ಬರಿಗೆ ಹರಡುತ್ತವೆ. ಈ ರೋಗವು ಉಷ್ಣ ಮತ್ತು ಸಮಶೀತೋಷ್ಣ ವಲಯಗಳಲ್ಲಿರುವ ದೇಶಗಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ಆಗಾಗ್ಗೆ ಪಿಡುಗು ರೂಪದಲ್ಲಿ ಬರುವ ಈ ರೋಗ, ಕೆಲವಡೆಗಳಲ್ಲಿ ವರ್ಷದುದ್ದಕ್ಕೂ ನೆಲಸಿರಬಹುದು. ಜನಸಾಮಾನ್ಯರಲ್ಲಿ ಈ ರೋಗ ಕಾಣಿಸಿಕೊಂಡು ಸತ್ವಹೀನರನ್ನಾಗಿ ಮಾಡುವುದೇ ವಿನಃ ರೋಗವೇ ಕಾರಣವಾಗಿ ಸಾವು ಕಡಿಮೆ. ವರ್ಷದ ಕೆಲವು ತಿಂಗಳಲ್ಲಿ ರೋಗದಿಂದ ನರಳುವವರ ಸಂಖ್ಯೆ ಪರಮಾವಧಿ ಮುಟ್ಟಿ, ಉಳಿದ ವೇಳೆ ಅಷ್ಟಿರುವುದಿಲ್ಲ. ಗಂಡು, ಹೆಣ್ಣು ಎಂಬ ತಾರತಮ್ಯವಿಲ್ಲದೆ ಹಾಗೂ ಎಲ್ಲ ವಯಸ್ಕರನ್ನೂ ಈ ರೋಗ ಬಾಧಿಸುತ್ತದೆ. ಚಳಿಯಿಂದ ಪ್ರಾರಂಭವಾಗಿ ಜ್ವರ ಕಾಡಿಸಿ ಮೈಯಿಂದ ಬೆವರು ಸುರಿಸಿ ಜ್ವರ ಕಡಿಮೆಯಾಗುವುದು. ಈ ರೋಗದ ಲಕ್ಷಣ, ಪ್ಲೀಹ ದೊಡ್ಡದಾಗುವುದು, ರಕ್ತ ದೌರ್ಬಲ್ಯ ಹಾಗೂ ನಿಶ್ಯಕ್ತಿ. ಈ ರೋಗದ ವೈಶಿಷ್ಟ್ಯ ಜ್ವರ ಪೂರ್ಣ ಬಿಟ್ಟು, 24 ರಿಂದ 72 ಗಂಟೆಗಳಲ್ಲಿ ಪುನಃ ಕಾಣಿಸಿಕೊಳ್ಳುತ್ತದೆ.

ರೋಗ ಪ್ರಾಪ್ತಿಯಾಗುವ ಬಗೆಯ ಕಡೆ ಗಮನ ಹರಿಸೋಣ; ಒಂದು ಸಸಿ ಮೊಳಕೆಯಾಗಬೇಕಾದರೆ ಬೀಜ, ಬಿತ್ತುವವ ಹಾಗೂ ಬಿತ್ತಲು ಫಲವತ್ತಾದ ಭೂಮಿ ಈ ಮೂರು ಅಂಶಗಳು ಅಗತ್ಯವೆಂಬುದು ಎಲ್ಲರಿಗೂ ತಿಳಿದಿರುವ ವಿಚಾರ. ಅಂತೆಯೇ ಮಲೇರಿಯಾ ರೋಗ ಹರಡಲು ರೋಗಕಾರಕ ಪರಾವಲಂಬಿ ಪ್ಲಾಸ್ಮೋಡಿಯಂ, ಅದನ್ನು ಒಬ್ಬರಿಂದೊಬ್ಬರಿಗೆ ಹರಡಲು ಹೆಣ್ಣು ಅನಾಫಿಲೀಸ್ ಸೊಳ್ಳೆಗಳು ಹಾಗೂ ರೋಗಕ್ಕೆ ಆಶ್ರಯ ಕೊಡಲು ಸಿದ್ಧವಿರುವ ರೋಗರಹಿತ ವ್ಯಕ್ತಿ. ಈ ಮೂರು ಅಂಶಗಳು ಅತ್ಯವಶ್ಯಕ. ಮಲೇರಿಯಾ ರೋಗಕಾರಕಗಳಲ್ಲಿ ನಾಲ್ಕು ವಿಧ. ಎಲ್ಲವೂ ಮೂಲ ಪ್ರಾಣಿ ವರ್ಗಕ್ಕೆ ಸೇರಿದ ಏಕಾಣು ಜೀವಿ ಪ್ಲಾಸ್ಮೋಡಿಯಂ ಗುಂಪಿಗೆ ಸೇರಿದವು. ವೈವಾಕ್ಸ್, ಮಲೇರಿಯಾ, ಫಾಲ್ಸಿಫಾರಂ, ವಾಲಿ ಎಂಬ ನಾಲ್ಕು

* ಶ್ರೀದತ್ತ ನಿಲಯ, 11ನೇ ಅಡ್ಡ ರಸ್ತೆ, ಜಯನಗರ ಪೂರ್ವ, ತುಮಕೂರು – 572 102.

ಜಾತಿಯ ಪರಾವಲಂಬಿ 24 ರಿಂದ 72 ಗಂಟೆಗಳಿ ಗೊಂದಾವರ್ತಿ ಚಳಿ ತಂದು ಉತ್ಪತ್ತಿ ಮಾಡುತ್ತವೆ. ಒವಾಲಿ ಸೋಂಕು ವಿರಳ. ಇವುಗಳು ಜೀವನ ಚರಿತ್ರೆಯ ವಿವಿಧ ರೂಪಾವಸ್ಥೆಗಳನ್ನು ಮನುಷ್ಯ ಹಾಗೂ ಸೊಳ್ಳೆಗಳಲ್ಲಿ ತಳೆಯುತ್ತವೆ.

ಸೋಂಕು ಹೊತ್ತ ಸೊಳ್ಳೆ, ವ್ಯಕ್ತಿಯನ್ನು ಕಚ್ಚಿ ಜೊಲ್ಲಿನೊಂದಿಗೆ ಅವನ ರಕ್ತಕ್ಕೆ ಸ್ಪೋರೋಜೋಯಿಟ್ ರೂಪದಲ್ಲಿರುವ ಪರಾವಲಂಬಿಗಳನ್ನು ಸೇರಿಸುತ್ತದೆ. ರಕ್ತವನ್ನು ಸೇರಿದ ಸ್ಪೋರೋಜೋಯಿಟ್‌ಗಳು ಅರ್ಧ ಗಂಟೆಯೊಳಗಾಗಿ ರಕ್ತದಿಂದ ಅವಶ್ಯವಾಗಿ ಯಕೃತ್ತಿನ ಜೀವಕೋಶಗಳನ್ನು ಸೇರುತ್ತವೆ. ಅಲ್ಲಿ ಅವುಗಳ ಜೀವನಚಕ್ರ ಮುಂದುವರೆದು ಎಂಟು ದಿನಗಳ ನಂತರ ಜೀವಕೋಶಗಳಿಂದ ಮಾರ್ಪಾಡು ಹೊಂದಿದ ಪರಾವಲಂಬಿಗಳು ಹೊರಬಿದ್ದು ರಕ್ತ ಪರಿಚಲನೆಗೆ ಸೇರಿಕೊಳ್ಳುತ್ತವೆ. ಹೀಗೆ ಸೇರಿಕೊಂಡ ಪರಾವಲಂಬಿಗಳಲ್ಲಿ ಒಂದೊಂದೂ ಕೆಂಪು ರಕ್ತಕಣಕ್ಕೆ ತಗುಲಿಕೊಂಡು, ಅವುಗಳೊಳಗೆ ನುಗ್ಗಿ ನೆಲಸಿ ಅಭಿವೃದ್ಧಿ ಹೊಂದುತ್ತವೆ. ಈ ಅವಸ್ಥೆಯ ಪರಾವಲಂಬಿಗಳಿಗೆ ಕ್ರಮವಾಗಿ ಟ್ರೋಪೋಜೋಯಿಟ್ ಮತ್ತು ಶೀಜಾಂಟ್‌ಗಳೆಂದು ಹೆಸರು. ಈ ಶಿಜಾಂಟ್‌ಗಳು ಕಣಗಳನ್ನು ಒಡೆದುಕೊಂಡು ರಕ್ತಕ್ಕೆ ಹೊರಬೀಳುವ ಪುಟ್ಟ ಪರಾವಲಂಬಿಗಳಿಗೆ ಮಿರೋಜೋಯಿಟ್ ಎಂದು ಹೆಸರು. ಪ್ರತಿಯೊಂದು ಮಿರೋಜೋಯಿಟ್ ಮತ್ತೆ ಒಂದು ಕೆಂಪು ರಕ್ತ ಕಣವನ್ನು ಅಂಟಿಕೊಂಡು ನುಗ್ಗಿ, ನೆಲಸಿ ಅಭಿವೃದ್ಧಿ ಹೊಂದಿ ತನ್ನ ಚಕ್ರವನ್ನು ಪುನಃ ಪುನಃ ಆರಂಭಿಸುತ್ತದೆ. ಶಿಜಾಂಟ್‌ಗಳು ಕಣಗಳನ್ನು ಒಡೆದುಕೊಂಡು ಹೊರಬಂದು ಮಿರೋಜೋಯಿಟ್‌ಗಳು ರಕ್ತಕ್ಕೆ ಸೇರದಾಗಲೆಲ್ಲಾ ರೋಗಿ ಅಸಾಧ್ಯ ಚಳಿಯನ್ನು ಅನುಭವಿಸುತ್ತಾನೆ, ರಕ್ತಕ್ಕೆ ಕೂಡಿಕೊಂಡು ಮಿರೋಜೋಯಿಟ್‌ಗಳ ಪೈಕಿ ಕೆಲವು ಗ್ರಾಮಿಟೋಸೈಟ್ ಎಂಬ ಹೆಣ್ಣು, ಗಂಡುಗಳ ರೂಪವನ್ನು ತಾಳಿ ರಕ್ತದೊಂದಿಗೆ ಸಂಚರಿಸುತ್ತಿರುತ್ತವೆ.

ಈ ಪರಾವಲಂಬಿಗಳು ತಮ್ಮ ಜೀವನ ಚಕ್ರವನ್ನು ಮುಂದುವರಿಸಲು ಬಾಹ್ಯ ಪರಿಸರದಲ್ಲಿರುವ ಅನಾಫೀಲೀಸ್ ಹೆಣ್ಣು ಸೊಳ್ಳೆಗಳು ಅತ್ಯವಶ್ಯಕ (ಗಂಡು ಸೊಳ್ಳೆಗಳು ಮನುಷ್ಯರನ್ನು ಕಚ್ಚುವುದಿಲ್ಲ, ಅವು ಹೂ, ಹಣ್ಣಿನ ರಸ ಇತ್ಯಾದಿ ಸವಿಯುವ ಶಾಖಾಹಾರಿಗಳು). ಹೆಣ್ಣು ಸೊಳ್ಳೆಗಳಲ್ಲೂ ಕೆಲವು ಜಾತಿಯವು ಮಾತ್ರ ಈ ಪರಾವಲಂಬಿಗಳನ್ನು ಒಬ್ಬರಿಂದೊಬ್ಬರಿಗೆ ಹರಡಲು ಸಾಮರ್ಥ್ಯ ಹೊಂದಿರುತ್ತವೆ. ಕರ್ನಾಟಕ ರಾಜ್ಯದಲ್ಲಿ ಮೂರು ಮಾದರಿಯ ಹೆಣ್ಣು ಅನಾಫೀಲಿಸ್ ಸೊಳ್ಳೆಗಳು ಈ ರೋಗ ಸಾಗಿಸಬಲ್ಲವೆಂದು ಇತ್ಯರ್ಥವಾಗಿದೆ. ಮೈದಾನ ಪ್ರದೇಶಗಳಲ್ಲಿ ಅನಾಫಿಲೀಸ್ ಜ್ಯೂಟಿಸಿಫೇಸಿಸ್, ಮಲೆನಾಡು ಪ್ರದೇಶಗಳಲ್ಲಿ ಅನಾಫಿಲಿಸ್ ಪ್ಲೂವಿಯಾಟಿಲಿಸ್ ಹಾಗೂ ನಗರ ಪ್ರದೇಶಗಳಲ್ಲಿ ಅನಾಫಿಲಿಸ್ ಸ್ಟೀಫೆನ್ಸ್ ಎಂಬ ಸೊಳ್ಳೆಗಳು ಇರುತ್ತವೆ. ಈ ಸೊಳ್ಳೆಗಳು ಎಂದಿನಂತೆ ತಮ್ಮ ಹಸಿವನ್ನು ಹೋಗಲಾಡಿಸಿ ಕೊಳ್ಳಲು ರಕ್ತದಾಹದಿಂದ ರೋಗಿಯನ್ನು ಕಚ್ಚಿ ರಕ್ತ ಹೀರಿದರೆ, ರಕ್ತದೊಂದಿಗೆ ಪರಾವಲಂಬಿಗಳು ಕೀಟದ ದೇಹವನ್ನು ಸೇರುತ್ತದೆ. ಗಂಡು, ಹೆಣ್ಣು ಗ್ಯಾಮಿಟೋಸೈಟ್‌ಗಳನ್ನು ಬಿಟ್ಟು ಉಳಿದ ಪರಾವಲಂಬಿಗಳು ಸೊಳ್ಳೆಯ ದೇಹದಲ್ಲಿ ನಾಶ ಹೊಂದುತ್ತವೆ. ಗ್ಯಾಮಿಟೋಸೈಟುಗಳು ಸಾಯುವುದಿಲ್ಲ. ಅವು ಜೀವನ ಚಕ್ರವನ್ನು ಮುಂದುವರಿಸುತ್ತವೆ. ಸೊಳ್ಳೆಯ ಜಠರದಲ್ಲಿ ಗಂಡು ಮತ್ತು ಹೆಣ್ಣು ಒಟ್ಟುಗೂಡುವುದು, ಒಂದುಗೂಡದ ಜೈಗೋಟ ಜಠರದ ಗೋಡೆ ತೂರಿ (ಊಕೈನೆಟ್) ಅದರ ಹೊರಪದರದಡಿಯಲ್ಲಿ ಊಸಿಸ್ಟ್ ಆಗಿ ಮಾರ್ಪಾಟಾಗಿ ಅಲ್ಲಿ ನೆಲಸಿ ಮುಂದಿನ ಹಂತಗಳಿಗೆ ಅಭಿವೃದ್ಧಿ ಹೊಂದುತ್ತದೆ. ಊಸಿಸ್ಟ್‌ಗಳೊಳಗೆ ಜೀವದ್ರವ ಮತ್ತು ನಾಭಿ ಅನೇಕ ಬಾರಿ ವಿಭಜನೆ ಹೊಂದಿ ಒಂದೊಂದು ನಾಭಿಯ ತುಂಡಿನ ಸುತ್ತ ಜೀವದ್ರವ ಶೇಖರವಾಗಿ ಸಹಸ್ರಾರು ಸ್ಪೋರೋಜೋಯಿಟ್ ಮರಿಗಳಾಗುತ್ತವೆ. ಊಸಿಸ್ಟ್‌ನಲ್ಲಿ ಇವು ತುಂಬಿ ಜಾಗವಿಲ್ಲದಂತಾಗಿ ಅದು ಒಡೆದು ಸ್ಪೋರೋಜೋಯಿಟ್‌ಗಳೆಲ್ಲ ಜಠರ ಹೊರಪೊರೆ ಒಡೆದುಕೊಂಡು ಅಲ್ಲಿಂದ ಕ್ರಮೇಣವಾಗಿ ಸೊಳ್ಳೆಯ ಜೊಲ್ಲು

ಗ್ರಂಥಿಗಳನ್ನು ಸೇರುತ್ತವೆ. ಸ್ಪೋರೋಜೋಯಿಟ್‌ಗಳನ್ನು ಹೊಂದಿದ ಸೊಳ್ಳೆ ಮತ್ತೊಬ್ಬ ವ್ಯಕ್ತಿಯ ರಕ್ತ ಹೀರಲು ಕಚ್ಚಿದಾಗ ಸ್ಪೋರೋಜೋಯಿಟ್‌ಗಳು ಆ ವ್ಯಕ್ತಿಯ ದೇಹವನ್ನು ಹೊಕ್ಕು ರೋಗವನ್ನು ಬರಿಸುತ್ತದೆ. ಗ್ರಾಮಿಟೋಸೈಟ್‌ಗಳು ಸೊಳ್ಳೆಯ ದೇಹದಲ್ಲಿ ಸ್ಪೋರೋಜೋಯಿಟ್‌ಗಳಾಗಲು ಸುಮಾರು ಹತ್ತರಿಂದ ಇಪ್ಪತ್ತು ದಿನಗಳು ಹಿಡಿಯುತ್ತವೆ. ಈ ಅವಧಿಗೆ "ಪರಿಪಾತಾವಧಿ" ಎಂದು ಕರೆಯುತ್ತಾರೆ.

**ಒಬ್ಬರಿಂದೊಬ್ಬರಿಗೆ ಸೋಂಕು ತಗಲುವ ಕಾಲಾವಧಿ:** ರಕ್ತದಲ್ಲಿ ಗಂಡು, ಹೆಣ್ಣು ಎರಡು ವಿಧಗಳ ಸ್ವಾವಲಂಬಿಗಳು ಸಾಕಷ್ಟು ಪ್ರಮಾಣದಲ್ಲಿರುವವರೆಗೆ ರೋಗ ಹರಡಲು ಅವಕಾಶವಿದೆ. ರೋಗ ಮರುಕಳಿಸುವುದು ಸಾಮಾನ್ಯ. ಆದ್ದರಿಂದ ಈ ಅವಧಿಯನ್ನು ಇಂತಿಷ್ಟೇ ಎಂದು ನಿರ್ದಿಷ್ಟವಾಗಿ ಹೇಳುವುದು ಸಾಧ್ಯವಾಗಲಾರದು.

**ರೋಗ ಹರಡುವ ವಿಧಾನ:** ಸೋಂಕನ್ನು ಹೊಂದಿರುವ ಕೆಲವು ಜಾತಿಯ ಹೆಣ್ಣು ಅನಾಫಿಲೀಸ್ ಸೊಳ್ಳೆಗಳ ಕಡಿತದಿಂದ ರೋಗ ಒಬ್ಬರಿಂದೊಬ್ಬರಿಗೆ ಹರಡುತ್ತವೆ ಎಂದು ಆಗಲೇ ತಿಳಿದೆವು, ಒಟ್ಟಿನಲ್ಲಿ ಹೇಳುವುದಾದರೆ ಸೋಂಕುಳ್ಳ ರೋಗಿಗಳು ಅಂದರೆ ಸಾಕಷ್ಟು ಸಾಂದ್ರತೆಯಲ್ಲಿ ರೋಗವಾಹಕ ಜಾತಿಗೆ ಸೇರಿದ ಸೊಳ್ಳೆಗಳು, ಸೂಕ್ತ ಹವಾಮಾನ ಅಂಶಗಳುಳ್ಳ ಸ್ಥಳ (ಸೊಳ್ಳೆಗಳು ಹುಟ್ಟಿ, ಬದುಕಿ ಬಾಳಲವಕಾಶ ಕಲ್ಪಿಸುವ ವಾತಾವರಣ) ಕಡೇಪಕ್ಷ ಹತ್ತು ಹದಿನೈದು ದಿನಗಳಾದರೂ ಬದುಕಿ ಉಳಿಯಲು ಸೂಕ್ತ ಸ್ಥಿತಿಗತಿಗಳು ಮತ್ತು ಕಡೆಯದಾಗಿ ರೋಗವನ್ನು ಅಂಟಿಸಿಕೊಳ್ಳಲು ಆಶ್ರಯದಾತ ಈ ಸಂದರ್ಭಗಳೆಲ್ಲವೂ ಒಂದಿಗೇ ಸೇರಿಕೊಂಡು ಒದಗಿದಾಗ ರೋಗ ಕಾಣಿಸಿಕೊಂಡು ಸೋಂಕು ಹರಡುತ್ತದೆ. ರೋಗದ ಸೋಂಕು ಅಂಟಿದ ಸೊಳ್ಳೆ ಕಚ್ಚಿದ ದಿನದಿಂದ ವ್ಯಕ್ತಿಯಲ್ಲಿ ಚಿಹ್ನೆ, ಗುಣಲಕ್ಷಣಗಳು ಹೊರಕಾಣಿಸಿಕೊಳ್ಳುವ ಕಾಲಾವಧಿ ಸುಮಾರು ಹತ್ತರಿಂದ ಹದಿನಾಲ್ಕು ದಿನಗಳೆಂದು ಹೇಳಬಹುದು.

**ನಿರ್ಮೂಲನ ಯೋಜನೆಯ ಉದ್ದಿಶ್ಯ:** ರೋಗವನ್ನು ಮೂಲೋತ್ಪಾಟನೆ ಮಾಡುವುದು ಅಂದರೆ ಮನುಷ್ಯನಲ್ಲಿ ಮತ್ತು ಸೊಳ್ಳೆಗಳಲ್ಲಿರುವ ರೋಗಕಾರಕ ಪರಾವಲಂಬಿಗಳನ್ನು ಸಂಪೂರ್ಣ ನಾಶಪಡಿಸುವುದು, ನಿಗದಿ ಮಾಡಿರುವ ಅವಧಿಯಲ್ಲಿ ಸೋಂಕು ತಗುಲುವುದನ್ನು ತಡೆ ಹಾಕುವುದು ಹಾಗೂ ಎಷ್ಟರಮಟ್ಟಿಗೆ ಈ ಕಾರ್ಯಕ್ರಮ ಪರಿಪೂರ್ಣ ಹೊಂದಿರಬೇಕೆಂದರೆ, ಯೋಜನೆ ಕಡೇ ಹಂತ ಮುಟ್ಟುವ ವೇಳೆಗೆ ಸೋಂಕು ಪುನಃ ಎಲ್ಲಿಯೂ ಕಾಣಿಸಿಕೊಳ್ಳಲು ಕಿಂಚಿತ್ ಅವಕಾಶವೂ ಇರಬಾರದು. ಇದು ಮಲೇರಿಯಾ ನಿರ್ಮೂಲನದ ಗುರಿ ಎಂದು ವಿಶ್ವ ಆರೋಗ್ಯ ಸಂಸ್ಥೆಯ ತಜ್ಞರು ಸಾರಿದ್ದಾರೆ. ನಿರ್ಮೂಲನಾ ಯೋಜನೆ 1958ರ ಏಪ್ರಿಲ್ 1, ಕಾರ್ಯಾಚರಣೆಗೆ ಬಂತು.

ಮಲೇರಿಯಾ ರೋಗ ಇಡೀ ಜನಾಂಗದ ರಕ್ತವನ್ನೇ ಹೀರಿ ಅಶಕ್ತರನ್ನಾಗಿ ಮಾಡಿ ದೇಶದ ಆರ್ಥಿಕ ಸ್ಥಿತಿಯನ್ನೇ ಹದಗೆಡಿಸಿ ಹಾಳುಮಾಡುವ ಭಯಂಕರ ರೋಗ. ಈ ರೋಗವನ್ನು ಬಹುಮಟ್ಟಿಗೆ ತಹಬದಿಗೆ ತರಲಾಗಿದೆ ಯಾದರೂ ಪೂರ್ಣ ನಿರ್ಮೂಲನೆಯಾಗಿದೆ ಎಂದು ಹೇಳಲು ಆಗುವುದಿಲ್ಲ. ಇತ್ತೀಚೆಗೆ ರೋಗ ಅಲ್ಲಲ್ಲೆ ಪಿಡುಗು ರೂಪದಲ್ಲಿ ಕಂಡುಬಂದು ಬಯಸಿದಷ್ಟು ಪ್ರಗತಿಯನ್ನು ಸಾಧಿಸಲಾಗಿಲ್ಲ. ಈ ರೀತಿಯ ಬೃಹತ್ ಯೋಜನೆ ಸಫಲಗೊಳಿಸಲು ಕೇವಲ ಸಂಪನ್ಮೂಲ ಒಂದರಿಂದಲೇ ಸಾಧ್ಯವಿಲ್ಲ. ತಜ್ಞರ ತಂಡ, ಸೇವಾನಿಷ್ಠೆ, ಕಾರ್ಯತತ್ಪರತೆ ಹಾಗೂ ಎಲ್ಲಕ್ಕೂ ಮಿಗಿಲಾಗಿ ಜನಸಾಮಾನ್ಯರ ಸಹಕಾರ, ಉತ್ತೇಜನ, ಅತ್ಯವಶ್ಯಕ. ಎಲ್ಲಿಯವರೆಗೆ ಈ ಕೊರತೆಗಳೆಲ್ಲ ಕಂಡುಬರುತ್ತವೆಯೋ ಅಲ್ಲಿಯವರೆಗೆ ಮಲೇರಿಯಾ ರೋಗದ ಮೇಲೋತ್ಪಾಟನೆ ಸಾಧ್ಯವಾಗಲಾರದು. ಅತಿ ಶೀಘ್ರದಲ್ಲಿ ಮಲೇರಿಯಾ ನಿರ್ಮೂಲನವಾಗಲೆಂದು ಹಾರೈಸೋಣ.

❑

# ಮುಸುಕಿನ ಜೋಳದ ಮಹತ್ವ

– ಸಾವಿತ್ರಿ*

ಮುಸುಕಿನ ಜೋಳದ ಮಹತ್ವ ಕುರಿತು ಮಾಹಿತಿ.

ಮುಸುಕಿನ ಜೋಳದ ಮಹತ್ವವನ್ನುಅದು ಮುಸುಕು ಹೊದ್ದು ತನ್ನ ಗುಣಗಳನ್ನು ಮರೆಮಾಚಿಕೊಂಡಿರುವುದೇ ಸಾಕ್ಷಿ.

ಆದಿ ಮಾನವ ತನ್ನ ಹಸಿವನ್ನು ನೀಗಿಸಿಕೊಳ್ಳಲು ಕಾಡಿನಲ್ಲಿ ದೊರೆಯುತ್ತಿದ್ದ ಹಣ್ಣು, ಗೆಡ್ಡೆ–ಗೆಣಸುಗಳನ್ನು ತಿಂದು ಕಾಲ ಕಳೆಯುತ್ತಿದ್ದ. ಕ್ರಮೇಣ ಬೆಣಚು ಕಲ್ಲುಗಳನ್ನು ಬಳಸಿ ಬೆಂಕಿ ತಯಾರಿಸಿ ತಾನು ಕೊಂದ ಪ್ರಾಣಿ ಪಕ್ಷಿಗಳನ್ನು, ಗೆಡ್ಡೆ–ಗೆಣಸನ್ನು ಸುಟ್ಟು ಜೀರ್ಣಕ್ರಿಯೆಗೆ ಅನುಕೂಲ ಹಾಗೂ ರುಚಿಯನ್ನು ಕಂಡುಕೊಂಡನು. ನಂತರ ಕಾಡಿನಲ್ಲಿ ದೊರಕುತ್ತಿದ್ದ ಸಾಂಬಾರ ಪದಾರ್ಥ ಮುಂತಾದುವನ್ನು ಬಳಸಿ ಪದಾರ್ಥಗಳನ್ನು ಬೇಯಿಸುವುದು, ಹುರಿಯುವುದು, ರುಬ್ಬುವುದು, ಹಬೆಯಲ್ಲಿ ಬೇಯಿಸುವುದು, ಮುಂತಾದ ಆವಿಷ್ಕಾರಗಳನ್ನು ಕಂಡುಕೊಂಡನು. ಇದರಲ್ಲಿ ರೈತ ಸುಲಭವಾಗಿ ಬೆಳೆಯುಬಹುದಾದ ಮುಸುಕಿನ ಜೋಳವನ್ನು ಸಾಮಾನ್ಯವಾಗಿ ಜನ ಸುಟ್ಟು ತಿನ್ನುವುದು ಹಾಗೂ ಉಪ್ಪು ಹಾಕಿ ಬೇಯಿಸಿ ತಿನ್ನುತ್ತಾರೆ. ಸ್ವಲ್ಪ ಮುಂದುವರಿದು ಜೋಳದ ಅವಲಕ್ಕಿ, ವಿವಿಧ ವಸ್ತುಗಳನ್ನು blend ಮಾಡಿ cornflake ಮುಂತಾದ ಪದಾರ್ಥಗಳನ್ನು ತಯಾರಿಸಿ ಮಾರುಕಟ್ಟೆಗೆ ಬಿಡುಗಡೆ ಮಾಡಿರುತ್ತಾರೆ. ಆದರೆ ಅಡುಗೆಯಲ್ಲಿ ಇದರ ಪಾತ್ರ ಇತರೆ ದವಸ ಧಾನ್ಯಗಳಷ್ಟು ಇಲ್ಲ, ತೀರಾ ಕಡಿಮೆ. ಇದರಲ್ಲಿ ನಾರಿನ ಅಂಶ ಹೇರಳವಾಗಿದ್ದು, ಮಧುಮೇಹಿಗಳಿಗೆ ವರದಾನವಾಗಿದೆ. ಇದನ್ನು ಬಳಕೆ ಮಾಡಿ ವಿವಿಧ ಭಕ್ಷ್ಯಗಳನ್ನು ತಯಾರಿಸಬಹುದು. ಕಡಿಮೆ ಖರ್ಚಿನ, ಆರೋಗ್ಯಕರ, ಮಾಡಲು ಸುಲಭವಾದ ಸಿಹಿ ತಿಂಡಿಗಳಾಗಿರುತ್ತದೆ.

## 1 ಕಪ್ ಮುಸುಕಿನ ಜೋಳದಲ್ಲಿರುವ ಆಹಾರಾಂಶಗಳು

1) ಎಲ್ಲಾ ಜೋಳಗಳಿಗಿಂತಲೂ ಆರೋಗ್ಯಕ್ಕೆ ಪೂರಕವಾದ ಪ್ರತಿರೋಧಕ ಶಕ್ತಿ (anti-oxidant) ದೊರಕುತ್ತದೆ.
2) ಮುಸುಕಿನ ಜೋಳದಲ್ಲಿ ನಾರಿನ ಅಂಶ ಹೇರಳವಾಗಿದೆ. (14.3%)
3) ವಿಟಮಿನ್ 'ಸಿ' 13.6%, ವಿಟಮಿನ್ 'ಬಿ' 312.5%, ಮ್ಯಾಂಗನೀಸ್ 12.5%, ವಿಟಮಿನ್ 'ಬಿ' 511.8%, ಕ್ಯಾಲೋರಿಸ್ (143)7% ಹೇರಳವಾಗಿರುತ್ತದೆ.

❑

* ಸಹಾಯಕ ನಿರ್ದೇಶಕರು (ಸ್ವಉಕಾ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

# ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 281 ಗ್ರಾಪಂಅ 2011 (ಭಾಗ)

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ: 16–11–2012

## ಸುತ್ತೋಲೆ

**ವಿಷಯ** : ಮಕ್ಕಳ ಗ್ರಾಮ ಸಭೆಗಳಲ್ಲಿ ಮಕ್ಕಳ ಅನೈತಿಕ ಸಾಗಾಟ ತಡೆಗಟ್ಟಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ.

**ಉಲ್ಲೇಖ** :

1. ಸರ್ಕಾರದ ಸುತ್ತೋಲೆ ಸಂಖ್ಯೆ : ಗ್ರಾಅಪ 638 ಗ್ರಾಪಂಅ 2007, ದಿನಾಂಕ : 30–10–2007.
2. ಸರ್ಕಾರದ ಸುತ್ತೋಲೆ ಸಂಖ್ಯೆ : ಗ್ರಾಅಪ 8 ಗ್ರಾಪಂಅ 2012, ದಿನಾಂಕ : 08–03–2012.
3. ಸರ್ಕಾರದ ಕಾರ್ಯದರ್ಶಿ (ಪಂ.ರಾಜ್) ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ರವರ ಅ.ಸ.ಪತ್ರ ಸಂಖ್ಯೆ : ಗ್ರಾಅಪ 281 ಗ್ರಾಪಂಅ 2011 (ಭಾಗ) ದಿನಾಂಕ :31–10–2012.
4. ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು ರವರ ಅ.ಸ. ಪತ್ರ ಸಂಖ್ಯೆ : ಮಮಇ 131 ಮಭಾಬ 2012 ದಿನಾಂಕ : 09–11–2012

* * *

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಪ್ರತಿ ವರ್ಷ ನವೆಂಬರ್ ತಿಂಗಳಲ್ಲಿ ಮಕ್ಕಳ ಹಕ್ಕುಗಳ ದಿನಾಚರಣೆ ಹಮ್ಮಿಕೊಳ್ಳಲು ಮತ್ತು ಈ ತಿಂಗಳಲ್ಲಿ ಒಂದು ದಿನವನ್ನು ವಿಶೇಷ ಗ್ರಾಮ ಸಭೆ ನಡೆಸಲು ಮೀಸಲಿಡಬೇಕೆಂದು ಉಲ್ಲೇಖ (1) ರ ಸುತ್ತೋಲೆಯಲ್ಲಿ ಸವಿವರವಾಗಿ ವಿವರಿಸಲಾಗಿದೆ.

ರಾಜ್ಯದಲ್ಲಿನ ಗ್ರಾಮ ಪಂಚಾಯಿತಿಗಳು ಪ್ರತಿ ವರ್ಷ ವಾರ್ಡ್ ಸಭೆ ಮತ್ತು ಗ್ರಾಮ ಸಭೆಗಳನ್ನು ನಡೆಸುವ ಬಗ್ಗೆ ಉಲ್ಲೇಖ (2)ರಸುತ್ತೋಲೆಯಲ್ಲಿ ಸವಿವರವಾಗಿ ತಿಳಿಸಲಾಗಿದೆ. ಉಲ್ಲೇಖ (3) ರ ಅರೆ ಸರ್ಕಾರಿ ಪತ್ರದಲ್ಲಿ 2012–13ನೇ ಸಾಲಿನಲ್ಲಿ ಮಕ್ಕಳ ಗ್ರಾಮ ಸಭೆಗಳನ್ನು ನವೆಂಬರ್ ಮಾಹೆಯಲ್ಲಿ ಆಯೋಜಿಸುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ತಿಳಿಸಲಾಗಿದೆ.

ರಾಜ್ಯದಲ್ಲಿ ಮಕ್ಕಳ ಅನೈತಿಕ ಸಾಗಾಟವು ನಡೆಯುತ್ತಿರುವುದಾಗಿ ಆಗಿಂದಾಗ್ಗೆ ಪತ್ರಿಕೆಗಳಲ್ಲಿ ವರದಿಯಾಗುತ್ತಿದ್ದು, ಈ ಸಂಬಂಧ ಮಹಿಳೆಯರ ಮತ್ತು ಮಕ್ಕಳ ಅನೈತಿಕ ಸಾಗಾಟದ ವಿರುದ್ಧ ಜನರಲ್ಲಿ ಅರಿವು ಮೂಡಿಸಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು್ಲ ನವೆಂಬರ್ 2012 ರ ಬೃಹತ್ ಆಂದೋಲನವನ್ನು ಹಮ್ಮಿಕೊಂಡಿರುತ್ತದೆ. ಈ ಹಿನ್ನೆಲೆಯಲ್ಲಿ 2012 ರ ನವೆಂಬರ್ ಮಾಹೆಯಲ್ಲಿ ನಡೆಸುವ ಮಕ್ಕಳ ಗ್ರಾಮ ಸಭೆಗಳಲ್ಲಿ ಮಕ್ಕಳ ಅನೈತಿಕ ಸಾಗಾಟ ತಡೆಗಟ್ಟಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚಿಸಲು ಅಗತ್ಯ ಕ್ರಮಕೈಗೊಳ್ಳುವಂತೆ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಿದೆ.

(ವಿ. ರಶ್ಮಿ)
ಸರ್ಕಾರದ ಕಾರ್ಯದರ್ಶಿ (ಪಂ. ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ :** 2012–13ನೇ ಸಾಲಿನ ಶಾಸನಬದ್ಧ ಅನುದಾನದ ಮೂರನೇ ತ್ರೈಮಾಸಿಕ ಕಂತನ್ನು ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ :**

1) ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 129 ಗ್ರಾಪಂಕಾ 2002 (3), ದಿನಾಂಕ : 2–12–2003.
2) ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 234 ಗ್ರಾಪಂಅ 2007, ದಿನಾಂಕ : 27–3–2008.
3) ಆರ್ಥಿಕ ಇಲಾಖೆ ಅ.ಟಿ.ಸಂಖ್ಯೆ : ಆಇ 263 ವೆಚ್ಚ–6/2012, ದಿನಾಂಕ : 30–05–2012.
4) ಇದೇ ಸಮ ಸಂಖ್ಯೆಯ ಸರ್ಕಾರದ ಆದೇಶ, ದಿನಾಂಕ : 23–06–2012.
5) ಆರ್ಥಿಕ ಇಲಾಖೆ ಅ.ಟಿ.ಸಂಖ್ಯೆ : ಆಇ 263 ವೆಚ್ಚ–6/2012, ದಿನಾಂಕ : 07–08–2012.
6) ಇದೇ ಸಮ ಸಂಖ್ಯೆಯ ಸರ್ಕಾರದ ಆದೇಶ, ದಿನಾಂಕ : 14–08–2012.
7) ಆರ್ಥಿಕ ಇಲಾಖೆಯ ಅ.ಟಿ. ಸಂಖ್ಯೆ: ಆಇ 263 ವೆ–06/2012, ದಿನಾಂಕ : 20–10–2012.

* * *

**ಪ್ರಸ್ತಾವನೆ :**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಸರ್ಕಾರದ ಆದೇಶದಲ್ಲಿ ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡುವ ಸರ್ಕಾರದ ಅನುದಾನವನ್ನು ರಾಜ್ಯ ಹುಜೂರು ಖಜಾನೆಯಿಂದ ಪೇಯೀಸ್ ರಸೀದಿ ಮೇಲೆ ಪಡೆದು ರಾಷ್ಟ್ರೀಯ ಬ್ಯಾಂಕುಗಳ ಮುಖಾಂತರ ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡಲು ಸರ್ಕಾರದ ಅಧೀನ ಕಾರ್ಯದರ್ಶಿ (ಜಿ.ಪಂ), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರಿಗೆ ಸರ್ಕಾರವು ಆದೇಶಿಸಿದೆ.

2012–13ನೇ ಸಾಲಿಗೆ ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ಶಾಸನಬದ್ಧ ಅನುದಾನಕ್ಕಾಗಿ ಆಯವ್ಯಯ ಲೆಕ್ಕ ಶೀರ್ಷಿಕೆ 2515–00–198–1–07 (ಯೋಜನೆ) ಅಡಿ ಒಟ್ಟಾರೆ ₹ 46,716.00 ಲಕ್ಷ (ನಲವತ್ತಾರು ಸಾವಿರದ ಏಳುನೂರ ಹದಿನಾರು ಲಕ್ಷ ರೂಪಾಯಿಗಳು) ಗಳನ್ನು ಒದಗಿಸಲಾಗಿದ್ದು, ಈ ಅನುದಾನದಿಂದ ಪ್ರಸಕ್ತ ಆರ್ಥಿಕ ವರ್ಷದ ಮೊದಲನೇ ಹಾಗೂ ಎರಡನೇ ತ್ರೈಮಾಸಿಕ ಅನುದಾನವನ್ನು ಉಲ್ಲೇಖ (4) ಹಾಗೂ (5)ರ ಆದೇಶಗಳಲ್ಲಿ ಬಿಡುಗಡೆ ಮಾಡಲಾಗಿದೆ. 2001ನೇ ವರ್ಷದ ಜನಗಣತಿ ಆಧಾರದ ಮೇಲೆ ಎಂಟು ಸಾವಿರಕ್ಕಿಂತ (8001 ಮತ್ತು ಮೇಲ್ಪಟ್ಟು) ಹೆಚ್ಚಿನ ಜನಸಂಖ್ಯೆ ಇರುವ ಪ್ರತಿ ಗ್ರಾಮ ಪಂಚಾಯಿತಿಗೆ ವಾರ್ಷಿಕವಾಗಿ ತಲಾ ₹ 10.00 ಲಕ್ಷಗಳು ಹಾಗೂ ಎಂಟು ಸಾವಿರ ಮತ್ತು ಅದಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಪ್ರತಿ ಗ್ರಾಮ ಪಂಚಾಯಿತಿಗೆ ತಲಾ ₹ 8.00 ಲಕ್ಷಗಳು ಲಭ್ಯವಾಗುತ್ತದೆ. ಆರ್ಥಿಕ ಇಲಾಖೆಯು ಮೇಲೆ ಓದಲಾದ ಕ್ರಮ ಸಂಖ್ಯೆ (7) ರಲ್ಲಿನ ಸಹಮತಿಯಂತೆ ಗ್ರಾಮ ಪಂಚಾಯಿತಿಗಳಿಗೆ ಮೂರನೇ ತ್ರೈಮಾಸಿಕ ಅನುದಾನ ₹ 11,645.00 ಲಕ್ಷ (ಹನ್ನೊಂದು ಸಾವಿರದ ಆರುನೂರ ನಲವತ್ತೈದು ಲಕ್ಷ ರೂಪಾಯಿ) ಗಳನ್ನು ಬಿಡುಗಡೆ ಮಾಡಲು ಸಹಮತಿ ನೀಡಿದೆ. ಪ್ರಸ್ತುತ ರಾಜ್ಯದಲ್ಲಿ 5627 ಗ್ರಾಮ ಪಂಚಾಯಿತಿಗಳಿದ್ದು, ಇವುಗಳಲ್ಲಿ 782 ಗ್ರಾಮ ಪಂಚಾಯಿತಿಗಳ ಜನ ಸಂಖ್ಯೆಯು ಎಂಟು ಸಾವಿರಕ್ಕಿಂತ ಹೆಚ್ಚಿದ್ದು ಇವುಗಳಿಗೆ ಒಟ್ಟು ₹ 1,955.00 ಲಕ್ಷಗಳ (ಒಂದು ಸಾವಿರದ ಒಂಬೈನೂರ ಐವತ್ತೈದು ಲಕ್ಷ ರೂಪಾಯಿಗಳು) ಹಾಗೂ 4845 ಗ್ರಾಮ ಪಂಚಾಯಿತಿಗಳ ಜನ ಸಂಖ್ಯೆಯು ಎಂಟು ಸಾವಿರಕ್ಕಿಂತ ಕಡಿಮೆಯಿದ್ದು ಇವುಗಳಿಗೆ ಒಟ್ಟು ₹ 9,690.00 ಲಕ್ಷಗಳ (ಒಂಬತ್ತು ಸಾವಿರದ ಆರುನೂರ ತೊಂಬತ್ತು ಲಕ್ಷ ರೂಪಾಯಿಗಳು) ಅನುದಾನವನ್ನು ಬಿಡುಗಡೆ ಮಾಡಲು ಪರಿಶೀಲಿಸಲಾಗಿದ್ದು, ಸದರಿ ಅನುದಾನದ ಪೈಕಿ ಮೇಲೆ ಓದಲಾದ ಕ್ರಮ ಸಂಖ್ಯೆ

(2) ರ ಸರ್ಕಾರದ ಆದೇಶದಂತೆ, ಗ್ರಾಮ ಪಂಚಾಯಿತಿ ಸಿಬ್ಬಂದಿ ವೇತನಕ್ಕಾಗಿ ಶೇಕಡಾ 40 ರಷ್ಟು ಅನುದಾನವನ್ನು ಮತ್ತು ಉಳಿದ ಶೇಕಡಾ 60 ರಷ್ಟನ್ನು ಗ್ರಾಮ ಪಂಚಾಯಿತಿಗಳ ಜುಲೈ 2012ರಿಂದ ಸೆಪ್ಟೆಂಬರ್ 2012ರ ಅವಧಿಯ ವಿದ್ಯುತ್ ಬಿಲ್ ಪಾವತಿಸಲು ಬಿಡುಗಡೆ ಮಾಡಲು ಸರ್ಕಾರವು ನಿರ್ಧರಿಸಿದೆ.

ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 223 ಗ್ರಾಪಂಅ 2012, ಬೆಂಗಳೂರು, ದಿನಾಂಕ : 31-10-2012.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ 2012-13ನೇ ಸಾಲಿನ ಶಾಸನಬದ್ಧ ಅನುದಾನದ ಮೂರನೇ ತ್ರೈಮಾಸಿಕ ಕಂತಿನ ಮೊತ್ತ ₹ 11,645.00 ಲಕ್ಷಗಳನ್ನು (ಹನ್ನೊಂದು ಸಾವಿರದ ಆರು ನೂರ ನಲವತ್ತೈದು ಲಕ್ಷ ರೂಪಾಯಿಗಳು ಮಾತ್ರ) 2012-13 ನೇ ಸಾಲಿನ ಲೆಕ್ಕ ಶೀರ್ಷಿಕೆ 2515-00-198-1-07 (ಯೋಜನೆ) ಅಡಿಯಲ್ಲಿ ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡಿ ಆದೇಶಿಸಿದೆ.

ಈ ಅನುದಾನದ ಮೊತ್ತವನ್ನು ಪೇಯೀಸ್ ರಸೀದಿಯ ಮೇಲೆ ಪಡೆದು ಸಿಂಡಿಕೇಟ್ ಬ್ಯಾಂಕ್, ಬೆಂಗಳೂರು ನಗರ ನೀರು ಸರಬರಾಜು ಮಂಡಳಿ ಶಾಖೆ, ಮೈಸೂರು ಬ್ಯಾಂಕ್ ವೃತ್ತ, ಬೆಂಗಳೂರು ಇಲ್ಲಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಉಳಿತಾಯ ಸಂಖ್ಯೆ 04462010088409 ಮುಖಾಂತರ ರಾಜ್ಯದಲ್ಲಿನ ಎಂಟು ಸಾವಿರಕ್ಕಿಂತ ಹೆಚ್ಚಿನ ಜನಸಂಖ್ಯೆ ಇರುವ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ತಲಾ ₹ 2,50,000.00 (ಎರಡು ಲಕ್ಷದ ಐವತ್ತು ಸಾವಿರ ರೂಪಾಯಿಗಳು ಮಾತ್ರ) ಮತ್ತು ಎಂಟು ಸಾವಿರಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ತಲಾ ₹ 2,00,000.00 ( ಎರಡು ಲಕ್ಷ ರೂಪಾಯಿಗಳು ಮಾತ್ರ) ಗಳಂತೆ ಎರಡನೇ ತ್ರೈಮಾಸಿಕ ಕಂತಿನ ಅನುದಾನವನ್ನು ಈ ಕೆಳಕಂಡ ಮಾದರಿಯಲ್ಲಿ ಗ್ರಾಮ ಪಂಚಾಯಿತಿಗಳಿಗೆ ಅನುಬಂಧದಲ್ಲಿರುವಂತೆ ಬಿಡುಗಡೆ ಮಾಡಲು ಸರ್ಕಾರವು ನಿರ್ಧರಿಸಿದೆ.

1. ಎಂಟು ಸಾವಿರಕ್ಕಿಂತ ಹೆಚ್ಚಿನ ಜನಸಂಖ್ಯೆ ಇರುವ ಪ್ರತಿ ಗ್ರಾಮ ಪಂಚಾಯಿತಿಗೆ ಬಿಡುಗಡೆ ಮಾಡುವ ₹ 2,50,000.00 (ಎರಡು ಲಕ್ಷದ ಐವತ್ತು ಸಾವಿರ ರೂಪಾಯಿಗಳು ಮಾತ್ರ) ಅನುದಾನದ ಪೈಕಿ ಶೇಕಡಾ 60 ರಷ್ಟು ಅಂದರೆ ₹ 1,50,000.00 (ಒಂದು ಲಕ್ಷದ ಐವತ್ತು ಸಾವಿರ ರೂಪಾಯಿಗಳು ಮಾತ್ರ) ನ್ನು ಮತ್ತು ಎಂಟು ಸಾವಿರಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಪ್ರತಿ ಗ್ರಾಮ ಪಂಚಾಯಿತಿಗೆ ಬಿಡುಗಡೆ ಮಾಡುವ ₹ 2,00,000.00 (ಎರಡು ಲಕ್ಷ ರೂಪಾಯಿಗಳು ಮಾತ್ರ) ಅನುದಾನದ ಪೈಕಿ ಶೇಕಡಾ 60 ರಷ್ಟು ಅಂದರೆ ₹ 1,20,000.00 (ಒಂದು ಲಕ್ಷದ ಇಪ್ಪತ್ತು ಸಾವಿರ ರೂಪಾಯಿಗಳು ಮಾತ್ರ) ನ್ನು ಜುಲೈ 2012 ರಿಂದ ಸೆಪ್ಟೆಂಬರ್ 2012 ರ ಅವಧಿಯ ವಿದ್ಯುತ್ ಬಿಲ್ ಪಾವತಿಸುವ ಸಲುವಾಗಿ ಮೇಲ್ಕಂಡ ಸಿಂಡಿಕೇಟ್ ಬ್ಯಾಂಕಿನಿಂದ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಬ್ಯಾಂಕ್ ಖಾತೆಯ ನಂಬರ್‌ಗಳಿಗೆ ಆನ್‌ಲೈನ್ ಮುಖಾಂತರ ವರ್ಗಾಯಿಸಲು ಆದೇಶಿಸಿದೆ.

2. ಎಂಟು ಸಾವಿರಕ್ಕಿಂತ ಹೆಚ್ಚಿನ ಜನಸಂಖ್ಯೆ ಇರುವ ಗ್ರಾಮ ಪಂಚಾಯಿತಿಗಳು ಶೇಕಡಾ 40 ರಷ್ಟು ಅನುದಾನವನ್ನು ಅಂದರೆ ₹ 1,00,000.00 (ಒಂದು ಲಕ್ಷ ರೂಪಾಯಿಗಳು ಮಾತ್ರ) ಗಳನ್ನು ಮತ್ತು ಎಂಟು ಸಾವಿರಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಗ್ರಾಮ ಪಂಚಾಯಿತಿಗಳು ₹ 80,000.00 (ಎಂಬತ್ತು ಸಾವಿರ ರೂಪಾಯಿಗಳು ಮಾತ್ರ) ನ್ನು ಮಾತ್ರ ಸಿಬ್ಬಂದಿ ವೇತನಕ್ಕಾಗಿ ಮೇಲ್ಕಂಡ ಸಿಂಡಿಕೇಟ್ ಬ್ಯಾಂಕ್‌ನಿಂದ ನೇರವಾಗಿ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳ ಬ್ಯಾಂಕ್ ಖಾತೆಯ ನಂಬರ್‌ಗಳಿಗೆ ಆನ್‌ಲೈನ್ ಮುಖಾಂತರ ವರ್ಗಾಯಿಸಲು ಆದೇಶಿಸಿದೆ.

ಮೇಲ್ಕಂಡ ಉದ್ದೇಶಗಳಿಗಲ್ಲದೇ ಈ ಅನುದಾನವನ್ನು ಜಿಲ್ಲಾ ಪಂಚಾಯಿತಿ/ಗ್ರಾಮ ಪಂಚಾಯಿತಿಗಳು ಬೇರೆ ಯಾವುದೇ ಉದ್ದೇಶಕ್ಕೆ ವಿನಿಯೋಗಿಸತಕ್ಕದ್ದಲ್ಲ ಹಾಗೂ ಜಿಲ್ಲಾ ಪಂಚಾಯಿತಿಗಳು ವಿದ್ಯುತ್ ಬಿಲ್ ಪಾವತಿಸಲು ಬಿಡುಗಡೆ ಮಾಡಿರುವ ಅನುದಾನದ ವಿವರವನ್ನು ದಿನಾಂಕ : 31–12–2012 ರೊಳಗಾಗಿ ಸರ್ಕಾರಕ್ಕೆ ಕಳುಹಿಸತಕ್ಕದ್ದು.

ಹಲವಾರು ಜಿಲ್ಲಾ ಪಂಚಾಯಿತಿಗಳು ಗ್ರಾಮ ಪಂಚಾಯಿತಿಗಳಿಗೆ ನೀಡಬೇಕಾದ ಶೇಕಡಾ 40ರಷ್ಟು ಅನುದಾನವನ್ನು ಬಿಡುಗಡೆ ಮಾಡುವಲ್ಲಿ 15 ದಿನಗಳಿಂದ 3–4 ತಿಂಗಳುಗಳವರೆಗೆ ವಿಳಂಬ ಮಾಡುತ್ತಿರುವುದು ಮತ್ತು ಈ ಅನುದಾನವನ್ನು ಚೆಕ್ ಅಥವಾ ಡಿ.ಡಿ. ಮುಖಾಂತರ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಆದುದರಿಂದ ಈ ಅನುದಾನವನ್ನು ಜಿಲ್ಲಾ ಪಂಚಾಯಿತಿಗಳಿಗೆ ಬಿಡುಗಡೆ ಮಾಡಿದ ದಿನಾಂಕದಿಂದ 7 ದಿನಗಳೊಳಗೆ ಗ್ರಾಮ ಪಂಚಾಯಿತಿಯ ಖಾತೆಗೆ ಆನ್–ಲೈನ್ ಮುಖಾಂತರ ವರ್ಗಾಯಿಸತಕ್ಕದ್ದು. ಇದರಲ್ಲಿ ಯಾವುದೇ ಲೋಪವಾದಲ್ಲಿ ಸಂಬಂಧಪಟ್ಟವರಿಂದ ವಿಳಂಬದ ಅವಧಿಗೆ ಬಡ್ಡಿ ವಸೂಲಿ ಮಾಡಲು ಕ್ರಮ ವಹಿಸಲಾಗುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ ಆಇ 263 ವೆಚ್ಚ–06/2012, ದಿನಾಂಕ : 20–10–2012 ರಲ್ಲಿ ಸಹಮತಿ ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

ಎಂ.ಲೀನಾ ನರೋನ್ಹ

**(ಮಾರ್ಗರೇಟ್ ಲೀನಾ ನರೋನ್ಹ)**
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

## ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 223 ಗ್ರಾಪಂಅ 2012, ದಿನಾಂಕ : 31-10-2012ರ ಅನುಬಂಧ
## 2012-13ನೇ ಸಾಲಿನಲ್ಲಿ ಗ್ರಾಮ ಪಂಚಾಯಿತಿಗಳಿಗೆ ಮಂಜೂರು ಮಾಡಬೇಕಾಗಿರುವ ಶಾಸನಬದ್ಧ ಅನುದಾನದ ವಿವರ

| ಕ್ರ. ಸಂ. | ಉಪ ಲೆಕ್ಕ ಶೀರ್ಷಿಕೆ | ಜಿಲ್ಲಾ ಪಂಚಾಯಿತಿ ಹೆಸರು | ಗ್ರಾಮ ಪಂಚಾಯಿತಿಗಳ ಸಂಖ್ಯೆ (ಜನಸಂಖ್ಯೆ ಆಧಾರ) | | | ಬಿಡುಗಡೆ ಮಾಡಬೇಕಾಗಿರುವ ಹಣ | | | ತೃತೀಯ ತ್ರೈಮಾಸಿಕ ಅನುದಾನ (ಲಕ್ಷಗಳಲ್ಲಿ) |
|---|---|---|---|---|---|---|---|---|---|
| | | | 8001 ಹಾಗೂ ಮೇಲ್ಪಟ್ಟು | 8000 ಹಾಗೂ ಕಡಿಮೆ | ಒಟ್ಟು | ಪ್ರತಿ ಗ್ರಾ.ಪಂ.ಗೆ ರೂ. 10.00 ಲಕ್ಷದಂತೆ | ಪ್ರತಿ ಗ್ರಾ.ಪಂ.ಗೆ ರೂ. 8.00 ಲಕ್ಷದಂತೆ | ಒಟ್ಟು (ಲಕ್ಷಗಳಲ್ಲಿ) | |
| 01 | 401 | ಬೆಂಗಳೂರು (ನಗರ) | 38 | 48 | 86 | 380.00 | 384.00 | 764.00 | 191.00 |
| 02 | 402 | ಬೆಂಗಳೂರು (ಗ್ರಾ) | 20 | 78 | 98 | 200.00 | 624.00 | 824.00 | 206.00 |
| 03 | 403 | ಚಿತ್ರದುರ್ಗ | 26 | 159 | 185 | 260.00 | 1272.00 | 1532.00 | 383.00 |
| 04 | 404 | ಕೋಲಾರ | 6 | 150 | 156 | 060.00 | 1200.00 | 1260.00 | 315.00 |
| 05 | 405 | ಶಿವಮೊಗ್ಗ | 3 | 257 | 260 | 030.00 | 2056.00 | 2086.00 | 521.50 |
| 06 | 406 | ತುಮಕೂರು | 28 | 293 | 321 | 280.00 | 2344.00 | 2624.00 | 656.00 |
| 07 | 407 | ಮೈಸೂರು | 52 | 183 | 235 | 520.00 | 1464.00 | 1984.00 | 496.00 |
| 08 | 408 | ಚಿಕ್ಕಮಗಳೂರು | 4 | 222 | 226 | 040.00 | 1776.00 | 1816.00 | 454.00 |
| 09 | 409 | ದಕ್ಷಿಣ ಕನ್ನಡ | 40 | 163 | 203 | 400.00 | 1304.00 | 1704.00 | 426.00 |
| 10 | 410 | ಹಾಸನ | 11 | 247 | 258 | 110.00 | 1976.00 | 2086.00 | 521.50 |
| 11 | 411 | ಕೊಡಗು | 3 | 95 | 98 | 030.00 | 760.00 | 790.00 | 197.50 |
| 12 | 412 | ಮಂಡ್ಯ | 23 | 209 | 232 | 230.00 | 1672.00 | 1902.00 | 475.50 |
| 13 | 413 | ಬೆಳಗಾಂ | 119 | 366 | 485 | 1190.00 | 2928.00 | 4118.00 | 1029.50 |
| 14 | 414 | ಬಿಜಾಪುರ | 42 | 157 | 199 | 420.00 | 1256.00 | 1676.00 | 419.00 |
| 15 | 415 | ಧಾರವಾಡ | 17 | 110 | 127 | 170.00 | 880.00 | 1050.00 | 262.50 |
| 16 | 416 | ಉತ್ತರ ಕನ್ನಡ | 13 | 194 | 207 | 130.00 | 1552.00 | 1682.00 | 420.50 |
| 17 | 417 | ಗುಲ್ಬರ್ಗ | 30 | 190 | 220 | 300.00 | 1520.00 | 1820.00 | 455.00 |
| 18 | 418 | ಬಳ್ಳಾರಿ | 43 | 146 | 189 | 430.00 | 1168.00 | 1598.00 | 399.50 |
| 19 | 419 | ಬೀದರ್ | 26 | 149 | 175 | 260.00 | 1192.00 | 1452.00 | 363.00 |
| 20 | 420 | ರಾಯಚೂರು | 47 | 117 | 164 | 470.00 | 936.00 | 1406.00 | 351.50 |
| 21 | 421 | ಯಾದಗಿರಿ | 16 | 101 | 117 | 160.00 | 808.00 | 968.00 | 242.00 |
| 22 | 451 | ದಾವಣಗೆರೆ | 18 | 212 | 230 | 180.00 | 1696.00 | 1876.00 | 469.00 |
| 23 | 452 | ರಾಮನಗರ | 11 | 119 | 130 | 110.00 | 952.00 | 1062.00 | 265.50 |
| 24 | 453 | ಚಿಕ್ಕಬಳ್ಳಾಪುರ | 5 | 146 | 151 | 050.00 | 1168.00 | 1218.00 | 304.50 |
| 25 | 456 | ಚಾಮರಾಜನಗರ | 20 | 100 | 120 | 200.00 | 800.00 | 1000.00 | 250.00 |
| 26 | 457 | ಉಡುಪಿ | 26 | 120 | 146 | 260.00 | 960.00 | 1220.00 | 305.00 |
| 27 | 461 | ಬಾಗಲಕೋಟೆ | 33 | 128 | 161 | 330.00 | 1024.00 | 1354.00 | 338.50 |
| 28 | 462 | ಗದಗ | 12 | 94 | 106 | 120.00 | 752.00 | 872.00 | 218.00 |
| 29 | 463 | ಹಾವೇರಿ | 16 | 192 | 208 | 160.00 | 1536.00 | 1696.00 | 424.00 |
| 30 | 466 | ಕೊಪ್ಪಳ | 34 | 100 | 134 | 340.00 | 800.00 | 1140.00 | 285.00 |
| | | **ಒಟ್ಟು** | **782** | **4845** | **5627** | **7820.00** | **38760.00** | **46580.00** | **11645.00** |

**(ಮಾರ್ಗರೇಟ್ ಲೀನಾ ನರೋನ್ಹ)**
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

# ಕರ್ನಾಟಕ ಸರ್ಕಾರ

ಸಂಖ್ಯೆ : ಗ್ರಾಅಪ 223 ಗ್ರಾಪಂಅ 2012

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ : 16–11–2012.

## ತಿದ್ದೋಲೆ

2012–13ನೇ ಸಾಲಿನ ಶಾಸನಬದ್ಧ ಅನುದಾನದ ಮೂರನೇ ತ್ರೈಮಾಸಿಕ ಕಂತನ್ನು ಬಿಡುಗಡೆ ಮಾಡಿರುವ ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 223 ಗ್ರಾಪಂಅ 2012, ದಿನಾಂಕ : 31–10–2012 ರಲ್ಲಿನ ಪ್ರಸ್ತಾವನೆಯ ಹಾಗೂ ಆದೇಶದ ಭಾಗದಲ್ಲಿ "ಜುಲೈ 2012ರಿಂದ ಸೆಪ್ಟೆಂಬರ್ 2012ರ ಅವಧಿಗೆ" ಎಂಬುದರ ಬದಲಿಗೆ "ಅಕ್ಟೋಬರ್ 2012 ರಿಂದ ಡಿಸೆಂಬರ್ 2012ರ ಅವಧಿಗೆ" ಎಂದು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

ಎಂ.ಲೀನಾ ನರೋನ್ಹ

**(ಮಾರ್ಗರೇಟ್ ಲೀನಾ ನರೋನ್ಹ)**
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ



ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ಎಸ್.ಜಿ.ಎಸ್.ವೈ. ಯೋಜನೆಯಡಿ
ಸ್ವ ಸಹಾಯ ಗುಂಪಿನ ಮಹಿಳೆಯರು, ಕುರಿ ಉಣ್ಣೆ ಕಚ್ಚಾ ಸಾಮಗ್ರಿ ಹಾಗೂ
ಆದರಿಂದ ಅವರು ತಯಾರಿಸಿದ ಉತ್ಪನಗಳು



# KARNATAKA VIKAS : DECEMBER 2012

A Monthly Magazine for Rural Development and Panchayat Raj Department, Government of Karnataka

Regd. No. KA/BGGPO/2531/2012-14, Licence to post "Without Prepayment" WPP-32

RNI No. 28103/1974 Total No. of Page 52. Posted at Bangalore GPO on 9th,10th,11th of every month






**Published by :**
Director (Panchayat Raj)
Rural Development and
Panchayat Raj Department

**Name of the Printer :**
Nagasundar

**Printed by :**
GEETANJALI GRAPHICS
B-71 (New No. 84), KSSIDC Indl. Estate, 6th Block
Rajajinagar, Bengaluru-10. Tel : 23404232

**Place & Publication :**
KARNATAKA VIKAS
No. 309, 3rd Floor Gate No. 1, Multistoried Building
Dr. Ambedkar Veedhi, Bengaluru-560 001

**Owned by :**
Director (Panchayat Raj)
Rural Development and
Panchayat Raj Department

**Name of the Editor :**
Y. Mahankalappa

ಬೆಲೆ : 5 ರೂಪಾಯಿಗಳು
Price : Rs. 5-00